ಬುಧವಾರ, ನವೆಂಬರ್ 17, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮನೆ ಬಾಗಿಲಿಗೆ ಪಡಿತರ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕೋಲ್ಕತ್ತದಲ್ಲಿ ಮಂಗಳವಾರ 'ಮನೆ ಬಾಗಿಲಿಗೆ ಪಡಿತರ' ಯೋಜನೆಗೆ ಚಾಲನೆ ನೀಡಿದರು



ಬುಧವಾರ, ನವೆಂಬರ್ 17, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 318 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಬ್ಯಾಂಕ್‌ನಲ್ಲಿಟ್ಟ ಹಣ ಕಳೆದುಕೊಂಡರೆ ಅದಕ್ಕೆ ಬ್ಯಾಂಕ್ ಜವಾಬ್ದಾರನಾಗುತ್ತದೆ. ಆದರೆ, ಕ್ರಿಪ್ಟೋಕರೆನ್ಸಿ ವಿಕೇಂದ್ರಿತ ವ್ಯವಸ್ಥೆ. ಇಲ್ಲಿ ಯಾರೂ ಯಾರನ್ನೂ ನಿಯಂತ್ರಿಸುವುದಿಲ್ಲ.



ಆಳ-ಅಗಲ
ದ್ರಾವಿಡ್ ಮುಂದೆ ಸಾಲು ಸಾಲು ಸವಾಲು

ಕೋವಿಡ್: 5 ಜಿಲ್ಲೆಗಳಲ್ಲಿ ಪ್ರಕರಣ ಒಂದಂಕಿ 10

ತಾಪ ಹೆಚ್ಚಿದರೆ ಕೋಲಾರದಲ್ಲೂ ಪ್ರವಾಹ ! 4

ಸೆನ್ಸೆಕ್ಸ್	ನಿಫ್ಟಿ	₹/$
60,322 ▼	17,999 ▼	74.37 ▲

‘ಜನರ ಹಸಿವು ನೀಗಿಸಿ’

ಸಮುದಾಯ ಕ್ಯಾಂಟೀನ್‌ಗೆ ಯೋಜನೆ ರೂಪಿಸಿ: ಕೇಂದ್ರಕ್ಕೆ ‘ಸುಪ್ರೀಂ’ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜನರ ಹಸಿವು ಮತ್ತು ಅಪೌಷ್ಟಿಕತೆ ನೀಗಿಸುವುದಕ್ಕೆ ಸಮುದಾಯ ಭೋಜನಾಲಯಗಳನ್ನು (ಕ್ಯಾಂಟೀನ್) ಆರಂಭಿಸುವ ಯೋಜನೆ ಸಿದ್ಧಪಡಿಸಲು ವಿಫಲವಾದ ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಮಂಗಳವಾರ ತರಾಟೆಗೆ ತೆಗೆದುಕೊಂಡಿದೆ. ಜನರು ಹಸಿವಿನಿಂದ ಸಾಯದಂತೆ ನೋಡಿಕೊಳ್ಳುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಯಾವುದೇ ಸರ್ಕಾರದ ಮೊದಲ ಹೊಣೆಗಾರಿಕೆ ಎಂದು ಕೋರ್ಟ್ ಹೇಳಿದೆ.

ಸಮುದಾಯ ಭೋಜನಾಲಯಗಳ ಸ್ಥಾಪನೆಯ ಯೋಜನೆ ರೂಪಿಸಲು ಮೂರು ವಾರಗಳ ಗಡುವನ್ನು ಕೇಂದ್ರಕ್ಕೆ ನೀಡಲಾಗಿದೆ. ಯೋಜನೆ ರೂಪಿಸುವಿಕೆ ಪ್ರಕ್ರಿಯೆಯಲ್ಲಿ ರಾಜ್ಯಗಳ ಜತೆ ಸಮಾಲೋಚನೆ ನಡೆಸುವಂತೆಯೂ ಕೋರ್ಟ್ ಸೂಚನೆ ನೀಡಿದೆ.

ಕೇಂದ್ರವು ಸಲ್ಲಿಸಿದ ಪ್ರಮಾಣ ಪತ್ರಗಳು ಮತ್ತು ಹೇಳಿಕೆಗಳನ್ನು ಗಮನಿಸಿದರೆ, ಸಲಹೆಗಳನ್ನು ಕಲೆ ಹಾಕುವ ಪ್ರಕ್ರಿಯೆಯೇ ಇನ್ನೂ ನಡೆಯುತ್ತಿರುವಂತೆ ಕಾಣಿಸುತ್ತಿದೆ. ಯೋಜನೆಯನ್ನು ಜಾರಿಗೊಳಿಸುವ ಯೋಚನೆಯೇ ಸರ್ಕಾರಕ್ಕೆ ಇದ್ದಂತಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಎನ್. ವಿ. ರಮಣ ನೇತೃತ್ವದ ಪೀಠವು ಅತೃಪ್ತಿ ವ್ಯಕ್ತಪಡಿಸಿದೆ.

ಮುಖ್ಯಾಂಶಗಳು

- ಕೇಂದ್ರಕ್ಕೆ ಮೂರು ವಾರಗಳ ಗಡುವು ಕೊಟ್ಟ ನ್ಯಾಯಾಲಯ
- ವಿವಿಧ ರಾಜ್ಯಗಳಲ್ಲಿರುವ ಮಾದರಿ ಪರಿಶೀಲಿಸಲು ಸಲಹೆ
- ಕೇಂದ್ರದ ವಿಳಂಬ ಧೋರಣೆಗೆ ಆಕ್ಷೇಪ

ಕೋವಿಡ್ ಸಾಂಕ್ರಾಮಿಕವು ಜನರನ್ನು ಸಂಕಷ್ಟಕ್ಕೆ ತಳ್ಳಿದೆ. ಇಂತಹ ಸಂದರ್ಭದಲ್ಲಿ ಜನರ ಆಹಾರ ಭದ್ರತೆಯನ್ನು ಖಾತರಿಪಡಿಸಬೇಕು. ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕ್ಯಾಂಟೀನ್‌ಗಳನ್ನು ಸ್ಥಾಪಿಸಿ, ಜನರಿಗೆ ಸಬ್ಸಿಡಿ ದರದಲ್ಲಿ ಆಹಾರ ದೊರೆಯುವಂತೆ ಮಾಡಲು ಸರ್ಕಾರಕ್ಕೆ ಸೂಚಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತರಾದ ಅನುನ್ ಧವನ್, ಇಶಾನ್ ಧವನ್ ಮತ್ತು ಕುಂಜನಾ ಸಿಂಗ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಕೋರ್ಟ್ ನಡೆಸಿತು.

‘ಹಸಿವು, ಅಪೌಷ್ಟಿಕತೆ ಭಿನ್ನ’



‘ಹಸಿವು ಮತ್ತು ಅಪೌಷ್ಟಿಕತೆ ಎರಡು ಭಿನ್ನ ವಿಚಾರಗಳು. ಈ ಎರಡನ್ನೂ ಮಿಶ್ರಣ ಮಾಡಬೇಡಿ. ಅಪೌಷ್ಟಿಕತೆಯ ಬಗ್ಗೆ ಬಂದಿರುವ ಅಂತರರಾಷ್ಟ್ರೀಯ ಸೂಚ್ಯಂಕಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ನಮ್ಮ ಉದ್ದೇಶ ಇರುವುದು ದೇಶದಲ್ಲಿ ಹಸಿವು ಇಲ್ಲದಂತೆ ಮಾಡುವುದು’ ಎಂದು ಪೀಠವು ಹೇಳಿದೆ.

‘ರಾಜ್ಯಗಳು ಸಹಕರಿಸಬೇಕು’: ಯೋಜನೆ ರೂಪಿಸಲು ನೀಡಿರುವ ಮೂರು ವಾರಗಳ ಗಡುವು ರಾಜ್ಯಗಳಿಗೂ ಸ್ವೀಕಾರಾರ್ಹ. ರಾಜ್ಯ ಸರ್ಕಾರಗಳಿಗೆ ಏನಾದರೂ ಆಕ್ಷೇಪ ಇದ್ದರೆ ಮುಂದಿನ ವಿಚಾರಣೆಯ ಸಂದರ್ಭದಲ್ಲಿ ಪರಿಶೀಲನೆ ನಡೆಸಲಾಗುವುದು. ಎಲ್ಲ ರಾಜ್ಯಗಳೂ ಕೇಂದ್ರದ ಜತೆಗೆ ಸಹಕರಿಸಬೇಕು ಎಂದು ಕೋರ್ಟ್ ಹೇಳಿದೆ.

ಉತ್ತರ ಪ್ರದೇಶ, ಮಧ್ಯ ಪ್ರದೇಶ, ಬಿಹಾರ, ಮಹಾರಾಷ್ಟ್ರ ಮತ್ತು ಒಡಿಶಾ ರಾಜ್ಯಗಳು ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ಪೀಠ ಸೂಚಿಸಿದೆ.

ಹಲವು ರಾಜ್ಯಗಳಲ್ಲಿ ಜಾರಿಯಲ್ಲಿರುವ ಸಮುದಾಯ ಭೋಜನಾಲಯಗಳ ಮಾದರಿಯಲ್ಲಿ ದೇಶದಾದ್ಯಂತ ಸಮುದಾಯ ಭೋಜನಾಲಯ ಸ್ಥಾಪನೆಗೆ ಯೋಜನೆ ರೂಪಿಸಿ ಎಂದು ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಅಕ್ಟೋಬರ್ 27ರಂದು ಸೂಚಿಸಿತ್ತು.

‘ಹಸಿವು ತಡೆಗೆ ನೀವು ಮುಂದಾದರೆ ಯಾವುದೇ ಸಂವಿಧಾನ, ಯಾವುದೇ ಕಾನೂನು ಅಥವಾ ಯಾವುದೇ ನ್ಯಾಯಾಲಯ ಬೇಡ ಎನ್ನುವುದಿಲ್ಲ. ಈಗಾಗಲೇ ವಿಳಂಬವಾಗಿದೆ. ವಿಚಾರಣೆಯನ್ನು ಪದೇ ಪದೇ ಮುಂದೂಡುವುದರಿಂದ ಉಪಯೋಗ ಇಲ್ಲ. ರಾಜ್ಯ ಸರ್ಕಾರಗಳ ಜತೆಗೆ ದಯವಿಟ್ಟು ಚರ್ಚಿಸಿ, ಯೋಜನೆ ಅಭಿವೃದ್ಧಿಪಡಿಸಿ’ ಎಂದು ಕೋರ್ಟ್ ಹೇಳಿದೆ.

‘ಪುನೀತ ನಮನ’ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಘೋಷಣೆ

ಪುನೀತ್ ‘ಕರ್ನಾಟಕ ರತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಿನ ಕಣ್ಮಣಿಯಂತೆ ಮೆರೆಯುತ್ತಲೇ ಅಚಾನಕ್ಕಾಗಿ ‘ಕಾಣದಂತೆ ಮಾಯವಾದ’ ನಟ ಪುನೀತ್ ರಾಜಕುಮಾರ್ ನೆನಪುಗಳು ಉಮ್ಮಳಿಸಿ ಭಾವಕೋಶ ತುಂಬುತ್ತಿದ್ದ ಹೊತ್ತು; ಡಾ.ರಾಜ್ ಕುಟುಂಬದ ಕುಡಿಗಳಲ್ಲಿ ಹೆಪ್ಪುಗಟ್ಟಿದ ಮೌನ, ಚಿತ್ರರಂಗ, ರಾಜಕೀಯ ಕ್ಷೇತ್ರದ ಪ್ರಮುಖರು ಗಾಢ ವಿಷಾದದಲ್ಲಿ ಮೂಕರಾಗಿದ್ದ ಕ್ಷಣ. . .ಸಾವಿರಾರು ಜನರ ಕಣ್ಣಾಲಿಗಳಲ್ಲಿ ಧುಮ್ಮಿಕ್ಕಲು ಕಾಯುತ್ತಿದ್ದ ನೋವಿನ ಧಾರೆ. . .

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ನಗರದ ಅರಮನೆ ಮೈದಾನದಲ್ಲಿ ಮಂಗಳವಾರ ಏರ್ಪಡಿಸಿದ್ದ ‘ಪುನೀತ ನಮನ’ ಕಾರ್ಯಕ್ರಮ ನೋವಿನ ಕಡಲೊಳಗೆ ಮುಳುಗಿತ್ತು.

ಅಪ್ಪುವಿಗೆ ನಮನ ಸಲ್ಲಿಸಲು ಮಾತಿಗೆ ನಿಂತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಪುನೀತ್ ರಾಜ್‌ಕುಮಾರ್ ಅವರ ಹೆಸರನ್ನು ಚಿರಸ್ಥಾಯಿ ಆಗಿಸಲು ಅವರಿಗೆ ಮರಣೋತ್ತರವಾಗಿ ‘ಕರ್ನಾಟಕ ರತ್ನ ಪ್ರಶಸ್ತಿ’ ನೀಡಲಾಗುವುದು ಎಂದು ಘೋಷಿಸಿದರು.

ಮುಖ್ಯಮಂತ್ರಿಯವರ ಈ ಘೋಷಣೆ ಬೆನ್ನ ಹಿಂದೆಯೇ ಸಭಾಂಗಣದಲ್ಲಿ ನೆರೆದವರೆಲ್ಲ ಎದ್ದು ನಿಂತು ಜೋರಾಗಿ ಕರತಾಡನ ಮಾಡಿದರು.

ಚಂದನವನದ ದಿಗ್ಗಜರ ಮೊಗದಲ್ಲಿ ಅದುವರೆಗೆ ಮನೆಮಾಡಿದ್ದ ವಿಷಾದ ಭಾವ ಕ್ಷಣಕಾಲ ಹಿಂದೆ ಸರಿದು ಸಮಾಧಾನದ ಗೆರೆಯೊಂದು ಮಿಂಚಿ ಮರೆಯಾಯಿತು. ಪುತ್ರಿ ವಂದನಾ ಜೊತೆ ಕುಳಿತಿದ್ದ ಅಶ್ವಿನಿ ಪುನೀತ್ ರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಮತ್ತು ಕುಟುಂಬದ ಎಲ್ಲ ಸದಸ್ಯರ ಕಣ್ಣಾಲಿಗಳು ಆ ಕ್ಷಣದಲ್ಲಿ ತೇವಗೊಂಡವು. ದುಃಖ ತಡೆಯಲಾಗದ ಶಿವರಾಜ್ ಕುಮಾರ್ ಅವರ ಕಣ್ಣಿಂದ ನೀರು ಹೊರಚೆಲ್ಲಿ ನೆರೆದಿದ್ದವರ ಅಂತರಂಗವನ್ನು ಕಲಕಿತು.



‘ಪುನೀತ ನಮನ’ ಕಾರ್ಯಕ್ರಮದಲ್ಲಿ ಶಿವರಾಜ್ ಕುಮಾರ್, ಗೀತಾ ಶಿವರಾಜ್‌ಕುಮಾರ್, ಪುನೀತ್ ಅವರ ಪುತ್ರಿ ವಂದನಾ, ಪತ್ನಿ ಅಶ್ವಿನಿ ಅವರು ಮೇಣದ ಬತ್ತಿ ಬೆಳಗಿ ಶ್ರದ್ಧಾಂಜಲಿ ಸಲ್ಲಿಸಿದರು

> **ದೇಶಕ್ಕೆ ಅಗಾಧವಾದ ಚಾರಿತ್ರಿಕ ಹಿನ್ನೆಲೆ ಇದೆ. ಚಾರಿತ್ರ್ಯ ಇರುವವರು ಕಡಿಮೆ. ಅಪ್ಪು ಚಾರಿತ್ರ್ಯವಂತರಾಗಿ ಚರಿತ್ರೆಗೆ ಸೇರಿದ್ದಾರೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಮುಖ್ಯಮಂತ್ರಿ ಅವರು ಮಾತು ಮುಂದುವರಿಸುತ್ತಿದ್ದಂತೆ ಸಭಾಂಗಣದ ಕೊನೆಯ ಸಾಲಿನಲ್ಲಿದ್ದ ಅಭಿಮಾನಿಯೊಬ್ಬರು, ‘ನಮ್ ಪುನೀತ್ ಅವ್ರಿಗೆ ಕರ್ನಾಟಕ ರತ್ನ ಕೊಡ್ಲೇಬೇಕು ಸಾರ್’ ಎಂದು ಜೋರಾಗಿ ಕೂಗಿದರು. ಕ್ಷಣಕಾಲ ಸಾವರಿಸಿಕೊಂಡ ಬೊಮ್ಮಾಯಿ, ಪ್ರಶಸ್ತಿ ಘೋಷಣೆಗೆ ತಡ ಮಾಡಲೇ ಇಲ್ಲ.

‘ಅಪ್ಪು ಹೆಸರನ್ನು ಚಿರಸ್ಥಾಯಿ ಆಗಿಸಬೇಕು ಎಂಬುದು ರಾಜ್ಯ ಸರ್ಕಾರದ ಅಭಿಲಾಷೆ. ಕರ್ನಾಟಕ ರತ್ನ ಪ್ರಶಸ್ತಿಯ ಜೊತೆಯಲ್ಲೇ ರಾಷ್ಟ್ರಮಟ್ಟದ ಉನ್ನತ ಗೌರವಕ್ಕೂ ಶಿಫಾರಸು ಮಾಡುವ ನಿಟ್ಟಿನಲ್ಲಿ ಸಚಿವ ಸಂಪುಟದಲ್ಲಿ ನಿರ್ಣಯ ತೆಗೆದುಕೊಳ್ಳಲಾಗುವುದು’ ಎಂದರು.


5ನೇ ಪುಟ ನೋಡಿ

ಮಸೀದಿಗಳಲ್ಲಿ ಧ್ವನಿವರ್ಧಕ ಸ್ಪಷ್ಟನೆ ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಸೀದಿಗಳಲ್ಲಿ ಧ್ವನಿವರ್ಧಕ ಬಳಸಲು ರಾಜ್ಯ ವಕ್ಫ್ ಮಂಡಳಿಯು ಯಾವ ಕಾನೂನಿನ ಅಡಿ ಅವಕಾಶ ನೀಡಿದೆ ಎಂಬ ಬಗ್ಗೆ ಸ್ಪಷ್ಟನೆ ನೀಡಿ’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

ರಾಜ್ಯದಲ್ಲಿ ಶಬ್ದ ಮಾಲಿನ್ಯ ನಿಯಂತ್ರಣ ಕಾಯ್ದೆಯನ್ನು ಸಮರ್ಥವಾಗಿ ಜಾರಿಗೊಳಿಸಲು ಕೋರಿ ಗಿರೀಶ್ ಭಾರದ್ವಾಜ್ ಹಾಗೂ ‘ಥಣಿಸಂದ್ರ ಸುತ್ತಮುತ್ತಲಿನ ಮಸೀದಿಗಳಿಂದ ಉಂಟಾಗುತ್ತಿರುವ ಶಬ್ದ ಮಾಲಿನ್ಯ ತಡೆಯಲು ನಿರ್ದೇಶಿಸಬೇಕು’ ಎಂದು ಕೋರಿ ಸ್ಥಳೀಯ ನಿವಾಸಿಗಳು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಶ್ರೀಧರ್ ಪ್ರಭು, ‘ವಕ್ಫ್ ಮಂಡಳಿ ತನಗೆ ಅಧಿಕಾರ ಇಲ್ಲದಿದ್ದರೂ ಕಡಿಮೆ ಡೆಸಿಬಲ್ ಧ್ವನಿವರ್ಧಕಗಳನ್ನು ಬಳಸುವಂತೆ ಮಸೀದಿಗಳಿಗೆ ಸುತ್ತೋಲೆ ಹೊರಡಿಸಿದೆ. ಇದು ಸರಿಯಾದ ಕ್ರಮವಲ್ಲ’ ಎಂದರು.

‘ಶಬ್ದ ಮಾಲಿನ್ಯ ನಿಯಂತ್ರಣ ನಿಯಮ–2000 ಪ್ರಕಾರ ರಾತ್ರಿ 10ರಿಂದ ಬೆಳಗ್ಗೆ 6ರವರೆಗೆ ಧ್ವನಿವರ್ಧಕ ಬಳಸುವಂತಿಲ್ಲ. ರಾಷ್ಟ್ರೀಯ ಮತ್ತು ಸಾರ್ವಜನಿಕ ಹಬ್ಬಗಳಲ್ಲಿ ಮಾತ್ರವೇ ರಾತ್ರಿ 12ರವರೆಗೂ ಧ್ವನಿವರ್ಧಕ ಬಳಸಬಹುದು. ಅದೂ ಸತತ 15 ದಿನಗಳವರೆಗೆ ಮಾತ್ರ. ಆ ಅವಧಿಯನ್ನು ಮೀರಿ ಬಳಸುವುದು ಕಾನೂನು ಬಾಹಿರ. ಆದರೆ, ಈ ನಿಯಮಗಳು ಯಾವವೂ ಪಾಲನೆಯಾಗುತ್ತಿಲ್ಲ’ ಎಂದು ಬಲವಾಗಿ ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಪರಿಸ್ಥಿತಿ ನೋಡಿದರೆ ಸರ್ಕಾರ ಯಾವುದೇ ಕ್ರಮ ಕೈಗೊಂಡಂತೆ ಕಾಣುತ್ತಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿತಲ್ಲದೆ, ‘ಮಾರ್ಪಡಿಸಿದ ಸೈಲೆನ್ಸರ್ ಮತ್ತು ಹಾರ್ನ್‌ಗಳಿಂದ ಶಬ್ದ ಮಾಲಿನ್ಯ ಉಂಟು ಮಾಡುತ್ತಿರುವ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ವಿರುದ್ಧ ಕಾರ್ಯಾಚರಣೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಸರ್ಕಾರಕ್ಕೆ ನಿರ್ದೇಶಿಸಿ, ವಿಚಾರಣೆ ಮುಂದೂಡಿದೆ.

ತುಮಕೂರು: ಭಾರಿ ಮಳೆ

ತುಮಕೂರು: ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಜೋರು ಮಳೆಯಾಗಿದ್ದು, ಸಾಕಷ್ಟು ಸಂಖ್ಯೆಯಲ್ಲಿ ಕೆರೆ, ಕಟ್ಟೆಗಳು ಭರ್ತಿಯಾಗಿವೆ. 20 ವರ್ಷಗಳ ನಂತರ ಜಯಮಂಗಲಿ ನದಿ ತುಂಬಿ ಹರಿಯುತ್ತಿದೆ. 4

ಮಳೆ: ಚೆನ್ನೈನಲ್ಲಿ ಮತ್ತೆ ರೆಡ್ ಅಲರ್ಟ್

ಚೆನ್ನೈ: ಕಳೆದ ವಾರ ಭಾರಿ ಮಳೆಯಿಂದ ಸಂಕಷ್ಟಕ್ಕೆ ಒಳಗಾಗಿದ್ದ ಚೆನ್ನೈಗೆ ಮತ್ತೆ ಮಳೆಯ ಆತಂಕ ಎದುರಾಗಿದೆ. ನವೆಂಬರ್ 18ರಂದು ನಗರ ಹಾಗೂ ಅಕ್ಕಪಕ್ಕದ ಜಿಲ್ಲೆಗಳಲ್ಲಿ ಅತ್ಯಧಿಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ‘ರೆಡ್ ಅಲರ್ಟ್’ ಹೊರಡಿಸಿದೆ. 4

ಶ್ರೀಕಿ ಲ್ಯಾಪ್‌ಟಾಪ್‌ನಲ್ಲಿ 76 ಲಕ್ಷ ಕೀ ಪತ್ತೆ!

ಬೆಂಗಳೂರು: ಹ್ಯಾಕರ್ ಶ್ರೀಕೃಷ್ಣನ ಒಂದೇ ಲ್ಯಾಪ್‌ಟಾಪ್‌ನಲ್ಲಿ ಬಿಟ್ ಕಾಯಿನ್‌ಗಳ ಅಕೌಂಟ್‌ಗೆ ಪ್ರವೇಶಿಸಲು ಬಳಸುವ 76 ಲಕ್ಷ ‘ಪ್ರೈವೇಟ್ ಕೀ’ ಮತ್ತು ಹಲವು ಡಿಜಿಟಲ್ ವ್ಯಾಲೆಟ್‌ಗಳು ಇದ್ದವು ಎಂಬುದನ್ನು ವಿಧಿವಿಜ್ಞಾನ ವಿಶ್ಲೇಷಣಾ ವರದಿ ಬಹಿರಂಗಪಡಿಸಿದೆ! 5

ಕೋವಿಡ್ ಉಪಶಮನ ಮಾತ್ರೆ ಪೂರೈಕೆಗೆ ಒಪ್ಪಿಗೆ

ನವದೆಹಲಿ: ಫೈಝರ್ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೋವಿಡ್ ಗುಣಪಡಿಸುವ ಮಾತ್ರೆ ‘ಪ್ಯಾಕ್ಸ್‌ಲೋವಿಡ್’ ಅನ್ನು ಕಡಿಮೆ ದರದಲ್ಲಿ ಭಾರತವೂ ಸೇರಿದಂತೆ 95 ದೇಶಗಳಲ್ಲಿ ಮಾರಾಟ ಮಾಡಲು ಆ ಸಂಸ್ಥೆಯು ಅನುಮತಿ ಕೊಟ್ಟಿದೆ. 10

ನಾಳೆಯಿಂದ ರಾತ್ರಿ 11ರವರೆಗೂ ಮೆಟ್ರೊ ಸೇವೆ

ಬೆಂಗಳೂರು: ಪ್ರಯಾಣಿಕರ ಬೇಡಿಕೆಯನ್ನು ಮನ್ನಿಸಿ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ‘ನಮ್ಮ ಮೆಟ್ರೊ’ ಸೇವೆಯನ್ನು ಗುರುವಾರದಿಂದ (ನ. 18) ಜಾರಿಗೆ ಬರುವಂತೆ ರಾತ್ರಿ 11 ಗಂಟೆವರೆಗೂ ವಿಸ್ತರಿಸಿದೆ.



3ನೇ ಪುಟ ನೋಡಿ

ಮೇಯರ್, ಉಪ ಮೇಯರ್ ಚುನಾವಣೆ ಮುಂದೂಡಿಕೆ

ಕಲಬುರಗಿ: ಕಲಬುರಗಿ ಮಹಾನಗರ ಪಾಲಿಕೆಯ ಮೇಯರ್ ಮತ್ತು ಉಪ ಮೇಯರ್ ಚುನಾವಣೆಯ ಮತದಾರರ ಪಟ್ಟಿಯಲ್ಲಿ ಬಿಜೆಪಿಯ ಏಳು ಜನ ವಿಧಾನ ಪರಿಷತ್ ಸದಸ್ಯರ ಹೆಸರು ಸೇರ್ಪಡೆ ಯತ್ನದ ವಿರುದ್ಧ ಕಲಬುರಗಿ ಹೈಕೋರ್ಟ್ ಪೀಠದಲ್ಲಿ ಕಾಂಗ್ರೆಸ್‌ನವರು ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಈ ನಡುವೆ ಇದೇ 20ರಂದು ನಡೆಯಬೇಕಿದ್ದ ಮೇಯರ್ ಮತ್ತು ಉಪ ಮೇಯರ್ ಚುನಾವಣೆಯನ್ನು ಮುಂದೂಡಲಾಗಿದೆ.

‘ಜಿಲ್ಲಾ ಆಡಳಿತ ವಿಧಾನ ಪರಿಷತ್ ಚುನಾವಣೆಯಲ್ಲಿ ಸಕ್ರಿಯವಾಗಿದೆ. ಹೀಗಾಗಿ ಮೇಯರ್–ಉಪ ಮೇಯರ್, ನಾಲ್ಕು ಸ್ಥಾಯಿ ಸಮಿತಿಗಳ ಚುನಾವಣೆ ಮುಂದೂಡಲಾಗಿದೆ’ ಎಂದು ಚುನಾವಣಾಧಿಕಾರಿಯೂ ಆಗಿರುವ ಪ್ರಾದೇಶಿಕ ಆಯುಕ್ತ ಡಾ.ಎನ್.ವಿ. ಪ್ರಸಾದ್ ತಿಳಿಸಿದ್ದಾರೆ.

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸೋಂಕಿತರ ಪೈಕಿ ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರು ಶೇ 0.66 ರಷ್ಟು ಮಾತ್ರ

ಕೋವಿಡ್ ಲಸಿಕೆ: ದುರ್ಬಲಗೊಂಡ ವೈರಾಣು!

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿನ ಕೋವಿಡ್ ಪೀಡಿತರಲ್ಲಿ ಬಹುತೇಕ ಎಲ್ಲರೂ ಮನೆ ಆರೈಕೆಯಲ್ಲಿಯೇ ಚೇತರಿಸಿಕೊಳ್ಳುತ್ತಿದ್ದು, ಸದ್ಯ ಸೋಂಕಿತರಲ್ಲಿ ಶೇ 0.66 ರಷ್ಟು ಮಂದಿ ಮಾತ್ರ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಗರದಲ್ಲಿ ಸದ್ಯ 6 ಸಾವಿರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ. ಚಿಕಿತ್ಸೆಗಾಗಿ ಸರ್ಕಾರಿ ವ್ಯವಸ್ಥೆಯಡಿ 1,849 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಅವುಗಳಲ್ಲಿ ಶೇ 99ರಷ್ಟು ಖಾಲಿ ಉಳಿದಿವೆ. 44 ಮಂದಿ ಮಾತ್ರ ಆಸ್ಪತ್ರೆಚಿಕಿತ್ಸೆಗೆಒಳಪಟ್ಟಿದ್ದಾರೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಕಳೆದ ಮಾರ್ಚ್ ಎರಡನೇ ವಾರದ ಬಳಿಕ ಏರಿಕೆ ಕಂಡಿದ್ದರಿಂದ ಸರ್ಕಾರ, ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಸೋಂಕಿತರಿಗೆ ಚಿಕಿತ್ಸೆ ಒದಗಿಸುವ ವ್ಯವಸ್ಥೆ ರೂಪಿಸಿತ್ತು. ಸರ್ಕಾರಿ ಕೋಟಾದಡಿ ಶಿಫಾರಸು ಆಧಾರದಲ್ಲಿ ಚಿಕಿತ್ಸೆ ನೀಡಲು ಶೇ 50ರಷ್ಟು ಹಾಸಿಗೆಗಳನ್ನು ಮೀಸಲಿಡುವಂತೆ ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿ, ಆದೇಶ ಹೊರಡಿಸಿತ್ತು. ಇದರಿಂದಾಗಿ ಕೋವಿಡ್ ಚಿಕಿತ್ಸೆಗೆ ನಗರದಲ್ಲಿ 5 ಸಾವಿರಕ್ಕೂ ಅಧಿಕ ಹಾಸಿಗೆಗಳು ಲಭ್ಯವಿದ್ದವು.

ಪ್ರಜಾವಾಣಿ ವಿಶೇಷ

ಮೇ ತಿಂಗಳಲ್ಲಿ ನಗರವೊಂದರಲ್ಲೇ 2.25 ಲಕ್ಷಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿದ್ದವು. ಜುಲೈ ಬಳಿಕ ಇಳಿಕೆ ಕಂಡಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಮಾತ್ರ ಚಿಕಿತ್ಸೆ ನೀಡಲಾಗುತ್ತಿದೆ. ಸಂಭಾವ್ಯ ಕೋವಿಡ್ ಮೂರನೇ ಅಲೆಯ ಕಾರಣ ವಿಕ್ಟೋರಿಯಾ ಸೇರಿ ಕೆಲ ಆಸ್ಪತ್ರೆಗಳಲ್ಲಿ ಕೋವಿಡ್ ಹಾಸಿಗೆಗಳನ್ನು ಉಳಿಸಿಕೊಳ್ಳಲಾಗಿದೆ.

ತೀವ್ರತೆ ಕಡಿಮೆ: ಆಸ್ಪತ್ರೆಯಲ್ಲಿರುವ 44 ಕೋವಿಡ್ ಪೀಡಿತರಲ್ಲಿ 33 ಮಂದಿಗೆ ಸಾಮಾನ್ಯ ಹಾಸಿಗೆಗಳಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ. ಇಬ್ಬರು ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆ, ಒಬ್ಬರು ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘18 ವರ್ಷ ಮೇಲ್ಪಟ್ಟ ಹೆಚ್ಚಿನವರು ಕೋವಿಡ್ ಲಸಿಕೆ ಪಡೆದಿದ್ದಾರೆ. ಇದರಿಂದಾಗಿ ಸೋಂಕು ತಗುಲಿದ್ದರೂ ಬಹುತೇಕರಿಗೆ ಲಕ್ಷಣಗಳು ಗೋಚರಿಸುತ್ತಿಲ್ಲ. ಸಮುದಾಯ ಹಂತದಲ್ಲಿಯೂ ‘ಸಮೂಹ ರೋಗ ನಿರೋಧಕ ಶಕ್ತಿ’ (ಹರ್ಡ್ ಇಮ್ಯುನಿಟಿ) ವೃದ್ಧಿಯಾಗುತ್ತಿದೆ. ಎಲ್ಲರೂ ಎರಡು ಡೋಸ್ ಲಸಿಕೆ ಪಡೆದಲ್ಲಿ ಪೂರ್ಣ ಪ್ರಮಾಣ ಸಮೂಹ ರೋಗ ನಿರೋಧಕ ಶಕ್ತಿ ವೃದ್ಧಿಯಾಗಲಿದೆ’ ಎಂಬುದು ವೈದ್ಯಕೀಯ ತಜ್ಞರ ಅಭಿಮತ.

ಕೋವಿಡ್ ಲಸಿಕೆ ವಿವರ

92.82 ಲಕ್ಷ ಮೊದಲ ಡೋಸ್ ಲಸಿಕೆ ಪಡೆದವರು

62.73 ಲಕ್ಷ ಎರಡು ಡೋಸ್ ಲಸಿಕೆ ಪಡೆದವರು

543 ಲಸಿಕೆ ವಿತರಿಸುತ್ತಿರುವ ಸರ್ಕಾರಿ ಆಸ್ಪತ್ರೆಗಳು

184 ಲಸಿಕೆ ವಿತರಿಸುತ್ತಿರುವ ಖಾಸಗಿ ಆಸ್ಪತ್ರೆಗಳು

ಕೋವಿಡ್‌ಗೆ ಮೀಸಲಿಟ್ಟ ಹಾಸಿಗೆಗಳ ವಿವರ

ವಿಧ	ಮೀಸಲು	ಖಾಲಿ
ಸಾಮಾನ್ಯ ಹಾಸಿಗೆ	693	660
ಐಸಿಯು ಹಾಸಿಗೆ	120	118
ಎಚ್‌ಡಿಯು ಹಾಸಿಗೆ	831	822
ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ	205	204



ಲಸಿಕೆಯು ಕೋವಿಡ್ ವಿರುದ್ಧ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ. ಎಲ್ಲರೂ ಎರಡು ಡೋಸ್ ಲಸಿಕೆ ಪಡೆಯಬೇಕು

ಡಾ.ಸಿ.ಎನ್. ಮಂಜುನಾಥ್, ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ



ಎರಡು ಡೋಸ್ ಲಸಿಕೆ ಪಡೆದಲ್ಲಿ ವೈರಾಣುವಿನಿಂದ ರಕ್ಷಣೆ ದೊರೆಯಲಿದೆ. ಸೋಂಕಿನ ತೀವ್ರತೆಯು ತಗ್ಗಲಿದೆ

ಡಾ.ಸಿ. ನಾಗರಾಜ್, ನಿರ್ದೇಶಕ, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	25.48 ಕೋಟಿ ▲	3.44 ಕೋಟಿ
ಸಕ್ರಿಯ ಪ್ರಕರಣ	1.93 ಕೋಟಿ ▲	1.30 ಲಕ್ಷ ▼
ಗುಣಮುಖ	23.04 ಕೋಟಿ ▲	3.38 ಕೋಟಿ ▲
ಸಾವು	51.26 ಲಕ್ಷ ▲	4.63 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.25 ಲಕ್ಷ ▲	8,865 ▼
ಗುಣಮುಖ	4.07 ಲಕ್ಷ ▲	11,971 ▼
ಸಾವು	5,577 ▼	197 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

70,823 ▲ ಅಮೆರಿಕ | 39,705 ▲ ಬ್ರಿಟನ್ | 38,420 ▼ ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

92.37 ▲ ಅಮೆರಿಕ | 15.93 ಬ್ರಿಟನ್ | 10.40 ▲ ರಷ್ಯಾ

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

1.40 ಲಕ್ಷ ಮಹಾರಾಷ್ಟ್ರ | 36,296 ▲ ತಮಿಳುನಾಡು | 35,877 ▼ ಕೇರಳ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

66.24 ಮಹಾರಾಷ್ಟ್ರ ▲ | 50.65 ಕೇರಳ ▲ | 27.15 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಲಸಿಕೆ: 2.5 ಕೋಟಿ ದಾಟಿದ 2ನೇ ಡೋಸ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಈವರೆಗೆ 6.85 ಕೋಟಿ ಡೋಸ್ ಲಸಿಕೆ ವಿತರಣೆ
- ಕಳೆದ ಜ.16 ರಿಂದ ಲಸಿಕಾ ಅಭಿಯಾನ ಪ್ರಾರಂಭ

ಬೆಂಗಳೂರು: ರಾಜ್ಯದಲ್ಲಿ ಈವರೆಗೆ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದವರ ಸಂಖ್ಯೆ 2.5 ಕೋಟಿ ಗಡಿ ದಾಟಿದೆ.

ಈವರೆಗೆ 6.85 ಕೋಟಿ ಡೋಸ್‌ಗಳಷ್ಟು ಲಸಿಕೆ ವಿತರಿಸಲಾಗಿದೆ. 4.32 ಕೋಟಿ ಮಂದಿ ಮೊದಲ ಡೋಸ್ ಹಾಗೂ 2.52 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಈ ವರ್ಷದ ಅಂತ್ಯದೊಳಗೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಎರಡು ಡೋಸ್ ಲಸಿಕೆ ವಿತರಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ.

ಕಳೆದ ಜ.16 ರಿಂದ ರಾಜ್ಯದಲ್ಲಿ ಲಸಿಕಾ ಅಭಿಯಾನ ಪ್ರಾರಂಭವಾಗಿದೆ. ಕಳೆದೊಂದು ತಿಂಗಳಿಂದ ದಿನವೊಂದಕ್ಕೆ ಸರಾಸರಿ 4 ಲಕ್ಷ ಡೋಸ್‌ಗಳನ್ನು ಫಲಾನುಭವಿಗಳಿಗೆ ನೀಡಲಾಗುತ್ತಿದೆ. ರಾಜ್ಯದಲ್ಲಿ ಕೋವಿಶೀಲ್ಡ್ ಲಸಿಕೆಗೆ ಆದ್ಯತೆ ನೀಡಲಾಗಿದ್ದು, ಈವರೆಗೆ 6.05 ಕೋಟಿ ಡೋಸ್‌ಗಳಷ್ಟು ಈ ಲಸಿಕೆ ವಿತರಿಸಲಾಗಿದೆ. 78.99 ಲಕ್ಷ ಡೋಸ್‌ಗಳಷ್ಟು ಕೋವ್ಯಾಕ್ಸಿನ್ ಲಸಿಕೆ ನೀಡಲಾಗಿದೆ. ಸದ್ಯ 5 ಸಾವಿರಕ್ಕೂ ಅಧಿಕ ಕೇಂದ್ರಗಳಲ್ಲಿ ಲಸಿಕೆ ವಿತರಿಸಲಾಗುತ್ತಿದೆ.

18 ರಿಂದ 44 ವರ್ಷದವರಲ್ಲಿ 2.43 ಕೋಟಿ ಮಂದಿ ಮೊದಲ ಡೋಸ್ ಹಾಗೂ 1.16 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 1.71 ಕೋಟಿ ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಅವರಲ್ಲಿ 1.20 ಕೋಟಿ ಮಂದಿ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ.

ಆರೋಗ್ಯ ಕಾರ್ಯಕರ್ತರಲ್ಲಿ 7.64 ಲಕ್ಷ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.42 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಇವರಲ್ಲಿ ಕ್ರಮವಾಗಿ 6.90 ಲಕ್ಷ ಮಂದಿ ಹಾಗೂ 8.34 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ನಗರದ ಕೋವಿಡ್ ಅಂಕಿ–ಅಂಶ

12,54,256	ಒಟ್ಟು ಪ್ರಕರಣಗಳು ▲
6,161	ಸಕ್ರಿಯ ಪ್ರಕರಣಗಳು ▼
12,31,780	ಗುಣಮುಖರಾದವರು ▲
16,314	ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	163 ▲
ಗುಣಮುಖ	574 ▲
ಸಾವು	02 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಸುದ್ದಿ 2 ನಿಮಿಷ

ರಾಷ್ಟ್ರೀಯ ಸಂಗೀತ ಸಮ್ಮೇಳನ: ಎಂ.ಸೂರ್ಯ ಪ್ರಸಾದ್ ಅಧ್ಯಕ್ಷ

ಬೆಂಗಳೂರು: ಬೆಂಗಳೂರು ಗಾಯನ ಸಮಾಜದ 51ನೇ ರಾಷ್ಟ್ರೀಯ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಸಂಗೀತ ತಜ್ಞ ಎಂ.ಸೂರ್ಯ ಪ್ರಸಾದ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಡಿಸೆಂಬರ್ 5ರಿಂದ 12ರವರೆಗೆ ಸಮ್ಮೇಳನ ನಡೆಯಲಿದ್ದು, ಪ್ರಸಿದ್ಧ ವಿದ್ವಾಂಸರಿಂದ ಸೋದಾಹರಣ ಭಾಷಣಗಳು, ಪ್ರಾತ್ಯಕ್ಷಿಕೆಗಳು, ವಿಚಾರಗೋಷ್ಠಿಗಳು ನಡೆಯಲಿವೆ. ಡಿ.12ರಂದು ಸಮಾರೋಪದಲ್ಲಿ ಎಂ.ಸೂರ್ಯ ಪ್ರಸಾದ್ ಅವರಿಗೆ ₹50 ಸಾವಿರ ನಗದು ಒಳಗೊಂಡ ‘ಸಂಗೀತ ಕಲಾರತ್ನ’ ಬಿರುದು ನೀಡಿ, ಸನ್ಮಾನಿಸಲಾಗುತ್ತದೆ.



‘ಅತಿಥಿಗಳಾಗಿ ಸಚಿವರಾದ ಆರ್.ಅಶೋಕ, ವಿ.ಸುನೀಲ್ ಕುಮಾರ್, ಸಂಸ್ಕಾರ ಭಾರತಿ ಸಂಘಟನಾ ಕಾರ್ಯದರ್ಶಿ ಪ.ರಾ.ಕೃಷ್ಣಮೂರ್ತಿ, ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಕೆ.ಎನ್. ಶಾಂತಕುಮಾರ್, ಯದುಗಿರಿ ಯತಿರಾಜ ರಾಮಾನುಜ ಜೀಯರ್ ಸ್ವಾಮೀಜಿ ಹಾಗೂ ವೀರೇಶಾನಂದ ಸ್ವಾಮೀಜಿ ಭಾಗವಹಿಸಲಿದ್ದಾರೆ’ ಎಂದು ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷ ಎಂ.ಆರ್. ವಿ.ಪ್ರಸಾದ್ ತಿಳಿಸಿದ್ದಾರೆ.

ಗ್ರಾ.ಪಂ ದಲಿತ ಉಪಾಧ್ಯಕ್ಷೆಗೆ ಅಪಮಾನ: ಬಿಜೆಪಿ ಆರೋಪ

ಬೆಂಗಳೂರು: ಬಾಗಲೂರು ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷೆ ಯಶೋದಮ್ಮ ಅಧ್ಯಕ್ಷ ಸ್ಥಾನದಲ್ಲಿ ಕುಳಿತರು ಎಂಬ ಕಾರಣಕ್ಕೆ ಕಾಂಗ್ರೆಸ್ ಮುಖಂಡರು ಕುರ್ಚಿಯನ್ನು ಬೀದಿಯಲ್ಲಿಟ್ಟು ತೊಳೆದು, ಗೋಮೂತ್ರದಿಂದ ಶುದ್ಧೀಕರಣ ಮಾಡಿದ್ದಾರೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ‘ಬೆಂಗಳೂರಿನಿಂದ 15 ಕಿ.ಮೀ ದೂರದ ಗ್ರಾಮ ಪಂಚಾಯಿತಿಯಲ್ಲಿ ಉಪಾಧ್ಯಕ್ಷರಾಗಿದ್ದ ದಲಿತ ಮಹಿಳೆಗೆ ಕಾಂಗ್ರೆಸ್ ಪಕ್ಷ ಅಪಮಾನ ಮಾಡಿದೆ’ ಎಂದು ಕಿಡಿಕಾರಿದ್ದಾರೆ.

‘ಪಂಚಾಯಿತಿಯಲ್ಲಿ ಅಧ್ಯಕ್ಷ ಹಣ ದುರುಪಯೋಗ ಮಾಡಿದ ಕಾರಣ ಸರ್ಕಾರ ಕ್ರಮ ಕೈಗೊಂಡು ಅವರನ್ನು ಅನರ್ಹಗೊಳಿಸಿತ್ತು. ಆಗ ಉಪಾಧ್ಯಕ್ಷೆಯಾಗಿದ್ದ ಯಶೋಧಮ್ಮ ಅಧ್ಯಕ್ಷ ಸ್ಥಾನದಿಂದ ಕಾರ್ಯನಿರ್ವಹಿಸುತ್ತಿದ್ದರು. ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದ ಅಧ್ಯಕ್ಷರು ದಲಿತ ಮಹಿಳೆ ತಮ್ಮ ಕುರ್ಚಿಯಲ್ಲಿ ಕುಳಿತರು ಎಂಬ ಕಾರಣಕ್ಕೆ ಕುರ್ಚಿ ಶುದ್ಧೀಕರಣ ಮಾಡಿದ್ದಾರೆ ಎಂದರು.

‘ಒಂದು ಕಡೆ ಕಾಂಗ್ರೆಸ್ ಮುಖಂಡರು ಮತ್ತು ಸಿದ್ದರಾಮಯ್ಯ ದಲಿತರು ಎಂದು ನಮಗೆ ಪ್ರಾಣ ಎನ್ನುತ್ತಾರೆ. ಇದು ದಲಿತರಿಗೆ ಕಾಂಗ್ರೆಸ್ ಕೊಡುವ ಗೌರವವೇ? ಇದಕ್ಕೆ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ಸ್ಥಳೀಯ ಶಾಸಕ ಕೃಷ್ಣಬೈರೇಗೌಡ ಉತ್ತರ ಕೊಡಬೇಕು’ ಎಂದು ಆಗ್ರಹಿಸಿದರು.

₹1.5 ಕೋಟಿ ವಂಚನೆ: ಮೂವರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ಕೊಡಿಸುವುದಾಗಿ ನಂಬಿಸಿ ₹1.5 ಕೋಟಿ ಹಣ ಪಡೆದು ವಂಚಿಸಿರುವ ಮೂವರ ವಿರುದ್ಧ ಜಯನಗರದ ಹೇಮಾ ಎಸ್.ರಾಜು ಎಂಬುವರು ಆರ್.ಟಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಇದರ ಆಧಾರದಲ್ಲಿ ಈ ಹಿಂದೆ ಬಿಡಿಎ ಉಪ ಆಯುಕ್ತರಾಗಿದ್ದ ಆರ್.ಶಿವರಾಜ್, ಬಿಡಿಎ ಸೂಪರಿಂಟೆಂಡೆಂಟ್ ಮಹೇಶ್ ಕುಮಾರ್ ಹಾಗೂ ಆರ್.ಟಿ.ನಗರ ನಿವಾಸಿಯಾಗಿರುವ ದಲ್ಲಾಳಿ ಮೋಹನ್ ಕುಮಾರ್ ವಿರುದ್ಧ ಪೊಲೀಸರು ವಂಚನೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಹೆಣ್ಣೂರು ಹಾಗೂ ಶ್ರೀರಾಂಪುರ ಗ್ರಾಮದ ಒಟ್ಟು 3 ಎಕರೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು (ಬಿಡಿಎ) ಅರ್ಕಾವತಿ ಬಡಾವಣೆ ರಚನೆಗಾಗಿ ಸ್ವಾಧೀನಪಡಿಸಿಕೊಂಡಿದ್ದರು. ನಿಯಮದ ಪ್ರಕಾರ ಬಿಡಿಎಯವರು 1 ಎಕರೆ ಜಮೀನಿಗೆ 9,583 ಅಡಿ ಅಭಿವೃದ್ಧಿಪಡಿಸಿದ ನಿವೇಶನವನ್ನು ಪರಿಹಾರವಾಗಿ ನೀಡಬೇಕು. 2003ರಿಂದ ಈವರೆಗೂ ಪರಿಹಾರ ನೀಡಿಲ್ಲ ಎಂದು ಹೇಮಾ ದೂರಿನಲ್ಲಿ ತಿಳಿಸಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

‘ಪರಿಹಾರ ಪಡೆಯುವ ಸಲುವಾಗಿ ಆಗಾಗ ಬಿಡಿಎ ಕಚೇರಿಗೆ ಹೋಗುತ್ತಿದ್ದೆ. ಮಹೇಶ್‌ಕುಮಾರ್ ನಮ್ಮ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿಕೊಳ್ಳುತ್ತಿದ್ದರು. ಪರಿಹಾರ ಸಂಬಂಧ ಅವರ ಜೊತೆ ಮಾತನಾಡಿದ್ದೆ. ತಾನು ಪಿಆರ್‌ಆರ್ ವಿಭಾಗಕ್ಕೆ ವರ್ಗಾವಣೆಯಾಗಿರುವ ವಿಷಯ ತಿಳಿಸಿದ್ದ ಅವರು ಆರ್.ಟಿ ನಗರದ ಮೋಹನ್ ಕುಮಾರ್‌ನನ್ನು ಭೇಟಿ ಮಾಡಿದರೆ ಆತ ತನ್ನ ಪ್ರಭಾವ ಬಳಸಿ ವರ್ಗಾವಣೆ ರದ್ದು ಮಾಡಿಸಬಲ್ಲ. ಆಗ ಮಾತ್ರ ಬಾಕಿ ಇರುವ ಜಮೀನಿನ ದಾಖಲೆಗಳನ್ನು ಪರಿಹರಿಸಲು ಸಾಧ್ಯ ಎಂದು ಹೇಳಿದ್ದಾಗಿ ಅವರು ದೂರಿನಲ್ಲಿ ವಿವರಿಸಿದ್ದಾರೆ’ ಎಂದಿದ್ದಾರೆ.

‘2020ರ ಜನವರಿಯಲ್ಲಿ ಮಹೇಶ್, ಕಾಫಿ ಡೇವೊಂದಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಮೋಹನ್‌ನನ್ನು ಪರಿಚಯಿಸಿದ್ದರು .ನಿನ್ನನ್ನು ಮತ್ತೆ ಭೂಸ್ವಾಧೀನ ವಿಭಾಗಕ್ಕೆ ವರ್ಗಾವಣೆ ಮಾಡಿಸಬೇಕಾದರೆ ಎಕರೆಗೆ ₹50 ಲಕ್ಷದಂತೆ ಪರಿಹಾರ ನೀಡಬೇಕು ಎಂದು ಮೋಹನ್, ಮಹೇಶ್‌ಗೆ ಹೇಳಿದ್ದ. ಅದಕ್ಕೆ ಮಹೇಶ್, ನನ್ನ 3 ಎಕರೆ ಜಮೀನಿಗೆ ಪರಿಹಾರ ಕೊಡಿಸುವಂತೆ ಹೇಳಿದ್ದ. ಅದಕ್ಕೆ ಆತ ₹1.5 ಕೋಟಿ ಬೇಡಿಕೆ ಇಟ್ಟಿದ್ದು, ₹ 50 ಲಕ್ಷ ಮುಂಗಡ ಪಡೆದಿದ್ದ’ ಎಂದು ತಿಳಿಸಿದ್ದಾರೆ. ಮರು ದಿನ ನಾನು ಮತ್ತು ಮಹೇಶ್‌ಕುಮಾರ್ ಜೊತೆಯಾಗಿ ಮೋಹನ್‌ಗೆ ₹50 ಲಕ್ಷ ಹಣ ಮುಂಗಡ, ಉಳಿದ ಹಣವನ್ನು ಹಂತ ಹಂತವಾಗಿ ಕೊಟ್ಟಿದ್ದೆವು’ ಎಂದರು.

‘ಒಂದೂವರೆ ವರ್ಷವಾದರೂ ನನಗೆ ಪರಿಹಾರ ಕೊಡಿಸಿಲ್ಲ. ಹಣವನ್ನೂ ಹಿಂತಿರುಗಿಸಿಲ್ಲ. ಕೇಳಿದರೆ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದೂ ದೂರಿನಲ್ಲಿ ಉಲ್ಲೇಖಿಸಿದ್ದಾರೆ’ ಎಂದರು.

ಮೂವರ ಬಂಧನ: ನಗದು ಜಪ್ತಿ

ಬೆಂಗಳೂರು: ಒಂಟಿಯಾಗಿ ಓಡಾಡುವ ನಾಗರಿಕರನ್ನು ಮಾರಕಾಸ್ತ್ರಗಳಿಂದ ಬೆದರಿಸಿ ಆಭರಣ, ನಗದು ದೋಚುತ್ತಿದ್ದ ಉದಯ್, ಆತನ ಇಬ್ಬರು ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಅವರಿಂದ 25 ಗ್ರಾಂ ಚಿನ್ನಾಭರಣ, ₹ 1 ಲಕ್ಷ ನಗದು ಜಪ್ತಿ ಮಾಡಲಾಗಿದೆ.

‘ನಾಯಂಡಹಳ್ಳಿ ವರ್ತುಲ ರಸ್ತೆಯ ಕೈಲಾಸೇಶ್ವರ ದೇವಸ್ಥಾನದ ಬಳಿ ಚಿನ್ನಾಭರಣ ಲೂಟಿಗೆ ಗುಂಪೊಂದು ಹೊಂಚು ಹಾಕುತ್ತಿರುವ ಮಾಹಿತಿ ಲಭಿಸಿತ್ತು. ಮೂವರನ್ನು ವಶಕ್ಕೆ ಪಡೆದು, ಅವರಿಂದ ಮಾರಕಾಸ್ತ್ರಗಳನ್ನೂ ಜಪ್ತಿ ಮಾಡಲಾಗಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಜೂನ್ 5ರಂದು ಮೂಡಲಪಾಳ್ಯದ ಪ್ರಿಯದರ್ಶಿನಿ ಲೇಔಟ್ ಬಳಿ ಮದುವೆ ಮನೆಯೊಂದರಲ್ಲಿ ಸೇರಿದ್ದ ಜನರನ್ನು ಮಾರಕಾಸ್ತ್ರಗಳಿಂದ ಬೆದರಿಸಿ, ಚಿನ್ನಾಭರಣಗಳನ್ನು ದೋಚಲಾಗಿತ್ತು. ಅದನ್ನು ತಾವೇ ಮಾಡಿದ್ದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ’ ಎಂದು ತಿಳಿಸಿದ್ದಾರೆ.

ಬಾಲಕಿಯರ ಅಪಹರಣ: ಇಬ್ಬರ ಬಂಧನ

ಬೆಂಗಳೂರು: ಪ್ರೀತಿಯ ನಾಟಕವಾಡಿ ಬಾಲಕಿಯರನ್ನು ಅಪಹರಿಸಿದ್ದ ಆರೋಪಿಗಳನ್ನು ಯಶವಂತಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಉತ್ತರ ಪ್ರದೇಶದ ಆರೀಫ್ (19) ಹಾಗೂ ವಾಹೀದ್ (19) ಬಂಧಿತರು.

‘ನಗರದಲ್ಲಿ ಸೋಫಾ ರಿಪೇರಿ ಮಾಡಿ ಜೀವನ ಸಾಗಿಸುತ್ತಿದ್ದ ಆರೋಪಿಗಳು ಯಶವಂತಪುರದಲ್ಲಿ ನೆಲೆಸಿದ್ದ ಬಾಲಕಿಯರೊಂದಿಗೆ ಸ್ನೇಹ ಬೆಳೆಸಿದ್ದರು. ಬಳಿಕ ಪ್ರೀತಿಯ ನಾಟಕವಾಡಿ ಅವರನ್ನು ಅಪಹರಿಸಿದ್ದರು. ಬಾಲಕಿಯರ ಪೋಷಕರು ನೀಡಿದ ದೂರಿನ ಆಧಾರದಲ್ಲಿ ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಪಿಎಸ್‌ಐ ಮೇಲೆ ಮಚ್ಚಿನಿಂದ ಹಲ್ಲೆ

ಬೆಂಗಳೂರು: ಸ್ಥಳ ಮಹಜರಿಗೆ ಕರೆದುಕೊಂಡು ಹೋಗಿದ್ದ ವೇಳೆ ಹೆಣ್ಣೂರು ಠಾಣೆಯ ಪಿಎಸ್‌ಐ ನಿಂಗರಾಜ್ ಅವರ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ಪರಾರಿಯಾಗಲು ಪ್ರಯತ್ನಿಸಿದ್ದ ರೌಡಿ ರಘು (30) ಕಾಲಿಗೆ ಗುಂಡು ಹೊಡೆದು ಬಂಧಿಸಲಾಗಿದೆ. ‘ನಾಗವಾರ ವರ್ತುಲ ರಸ್ತೆಯ ಸರ್ವಿಸ್ ರಸ್ತೆ ಬಳಿ ನಡೆದಿದ್ದ ಗಾರ್ಮೆಂಟ್ಸ್ ಉದ್ಯಮಿ ಶ್ರೀಧರ್ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ರಘು, ಕೃತ್ಯಕ್ಕೆ ಬಳಸಿದ್ದ ಮಚ್ಚನ್ನು ಕಸ್ತೂರಿನಗರದ ರೈಲ್ವೆ ಪ್ಯಾರಲ್ ರಸ್ತೆ ಬದಿಯ ಪೊದೆಯಲ್ಲಿ ಬಿಸಾಡಿದ್ದಾಗಿ ತಿಳಿಸಿದ್ದ. ಹೀಗಾಗಿ ಆತನನ್ನು ಸ್ಥಳಕ್ಕೆ ಕರೆದೊಯ್ಯಲಾಗಿತ್ತು. ಹಲ್ಲೆ ಮಾಡಿದಾಗ, ಆತ್ಮರಕ್ಷಣೆ ಕ್ರಮವಾಗಿ ಗುಂಡು ಹಾರಿಸಲಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.



ನಕ್ಷತ್ರ ಆಮೆ ಮಾರಲು ಯತ್ನ: ಆರೋಪಿ ಬಂಧನ

ಬೆಂಗಳೂರು: ಎರಡು ಬ್ಯಾಗ್‌ಗಳಲ್ಲಿ 401 ನಕ್ಷತ್ರ ಆಮೆಗಳನ್ನು ಇಟ್ಟುಕೊಂಡು ಮಾರಲು ಯತ್ನಿಸುತ್ತಿದ್ದ ಆರೋಪಿಯನ್ನು ಕಲಾಸಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ. ‘ತಮಿಳುನಾಡಿನ ಶಿವಗಂಗಾ ಜಿಲ್ಲೆಯ ಬಲಮ್ ಸ್ಟ್ರೀಟ್ ನಿವಾಸಿ ಮುತ್ತು ಹಮದ್ ಮೀರಾ (51) ಬಂಧಿತ ಆರೋಪಿ.

ಆತನ ಬಳಿ ಇದ್ದ ಆಮೆಗಳಲ್ಲಿ 21 ಮೃತಪಟ್ಟಿದ್ದು, 20 ಆಮೆಗಳ ಸ್ಥಿತಿ ಗಂಭೀರವಾಗಿದೆ. 360 ಆಮೆಗಳನ್ನು ರಕ್ಷಿಸಲಾಗಿದೆ. ಬನ್ನೇರುಘಟ್ಟ ಜೈವಿಕ ಉದ್ಯಾನದ ಸಿಬ್ಬಂದಿ ಸುಪರ್ದಿಗೆ ಆಮೆಗಳನ್ನು ಒಪ್ಪಿಸಲಾಗುತ್ತದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಎ.ವಿ ರಸ್ತೆಯ ಖಾಸಗಿ ಟ್ರಾವೆಲ್ಸ್‌ವೊಂದರ ಕಚೇರಿ ಬಳಿ ವ್ಯಕ್ತಿಯೊಬ್ಬ ನಕ್ಷತ್ರ ಆಮೆಗಳನ್ನು ಮಾರಲು ಯತ್ನಿಸುತ್ತಿರುವ ಮಾಹಿತಿ ಲಭ್ಯವಾಗಿತ್ತು. ಸೋಮವಾರ ರಾತ್ರಿ ಬ್ಯಾಗ್‌ಗಳನ್ನು ಪರಿಶೀಲಿಸಿದಾಗ ಆಮೆಗಳಿದ್ದವು. ಈ ಬಗ್ಗೆ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ಹೇಳಿದ್ದಾರೆ.

‘ಹಲವರು ಈ ಆಮೆಗಳನ್ನು ಮನೆಗಳಲ್ಲಿ ಸಾಕುತ್ತಾರೆ. ಅಂತಹವರಿಗೆ ಮಾರಾಟ ಮಾಡುತ್ತಿದ್ದುದಾಗಿ ಆರೋಪಿ ತಿಳಿಸಿದ್ದಾನೆ. ಇದರಲ್ಲಿ ಇನ್ನಷ್ಟು ಮಂದಿ ಭಾಗಿಯಾಗಿರುವ ಸಾಧ್ಯತೆ ಇದೆ’ ಎಂದರು.

ಕೆಎಸ್‌ಆರ್‌ಟಿಸಿ ಅಧ್ಯಕ್ಷ ಹುದ್ದೆ ಪಡೆಯಲು ₹1 ಕೋಟಿ ಲಂಚ

ಯುವರಾಜ ಸ್ವಾಮಿಗೆ ಲಂಚ: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ನಾಯಕರ ನಿಕಟವರ್ತಿ ಎಂದು ಗುರುತಿಸಿಕೊಂಡು ವಂಚಿಸುತ್ತಿದ್ದ ನಾಗರಭಾವಿಯ ಯುವರಾಜ ಸ್ವಾಮಿ ಅಲಿಯಾಸ್ ಸ್ವಾಮಿಗೆ ಸರ್ಕಾರದ ವಿವಿಧ ಹುದ್ದೆಗಳನ್ನು ಪಡೆಯುವುದಕ್ಕಾಗಿ ಲಂಚ ನೀಡಿದ್ದ ಆರೋಪದ ಮೇಲೆ ಮೂವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಎಫ್‌ಐಆರ್ ದಾಖಲಿಸಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ಅಧ್ಯಕ್ಷ ಹುದ್ದೆ ಪಡೆಯಲು ₹ 1 ಕೋಟಿ ನೀಡಿದ್ದ ಆರೋಪದ ಮೇಲೆ ಎಚ್.ಎಸ್.ಆರ್. ಬಡಾವಣೆ ನಿವಾಸಿ ಸುಧೀಂದ್ರ ರೆಡ್ಡಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಅದೇ ರೀತಿ, ಅಳಿಯನಿಗೆ ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳದಲ್ಲಿ (ಕೆಎಂಎಫ್) ಹುದ್ದೆ ಪಡೆಯಲು ₹ 30 ಲಕ್ಷ ನೀಡಿದ್ದ ಕಮಲಾನಗರ ನಿವಾಸಿ ಗೋವಿಂದಯ್ಯ ಮತ್ತು ಮಗನಿಗೆ ಬಿಬಿಎಂಪಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಹುದ್ದೆ ಪಡೆಯಲು ₹ 30 ಲಕ್ಷ ನೀಡಿದ್ದ ಆರೋಪದ ಮೇಲೆ ರಾಜಾಜಿನಗರ ನಿವಾಸಿ ಡಾ.ಜಿ. ನರಸಿಂಹಸ್ವಾಮಿ ವಿರುದ್ಧ ಎಸಿಬಿ ಪ್ರಕರಣಗಳನ್ನು ದಾಖಲಿಸಿದೆ.

ಯುವರಾಜ ಸ್ವಾಮಿ ಹಣ ಪಡೆದು ವಂಚಿಸಿರುವುದಾಗಿ ಸುಧೀಂದ್ರ ರೆಡ್ಡಿ ಬೆಂಗಳೂರು ನಗರ ಸೈಬರ್ ಅಪರಾಧ ವಿಭಾಗದ ಪೊಲೀಸರಿಗೆ 2020ರ ಡಿಸೆಂಬರ್ 14ರಂದು ದೂರು ನೀಡಿದ್ದರು. ಜ್ಞಾನಭಾರತಿ ಪೊಲೀಸ್ ಠಾಣೆಗೆ ಗೋವಿಂದಯ್ಯ ಮತ್ತು ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಗೆ ನರಸಿಂಹಸ್ವಾಮಿ ದೂರು ನೀಡಿದ್ದರು. ಮೂರೂ ಪ್ರಕರಣಗಳ ತನಿಖೆ ನಡೆಸಿದ್ದ ಪೊಲೀಸರು, ಯುವರಾಜ ಸ್ವಾಮಿ ವಿರುದ್ಧ ಆರೋಪಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡಿದ್ದ ಜನಾಧಿಕಾರ ಸಂಘರ್ಷ ಪರಿಷತ್‌ಸಹ ಅಧ್ಯಕ್ಷ ಆದರ್ಶ್ ಆರ್. ಅಯ್ಯರ್ ಅಕ್ಟೋಬರ್ 8ರಂದು ಎಸಿಬಿಗೆ ದೂರು ನೀಡಿದ್ದರು. ಲಂಚ ನೀಡಿರುವ ವ್ಯಕ್ತಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸುವಂತೆ ಕೋರಿದ್ದರು. ನವೆಂಬರ್ 8ರಂದು ಮೂರು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ.

‘ಯುವರಾಜ ಸ್ವಾಮಿಗೆ ಲಂಚ ನೀಡಿದ್ದ ಆರೋಪದ ಮೇಲೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಎಸ್. ಇಂದ್ರಕಲಾ ಮತ್ತು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮುಖಂಡ ಎಂದು ಗುರುತಿಸಿಕೊಂಡಿರುವ ವಿನಿತ್ ಕುಮಾರ್ ಎಂ.ಸಿ. ಎಂಬುವವರ ವಿರುದ್ಧವೂ ಎಸಿಬಿಗೆ ದೂರು ನೀಡಲಾಗಿತ್ತು. ಅವರ ವಿರುದ್ಧ ಇನ್ನೂ ಯಾವುದೇ ಕ್ರಮ ಜರುಗಿಸಿಲ್ಲ’ ಎಂದು ಆದರ್ಶ್ ಅಯ್ಯರ್ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಜಯದೇವ ಸಂಸ್ಥೆಯ ಆವರಣದಲ್ಲಿ ಇನ್ಫೋಸಿಸ್ ಫೌಂಡೇಷನ್ ವತಿಯಿಂದ ನಿರ್ಮಿಸಿರುವ 350 ಹಾಸಿಗೆಗಳ ಸಾಮರ್ಥ್ಯದ ಹೊಸ ಆಸ್ಪತ್ರೆ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು–ಆರೋಗ್ಯ ಸಚಿವ ಕೆ.ಸುಧಾಕರ್, ಇನ್ಫೋಸಿಸ್ ಸಂಸ್ಥಾಪಕ ಮತ್ತು ಅಧ್ಯಕ್ಷ ನಾರಾಯಣಮೂರ್ತಿ ಎನ್.ಆರ್. ನಾರಾಯಣಮೂರ್ತಿ, ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ, ಸಂಸದ ತೇಜಸ್ವಿ ಸೂರ್ಯ, ಶಾಸಕಿ ಸೌಮ್ಯಾರೆಡ್ಡಿ, ಜಯದೇವ ಸಂಸ್ಥೆಯ ನಿರ್ದೇಶಕ ಸಿ.ಎನ್.ಮಂಜುನಾಥ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಸ್ಥಳ–ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಆವರಣ, ಬನ್ನೇರುಘಟ್ಟ ರಸ್ತೆ, ಮಧ್ಯಾಹ್ನ 3.30



ವಿಶ್ವ ಮಕ್ಕಳ ದಿನದ ಅಂಗವಾಗಿ ‘ಚಿಲ್ಡ್ರನ್ ಟೇಕ್ ಓವರ್’ ಕಾರ್ಯಕ್ರಮ: ಆಯೋಜನೆ–ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ, ಸ್ಥಳ–ದೈಹಿಕ ಅಂಗವಿಕಲರ ಸಂಸ್ಥೆ (ಎಪಿಡಿ), ಲಿಂಗರಾಜಪುರ, ಬೆಳಿಗ್ಗೆ 10.30

ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ ಮತ್ತು ಎಸ್.ಷಡಕ್ಷರಿ ಅವರ ‘ಕ್ಷಣ ಹೊತ್ತು ಆಣಿಮುತ್ತು’ ಪುಸ್ತಕ ಬಿಡುಗಡೆ: ಅತಿಥಿ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಯೋಜನೆ–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ–ಹೋಟೆಲ್ ರಮಣಶ್ರೀ, ರಾಜಾರಾಂ ಮೋಹನ್‌ರಾಯ್ ರಸ್ತೆ, ರಿಚ್‌ಮಂಡ್ ವೃತ್ತ, ಮಧ್ಯಾಹ್ನ 12.30

ಕರ್ನಾಟಕ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ: ಅಧ್ಯಕ್ಷತೆ–ಅಖಿಲ ಕರ್ನಾಟಕ ಮಕ್ಕಳ ಕೂಟದ ಅಧ್ಯಕ್ಷ ಟಿ.ವಿ.ಮಾರುತಿ, ಅತಿಥಿಗಳು–ಸಿ.ಕೆ.ರಾಮೇಗೌಡ, ಎ.ಆರ್. ಮಂಜುನಾಥ್, ಆಯೋಜನೆ ಮತ್ತು ಸ್ಥಳ–ಅಖಿಲ ಕರ್ನಾಟಕ ಮಕ್ಕಳ ಕೂಟದ ಆವರಣ, ಸಂಜೆ 4.30

ಬೆಂಗಳೂರು ವಿಶ್ವವಿದ್ಯಾಲಯದಿಂದ ಸುತ್ತೋಲೆ

ತಡವಾದರೆ ವೇತನ ಕಡಿತ

• ರಶ್ಮಿಬೇಲೂರು

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನೌಕರರು ಕೆಲಸಕ್ಕೆ 15 ನಿಮಿಷ ತಡವಾಗಿ ಹಾಜರಾದರೂ ದಿನದ ಅರ್ಧ ಸಂಬಳ ಕಳೆದುಕೊಳ್ಳಲಿದ್ದಾರೆ. ಈ ಸಂಬಂಧ ವಿಶ್ವವಿದ್ಯಾಲಯ ಸುತ್ತೋಲೆ ಹೊರಡಿಸಿದೆ.

ವಿಶ್ವವಿದ್ಯಾಲಯದ ಹಲವು ಸಿಬ್ಬಂದಿ ಕೆಲಸಕ್ಕೆ ತಡವಾಗಿ ಹಾಜರಾಗುವುದು, ಕೆಲಸದ ಸಮಯವನ್ನು ಪಾಲಿಸದಿರುವುದು, ನೋಂದಣಿ ಪುಸ್ತಕದಲ್ಲಿ ಸಹಿ ಮಾಡದಿರುವುದು, ಕೆಲಸದ ಸಮಯದಲ್ಲಿ ಯಾವುದೇ ಸೂಚನೆಯಿಲ್ಲದೆ ಹೊರ ಹೋಗುವುದನ್ನು ನಿಯಂತ್ರಿಸುವ ಸಲುವಾಗಿ ಈ ಸುತ್ತೋಲೆ ಹೊರಡಿಸಿದೆ.

‘ಕೆಲಸಕ್ಕೆ ಬರುವ ಮತ್ತು ನಿರ್ಗಮನದ ಸಮಯದಲ್ಲಿ ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಲು ಎಲ್ಲ ಸಿಬ್ಬಂದಿಗೆ ಸೂಚನೆಗಳಿದ್ದರೂ, ಅನೇಕರು ಅದನ್ನು ಪಾಲಿಸುತ್ತಿಲ್ಲ. ಕೆಲವು ವಿಭಾಗಗಳನ್ನು ಹೊರತುಪಡಿಸಿ, ಉಳಿದ ಬಹುತೇಕ ವಿಭಾಗಗಳು ಈ ವಿಚಾರದಲ್ಲಿ ನಿರ್ಲಕ್ಷ್ಯ ತೋರಿವೆ. ಪ್ರತಿಯೊಬ್ಬರೂ ಕೆಲಸಕ್ಕೆ ಆಗಮನ ಮತ್ತು ನಿರ್ಗಮನದ ಸಮಯದಲ್ಲಿ ದಿನಕ್ಕೆ ಎರಡು ಬಾರಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವುದು ಕಡ್ಡಾಯ’ ಎಂದು ವಿಶ್ವವಿದ್ಯಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

ಇನ್ನು ಮುಂದೆ ವಿಶ್ವವಿದ್ಯಾಲಯವು ಸಿಬ್ಬಂದಿಯ ಕೆಲಸದ ಅವಧಿಯನ್ನು ಮೇಲ್ವಿಚಾರಣೆ ನಡೆಸಲಿದ್ದು, ಊಟದ ವಿರಾಮದ ಸಮಯದಲ್ಲೂ ಸಿಬ್ಬಂದಿ ನಿಯಮಗಳನ್ನು ಪಾಲಿಸಬೇಕು.

ಸುತ್ತೋಲೆಯಲ್ಲಿ ಉಲ್ಲೇಖಿಸಿರುವಂತೆ, ‘ಮಧ್ಯಾಹ್ನ 1.30ರಿಂದ 2 ಗಂಟೆಯವರೆಗೆ ಊಟದ ವಿರಾಮ ಇರಲಿದ್ದು, ಜೊತೆಗೆ 10 ನಿಮಿಷ ಕಾಲಾವಕಾಶ ನೀಡಲಾಗುವುದು. ಆ ಸಮಯವೂ ಮೀರಿದ ನಂತರ ಕೆಲಸಕ್ಕೆ ಮರಳಿದರೆ, ಅವರು ತಮ್ಮ ಸಾಮಾನ್ಯ ರಜೆಯಿಂದ (ಸಿಎಲ್) ಅರ್ಧ ದಿನವನ್ನು ಕಳೆದುಕೊಳ್ಳುತ್ತಾರೆ. ಒಂದು ವೇಳೆ ಸಿಬ್ಬಂದಿಗೆ ಸಿಎಲ್‌ಗಳು ಇಲ್ಲದಿದ್ದರೆ, ಪಾವತಿಸಿದ ರಜೆಯಲ್ಲಿ ಅರ್ಧ ದಿನ ಕಳೆದುಕೊಳ್ಳುತ್ತಾರೆ’ ಎಂದು ಹೇಳಲಾಗಿದೆ.

‘ಅರ್ಧ ದಿನಕ್ಕೂ ಅನಧಿಕೃತವಾಗಿ ಕೆಲಸಕ್ಕೆ ಗೈರಾದರೆ, ಸಂಬಳ ಮತ್ತು ಇತರ ಸವಲತ್ತುಗಳ ಅರ್ಧ ದಿನದ ವೆಚ್ಚ ಕಡಿತವಾಗಲಿದೆ. ತುರ್ತು ಸಂದರ್ಭಗಳಲ್ಲಿ ಕರ್ತವ್ಯದ ನಿಮಿತ್ತ ಹೊರ ಹೋಗುವಾಗ ವಿಭಾಗದ ಮುಖ್ಯಸ್ಥರ ಅನುಮತಿ ಪಡೆಯುವುದು ಹಾಗೂ ಹಾಜರಾತಿ ಪುಸ್ತಕದಲ್ಲಿ ಸಹಿ ಮತ್ತು ಕಾರಣ ನಮೂದಿಸುವುದು ಕಡ್ಡಾಯ’.

‘ಈ ತುರ್ತು ಅನುಮತಿಯು 30 ನಿಮಿಷಕ್ಕಿಂತಲೂ ಹೆಚ್ಚು ಇರುವಂತಿಲ್ಲ. ಅರ್ಧ ಗಂಟೆಗಿಂತ ಹೆಚ್ಚಿನ ಸಮಯ ಹೊರಗೆ ಹೋಗಬೇಕಾದರೆ ರಜೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಗೈರುಹಾಜರಿ ಎಂದು ಪರಿಗಣಿಸಲಾಗುವುದು. ವಿಶ್ವವಿದ್ಯಾಲಯದಲ್ಲಿ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಜಾರಿಯಾಗುವವರೆಗೆ ಇದು ಜಾರಿಯಲ್ಲಿರುತ್ತದೆ’ ಎಂದೂ ಸುತ್ತೋಲೆಯಲ್ಲಿದೆ.

ಸಿಬ್ಬಂದಿ ಅತೃಪ್ತಿ

ಈ ಸುತ್ತೋಲೆಗೆ ಬೋಧಕ ಸಿಬ್ಬಂದಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ‘ಕೆಲವು ವಿಭಾಗಗಳಲ್ಲಿ ಶಿಕ್ಷಕರು ಮತ್ತು ವಿಭಾಗದ ಮುಖ್ಯಸ್ಥರ ನಡುವೆ ಭಿನ್ನಾಭಿಪ್ರಾಯಗಳಿವೆ. ಈ ರೀತಿಯ ಸುತ್ತೋಲೆಗಳು ಕಿರುಕುಳಕ್ಕೆ ಕಾರಣವಾಗುತ್ತವೆ’ ಎಂದು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗವೊಂದರ ಸಿಬ್ಬಂದಿ ತಿಳಿಸಿದರು.

ವಿಶ್ವನಾಥ್‌ಗೆ ಶಸ್ತ್ರಚಿಕಿತ್ಸೆ

ಮೈಸೂರು: ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು ಪೃಷ್ಠ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದು, ಇಲ್ಲಿನ ಅಪೋಲೊ–ಬಿಜಿಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಎಚ್.ವಿಶ್ವನಾಥ್

ಸೊಂಟದ ಬಳಿ ನೋವು ಹೆಚ್ಚಿದ್ದರಿಂದ ಬೆಂಗಳೂರಿನ ಮಾರತ್ತಹಳ್ಳಿಯಲ್ಲಿರುವ ಸಕ್ರಾ ಆಸ್ಪತ್ರೆಗೆ ಅವರನ್ನು ಅ.27ರಂದು ದಾಖಲಿಸಲಾಗಿತ್ತು. ನ.2ರಂದು ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದ್ದರು.

‘ಬೆಂಗಳೂರಿನಿಂದ ಮೈಸೂರಿಗೆ ಕರೆತಂದು ಅಪೋಲೊ–ಬಿಜಿಎಸ್ ಆಸ್ಪತ್ರೆಗೆ ದಾಖಲಿಸಿದೆವು. ಚೇತರಿಸಿಕೊಳ್ಳುತ್ತಿದ್ದು, ಒಂದೆರಡು ದಿನಗಳಲ್ಲಿ ಮನೆಗೆ ತೆರಳಲಿದ್ದಾರೆ. ವಿಶ್ರಾಂತಿ ಪಡೆಯಲು ವೈದ್ಯರು ಸೂಚಿಸಿದ್ದಾರೆ’ ಎಂದು ವಿಶ್ವನಾಥ್ ಅವರ ಪುತ್ರ ಅಮಿತ್ ದೇವರಹಟ್ಟಿ ‘ಪ್ರಜಾವಾಣಿ’ಗೆ ತಿಳಿಸಿದರು.

ಕಾಗಿನೆಲೆ ಕನಕಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಸಂಸದ ಪ್ರತಾಪ ಸಿಂಹ, ಬಿಜೆಪಿ ಮುಖಂಡ ಸಿ.ಎಚ್.ವಿಜಯಶಂಕರ್, ಕಾಂಗ್ರೆಸ್ ಮುಖಂಡ ಎಂ.ಕೆ. ಸೋಮಶೇಖರ್ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದಾರೆ.

ಕಟ್ಟಡಗಳಿಗೆ ನಾಳೆಯಿಂದ ಮತ್ತೆ ಮಂಜೂರಾತಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ನಿರ್ಮಾಣ ಯೋಜನೆಗಳಿಗೆ ಮಂಜೂರಾತಿ ನೀಡುವ ಪ್ರಕ್ರಿಯೆಯನ್ನು ಬಿಬಿಎಂಪಿ ಗುರುವಾರದಿಂದ ಪುನರಾರಂಭ ಮಾಡಲು ಚಿಂತನೆ ನಡೆಸಿದೆ.

ಹೈಕೋರ್ಟ್ ನಿರ್ದೇಶನ ಪಾಲನೆಗೆ ಸಂಬಂಧಿಸಿ ಎದುರಾಗಿದ್ದ ಕೆಲವು ತಾಂತ್ರಿಕ ಸಮಸ್ಯೆಗಳಿಂದಾಗಿ ಬಿಬಿಎಂಪಿಯು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಹೊಸ ಯೋಜನೆಗಳಿಗೆ ಮಂಜೂರಾತಿ ನೀಡುವುದನ್ನು ಸ್ಥಗಿತಗೊಳಿಸಿತ್ತು.

ಭೂಮಾಲೀಕರಿಂದ, ರಿಯಲ್ ಎಸ್ಟೇಟ್ ಡೆವಲಪರ್‌ಗಳಿಂದ ನೆಲಬಾಡಿಗೆ, ಪರವಾನಗಿ ಶುಲ್ಕ, ಭದ್ರತಾಶುಲ್ಕ, ಭದ್ರತಾ ಠೇವಣಿ ಮತ್ತಿತರ ಶುಲ್ಕಗಳನ್ನು ಸ್ವೀಕರಿಸಲು ಬಿಬಿಎಂಪಿ ಬೈಲಾಗಳಲ್ಲಿ ಅವಕಾಶ ಇಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು. ಆ ಬಳಿಕ ಕಟ್ಟಡ ಯೋಜನೆಗಳಿಗೆ ಮಂಜೂರಾತಿ ನೀಡುವುದನ್ನ ಸ್ಥಗಿತಗೊಳಿಸಲಾಗಿತ್ತು.

ಕಟ್ಟಡ ಯೋಜನೆಗೆ ಮಂಜೂರಾತಿ ನೀಡುವಾಗ ಪಾಲಿಕೆಗಳು ಶುಲ್ಕ ಸಂಗ್ರಹ ಮಾಡಲು ಅವಕಾಶ ಕಲ್ಪಿಸುವ ಸಲುವಾಗಿ ರಾಜ್ಯ ಸರ್ಕಾರವು 1976ರ ಕರ್ನಾಟಕ ಪೌರನಿಗಮಗಳ ಕಾಯ್ದೆ ಹಾಗೂ 2020ರ ಬಿಬಿಎಂಪಿ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿ ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ಹೊಸ ತಿದ್ದುಪಡಿಯ ಪ್ರಕಾರ ಕಟ್ಟಡ ಯೋಜನೆಗೆ ಮಂಜೂರಾತಿ ನೀಡುವಾಗ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪತ್ರ ನೀಡುವಾಗ, ನಿಗದಿತ ಶುಲ್ಕಗಳನ್ನು ಸಂಗ್ರಹಿಸಲು ಆಯುಕ್ತರಿಗೆ ಅಧಿಕಾರ ನೀಡಲಾಗಿದೆ.

ಯೂನಿಯನ್ ಬ್ಯಾಂಕ್‌ನ ಡಿಜಿಟಲ್ ಕೇಂದ್ರ ಆರಂಭ

ಬೆಂಗಳೂರು: ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನಗರದ ಮಡಿವಾಳದ ಮಾರ್ಕೆಟ್ ಸ್ಕ್ವೇರ್ ಮಾಲ್‌ನಲ್ಲಿ ಸಂಪೂರ್ಣ ಡಿಜಿಟಲ್ ಸೇವಾ ಕೇಂದ್ರವನ್ನು ಈಚೆಗೆ ಆರಂಭಿಸಿದೆ.

ಬ್ಯಾಂಕ್‌ನ 103ನೆಯ ಸಂಸ್ಥಾಪನಾ ದಿನದ ಅಂಗವಾಗಿ ಈ ಕೇಂದ್ರವನ್ನು ಆರಂಭಿಸಿರುವುದಾಗಿ ಪ್ರಕಟಣೆ ತಿಳಿಸಿದೆ. ಬ್ಯಾಂಕ್‌ನ ಸಿಇಒ ರಾಜ್ ಕಿರಣ್ ರಾಯ್ ಅವರು ಇದನ್ನು ವರ್ಚುವಲ್ ಕಾರ್ಯಕ್ರಮದಲ್ಲಿ ಉದ್ಘಾಟಿಸಿದರು. ಖಾತೆ ತೆರೆಯಲು, ನಗದು ಜಮಾ ಮಾಡಲು, ನಗದು ಪಡೆಯಲು ಗ್ರಾಹಕರು ಈ ಕೇಂದ್ರಕ್ಕೆ ಭೇಟಿ ನೀಡಬಹುದು.

ನಾಳೆಯಿಂದ ರಾತ್ರಿ 11ರವರೆಗೂ ಮೆಟ್ರೊ ಸೇವೆ

ಒಂದನೇ ಪುಟದಿಂದ

ನಗರದ ಎಲ್ಲ ಮೆಟ್ರೊ ಟರ್ಮಿನಲ್ ನಿಲ್ದಾಣಗಳಿಂದ ಭಾನುವಾರದಂದು ಬೆಳಿಗ್ಗೆ 7ಕ್ಕೆ, ಉಳಿದೆಲ್ಲ ದಿನಗಳಲ್ಲಿ ಬೆಳಿಗ್ಗೆ 6 ಗಂಟೆಗೆ ದಿನದ ಮೊದಲ ಮೆಟ್ರೊ ರೈಲು ಸಂಚಾರ ಆರಂಭಿಸಲಿದೆ. ದಿನದ ಕೊನೆಯ ರೈಲು ರಾತ್ರಿ 11 ಗಂಟೆಗೆ ಟರ್ಮಿನಲ್ ನಿಲ್ದಾಣಗಳಿಂದ ಹೊರಡಲಿದೆ. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಇಂಟರ್‌ಚೇಂಜ್ ನಿಲ್ದಾಣದಿಂದ ದಿನದ ಕೊನೆಯ ರೈಲುಗಳು ರಾತ್ರಿ 11.30ಕ್ಕೆ ಹೊರಡಲಿವೆ.

ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ಜಾರಿಗೊಳಿಸಿದ್ದ ರಾತ್ರಿ ಕರ್ಫ್ಯೂವನ್ನು ಸರ್ಕಾರ ಹಿಂಪಡೆದಿದೆ. ವ್ಯಾಪಾರ ವಹಿವಾಟುಗಳು ಸಹಜ ಸ್ಥಿತಿಗೆ ಮರಳುತ್ತಿವೆ. ಅಂಗಡಿ ಮಳಿಗೆಗಳು ತಡರಾತ್ರಿವರೆಗೂ ಮುಂದುವರಿಯುತ್ತಿವೆ. ಕೋವಿಡ್ ಲಾಕ್‌ಡೌನ್ ವೇಳೆ ಬಾಗಿಲು ಮುಚ್ಚಿದ್ದ ಕಚೇರಿಗಳೂ ಪುನರಾರಂಭಗೊಂಡಿವೆ. ಕಾಸ್ಮೋಪಾಲಿಟನ್ ನಗರದ ‘ನೈಟ್ ಲೈಫ್’ ಸಂಸ್ಕೃತಿ ಮತ್ತೆ ಜೀವಕಳೆ ಪಡೆಯುತ್ತಿದೆ. ಹಾಗಾಗಿ ನಮ್ಮ ಮೆಟ್ರೊ ಸೇವೆಯ ಅವಧಿಯನ್ನು ಮತ್ತಷ್ಟು ವಿಸ್ತರಿಸಬೇಕು. ಇಂತಹ ಸಂದರ್ಭದಲ್ಲಿ ಮಧ್ಯ ರಾತ್ರಿವರೆಗೂ ಮೆಟ್ರೊ ರೈಲು ಸೇವೆ ಲಭ್ಯ ಇರಬೇಕು ಎಂಬ ಕೂಗೆದ್ದಿತ್ತು.

‘ನಮ್ಮ ಮೆಟ್ರೊ’ ಸೇವೆಯನ್ನು ರಾತ್ರಿ 11ರವರೆಗೂ ವಿಸ್ತರಿಸಿರುವುದನ್ನು ಪ್ರಯಾಣಿಕರು ಹಾಗೂ ವರ್ತಕರ ಸಂಘಟನೆಗಳು ಸ್ವಾಗತಿಸಿವೆ.

‘ಪ್ರಯಾಣಿಕರ ಸಂಖ್ಯೆ ಕ್ರಮೇಣ ಹೆಚ್ಚಳವಾಗಲಿದೆ’



‘ಸಾರ್ವಜನಿಕರಿಂದ ಬೇಡಿಕೆ ಬಂದಿದ್ದರಿಂದ ರಾತ್ರಿ ವೇಳೆ ಮೆಟ್ರೊ ವಾಣಿಜ್ಯ ಸೇವೆಯನ್ನು ವಿಸ್ತರಿಸಲು ನಿರ್ಧರಿಸಿದ್ದೇವೆ. ರಾತ್ರಿ ಕರ್ಫ್ಯೂ ಹಿಂಪಡೆದ ಬಳಿಕ ರಾತ್ರಿ ವೇಳೆ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗಿದೆ. ಮೆಟ್ರೊ ಸೇವೆ ವಿಸ್ತರಿಸಿದ ಬಳಿಕ ಪ್ರಯಾಣಿಕರ ಸಂಖ್ಯೆಯೂ ಕ್ರಮೇಣ ಹೆಚ್ಚಳವಾಗಲಿದೆ ಎಂಬ ವಿಶ್ವಾಸ ಇದೆ.

ಅಂಜುಂ ಪರ್ವೇಜ್
ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ

‘ಕೊನೆ ತಾಣಕ್ಕೆ ಬಸ್ ಸೌಕರ್ಯ ಸಿಗಲಿ’



ನಮ್ಮ ಮೆಟ್ರೊ ಸೇವೆಯನ್ನು ರಾತ್ರಿ 11ರ ವರೆಗೆ ವಿಸ್ತರಿಸಿದ್ದರಿಂದ ಮಹಿಳೆಯರಿಗೆ ತುಂಬಾ ಅನುಕೂಲ. ಬಹುತೇಕ ಕಂಪನಿಗಳ ಕಚೇರಿಗಳು ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಮತ್ತೆ ಕಾರ್ಯಾರಂಭ ಮಾಡಿವೆ. ತಡರಾತ್ರಿವರೆಗೆ ಕೆಲಸಮಾಡಬೇಕಾದ ಮಹಿಳಾ ಉದ್ಯೋಗಿಗಳು ಓಲಾ, ಉಬರ್‌ನಂತಹ ಕಾರುಗಳಲ್ಲಿ ಮನೆ ಸೇರಬೇಕಾಗುತ್ತಿತ್ತು. ರಾತ್ರಿ 10 ಗಂಟೆ ನಂತರದ ಪ್ರಯಾಣಕ್ಕೆ ದುಬಾರಿ ವೆಚ್ಚ ತಗಲುತ್ತಿತ್ತು. ಇದು ತಪ್ಪಲಿದೆ. ಮೆಟ್ರೊ ನಿಲ್ದಾಣದಿಂದ ಕೊನೆ ತಾಣ ತಲುಪಲು ಬಸ್ ಸೌಕರ್ಯವನ್ನೂ ತಡರಾತ್ರಿವರೆಗೂ ವಿಸ್ತರಿಸಿದರೆ ಇನ್ನೂ ಅನುಕೂಲ.

ಲಲಿತಾಂಬ, ಎಚ್‌ಎಸ್‌ಆರ್ ಬಡಾವಣೆ ನಿವಾಸಿ

‘ನೆಲ ಕಚ್ಚಿದ್ದ ವ್ಯಾಪಾರ ಮತ್ತೆ ಚೇತರಿಸಲಿದೆ’



ನಮ್ಮ ಮೆಟ್ರೊ ಸೇವೆಯನ್ನು ರಾತ್ರಿ 11ರ ವರೆಗೆ ವಿಸ್ತರಣೆ ಮಾಡುವುದರಿಂದ ವರ್ತಕರಿಗೂ ಅನುಕೂಲವಾಗಲಿದೆ. ರಾತ್ರಿ ಕರ್ಫ್ಯೂ ತೆರವಿನ ಬಳಿಕ ವ್ಯಾಪಾರ ವಹಿವಾಟು ವೃದ್ಧಿಸುತ್ತಿದೆ. ಎರಡು ವರ್ಷಗಳಲ್ಲಿ ಆಗಿರುವ ನಷ್ಟವನ್ನು ಸರಿದೂಗಿಸಿಕೊಳ್ಳಲು ಕೆಲವು ಮಳಿಗೆಗಳು ರಾತ್ರಿ 10 ಗಂಟೆ ಬಳಿಕವೂ ವಹಿವಾಟು ಮುಂದುವರಿಸುತ್ತಿವೆ. ಮಳಿಗೆಗಳ ಕಾರ್ಮಿಕರು ಮನೆ ತಲುಪಲು ಸಮಸ್ಯೆ ಆಗುತ್ತಿತ್ತು. ಮೆಟ್ರೊ ಸೇವೆ ಮಧ್ಯ ರಾತ್ರಿ ವರೆಗೆ ಲಭ್ಯ ಇದ್ದರೆ ಗ್ರಾಹಕರ ಸಂಚಾರ ಸಮಸ್ಯೆಯೂ ನೀಗಿದಂತಾಗುತ್ತದೆ

ಪಿ.ಎಚ್.ರಾಜಪುರೋಹಿತ್, ಭಾರತೀಯ ವ್ಯಾಪಾರ ಮಂಡಲ, ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ

‘ಮಹಿಳೆಯರ ಸುರಕ್ಷಿತ ಪ್ರಯಾಣಕ್ಕೆ ಅನುಕೂಲ’



ರಾತ್ರಿ ಕರ್ಫ್ಯೂ ತೆರವಿನ ಬಳಿಕ ಕಚೇರಿಗಳು ಆರಂಭವಾಗಿವೆ. ರಾತ್ರಿ 10 ಗಂಟೆ ಬಳಿಕವೂ ಕೆಲಸ ಮಾಡಬೇಕಾದ ಮಹಿಳಾ ಉದ್ಯೋಗಿಗಳಿಗೆ ಇದರಿಂದ ಅನುಕೂಲವಾಗಲಿದೆ. ನಮ್ಮ ಮೆಟ್ರೊವಂತೂ ಈಗ ನಗರದ ಜೀವನಾಡಿಯಂತಾಗಿದೆ. ರಾತ್ರಿ ವೇಳೆ ಸಂಚಾರ ದಟ್ಟಣೆಯ ಕಿರಿಕಿರಿ ಇಲ್ಲದೆಯೇ ಕಡಿಮೆ ಅವಧಿಯಲ್ಲಿ ಸುರಕ್ಷಿತವಾಗಿ ಮನೆ ತಲುಪಲು ಮೆಟ್ರೊ ಸಹಕಾರಿ.

ಆಶಾ ರಘು, ಕೆ.ಆರ್‌.ಪುರ

ಬುಧವಾರ • ನವೆಂಬರ್ 17, 2021 ಪ್ರಜಾವಾಣಿ





ಮೈಸೂರು ರಸ್ತೆಯಲ್ಲಿ ಮಂಗಳವಾರ ರಾತ್ರಿ ಮಳೆಯಲ್ಲಿಯೇ ವಾಹನ ಸವಾರರು ಸಾಗಿದರು (ಎಡ ಚಿತ್ರ), ಕೋಡಿಗೆಹಳ್ಳಿ ಸಮೀಪ ರಸ್ತೆ ದಾಟಲು ನಿವಾಸಿಗಳು ಪರದಾಡಿದರು —ಪ್ರಜಾವಾಣಿ ಚಿತ್ರಗಳು

ನವೆಂಬರ್ 15ರವರೆಗೆ 79 ಮಿ.ಮೀ ಮಳೆ • ಮಂಗಳವಾರ ರಾತ್ರಿಯೂ ವರುಣನ ಆರ್ಭಟ • ವಾಹನ ದಟ್ಟಣೆ

ದಾಖಲೆ ಪ್ರಮಾಣದ ವರ್ಷಧಾರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 'ವರುಣನ ಆಟ' ಮಂಗಳವಾರವೂ ಮುಂದುವರಿದಿದ್ದು, ನವೆಂಬರ್ ತಿಂಗಳ ಮೊದಲಾರ್ಧದಲ್ಲಿ ದಾಖಲೆ ಪ್ರಮಾಣದಲ್ಲಿ ಮಳೆಯಾಗಿದೆ.

ನವೆಂಬರ್ 1ರಿಂದ 15ರ ಅವಧಿಯಲ್ಲಿ ಒಟ್ಟು 79 ಮಿ.ಮೀ ಮಳೆ ಸುರಿದಿದೆ. ಹಿಂದೆ ಈ ಅವಧಿಯಲ್ಲಿ 32 ಮಿ.ಮೀ. ಮಳೆಯಷ್ಟೇ ದಾಖಲಾಗಿತ್ತು. 2016ರ ನಂತರ ಬೆಂಗಳೂರು ನಗರ ಜಿಲ್ಲೆಯಲ್ಲಿ ದಾಖಲಾಗಿರುವ ಗರಿಷ್ಠ ಮಳೆ ಪ್ರಮಾಣ ಇದಾಗಿದೆ.

ವಾಯುಭಾರ ಕುಸಿತದಿಂದಾಗಿ ನಗರದಲ್ಲಿ ಎರಡು ವಾರಗಳಿಂದ ಸತತವಾಗಿ ಮಳೆ ಸುರಿಯುತ್ತಿದೆ. ಬೆಂಗಳೂರು ದಕ್ಷಿಣ ವಲಯದ ವಿಶ್ವೇಶ್ವರಪುರಂ ವಾರ್ಡ್‌ನಲ್ಲಿ 15 ದಿನಗಳಲ್ಲಿ 192.5 ಮಿ.ಮೀ.ಮಳೆಯಾಗಿದೆ. ಇದೇ ವಲಯದ ವಿದ್ಯಾಪೀಠದಲ್ಲಿ ದಿನವೊಂದರಲ್ಲಿ ಗರಿಷ್ಠ ಮಳೆ ಸುರಿದಿರುವುದು ದಾಖಲಾಗಿದ್ದು, ಇಲ್ಲಿ ನವೆಂಬರ್ 5ರಂದು 135 ಮಿ.ಮೀ. ಮಳೆ ಸುರಿದಿದೆ..

ನವೆಂಬರ್‌ನಲ್ಲಿ ಈವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಎಂಟು ವಲಯಗಳಲ್ಲೂ ನಿಗದಿಗಿಂತಲೂ ಅಧಿಕ ಮಳೆಯಾಗಿದೆ. ದಕ್ಷಿಣ ವಲಯದಲ್ಲಿ ಗರಿಷ್ಠ (116 ಮಿ.ಮೀ) ಮಳೆ ವರದಿಯಾಗಿದೆ. ಹಿಂದೆ ಈ ವಲಯದಲ್ಲಿ ಕೇವಲ 35 ಮಿ.ಮೀ. ಮಳೆ ದಾಖಲಾಗಿತ್ತು.

ಅಕ್ಟೋಬರ್ 1ರಿಂದ ನವೆಂಬರ್ 15ರ ಅವಧಿಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ದಾಖಲೆಯ 426.8 ಮಿ.ಮೀ. ಮಳೆಯಾಗಿದೆ. ಹಿಂದೆ ಇದೇ ಅವಧಿಯಲ್ಲಿ ಕೇವಲ 83.8 ಮಿ.ಮೀ. ಮಳೆಯಾಗಿತ್ತು.



ಕೋಡಿಗೆಹಳ್ಳಿಯಲ್ಲಿ ಮನೆಗೆ ನುಗ್ಗಿದ್ದ ಮಳೆ ನೀರನ್ನು ಮಹಿಳೆಯೊಬ್ಬರು ಹೊರಹಾಕಿದರು

ಬೆಂಗಳೂರು ದಕ್ಷಿಣ ವಲಯದ ಹಲವೆಡೆ ಧಾರಾಕಾರ ಮಳೆ

ನಗರದಲ್ಲಿ ಮಂಗಳವಾರವೂ ಮಳೆ ಸುರಿಯಿತು. ಕೆಲ ಭಾಗಗಳಲ್ಲಿ ಮುಂಜಾನೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಹತ್ತು ಗಂಟೆಯ ನಂತರ ಸೂರ್ಯನ ದರ್ಶನವಾಯಿತು. ಸಂಜೆಯವರೆಗೆ ಬಿಸಿಲು ಕಾಣಿಸಿಕೊಂಡಿತ್ತು. ಕತ್ತಲು ಆವರಿಸಿದ ಬಳಿಕ ಮಳೆ ಶುರುವಾಯಿತು.

ಕೃಷ್ಣರಾಜ ಮಾರುಕಟ್ಟೆ, ಗೋವಿಂದರಾಜನಗರ, ವಿಜಯನಗರ, ಅತ್ತಿಗುಪ್ಪೆ, ದೀಪಾಂಜಲಿ ನಗರ, ಹೊಸಕೆರೆಹಳ್ಳಿ, ಗಿರಿನಗರ, ಹನುಮಂತನಗರ, ಶ್ರೀನಗರ, ಶ್ರೀನಿವಾಸನಗರ, ವಿಶ್ವೇಶ್ವರಪುರಂ, ಬಸವನಗುಡಿ, ಬನಶಂಕರಿ ಸೇರಿದಂತೆ ಬೆಂಗಳೂರು ದಕ್ಷಿಣ ವಲಯದ ಹಲವೆಡೆ ಧಾರಾಕಾರ ಮಳೆ ಸುರಿಯಿತು.

ಎಂ.ಜಿ. ರಸ್ತೆ, ಮೆಜೆಸ್ಟಿಕ್, ಇಂದಿರಾನಗರ, ಹಲಸೂರು, ರಾಮಮೂರ್ತಿನಗರ, ಮಲ್ಲೇಶ್ವರ, ಜೀವನ್‌ಬಿಮಾ ನಗರ, ಕಸ್ತೂರಿನಗರ, ಬಾಣಸವಾಡಿ, ಕೋರಮಂಗಲ, ಎಚ್‌ಎಸ್‌ಆರ್ ಬಡಾವಣೆ, ಬೊಮ್ಮನಹಳ್ಳಿ, ಕೆ.ಆರ್.ಪುರ, ರಾಮಮೂರ್ತಿನಗರ ಸೇರಿದಂತೆ ಹಲವೆಡೆಯೂ ಮಳೆ ಸುರಿಯಿತು. ಹೀಗಾಗಿ ರಸ್ತೆಗಳಲ್ಲಿ ನೀರು ಹರಿಯಿತು.

ಅಲ್ಲಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರು ಪರದಾಡುವಂತಾಯಿತು. ಕೆಲವೆಡೆ ಸಂಚಾರ ದಟ್ಟಣೆಯೂ ಏರ್ಪಟ್ಟಿತ್ತು. ದ್ವಿಚಕ್ರ ವಾಹನ ಸವಾರರು ರಸ್ತೆ ಬದಿಯಲ್ಲೇ ಬೈಕ್‌ಗಳನ್ನು ನಿಲ್ಲಿಸಿ ಅಂಗಡಿ ಹಾಗೂ ಮಳಿಗೆಗಳ ಬಳಿ ಆಶ್ರಯ ಪಡೆದುಕೊಳ್ಳುತ್ತಿದ್ದ ದೃಶ್ಯ ಅಲ್ಲಲ್ಲಿ ಕಂಡುಬಂತು.

ಕೆಲಹೊತ್ತು ಕಾದರೂ ಮಳೆ ನಿಲ್ಲುವ ಲಕ್ಷಣ ಗೋಚರಿಸದ್ದರಿಂದ ಹಲವರು ಮಳೆಯ ನಡುವೆಯೇ ಬೈಕ್ ಚಲಾಯಿಸಿಕೊಂಡು ಹೋಗುತ್ತಿದ್ದರು. ಕಚೇರಿಯಿಂದ ಮನೆಗೆ ಹೊರಟಿದ್ದವರು ಕೊಡೆ ಹಿಡಿದುಕೊಂಡೇ ರಸ್ತೆಗಳಲ್ಲಿ ಹೆಜ್ಜೆ ಹಾಕಿದರು.

ಸುದ್ದಿ 2 ನಿಮಿಷ

ಪ್ರತಾಪ್ ಸಿಂಹ ಹೇಳಿಕೆಗೆ ಆದಿಜಾಂಬವ ಸಂಘ ಖಂಡನೆ

ಬೆಂಗಳೂರು: 'ಸಂಗೀತ ನಿರ್ದೇಶಕ ಹಂಸಲೇಖ ಅವರನ್ನು ಉದ್ದೇಶಿಸಿ 'ಮುಸ್ಲಿಮರನ್ನು ಕರೆಸಿ ಹಂದಿ ಮಾಂಸದ ಊಟ ಬಡಿಸಿ' ಎಂದಿರುವ ಸಂಸದ ಪ್ರತಾಪ ಸಿಂಹ ಅವರ ಪ್ರಚೋದನಕಾರಿ ಹೇಳಿಕೆ ಖಂಡನೀಯ' ಎಂದು ರಾಜ್ಯ ಆದಿಜಾಂಬವ ಸಂಘ ತಿಳಿಸಿದೆ.

ಸಂಘದ ಅಧ್ಯಕ್ಷ ಜಂಬೂದ್ವೀಪ ಸಿದ್ಧರಾಜು, 'ಹಂಸಲೇಖ ಅವರು ಯಾರನ್ನೋ ಪ್ರಚೋದಿಸುವ ಅಥವಾ ನಿಂದಿಸುವ ಮಾತುಗಳನ್ನು ಆಡಿಲ್ಲ. ಸಮಸಮಾಜ ನಿರ್ಮಾಣದಲ್ಲಿ ನಂಬಿಕೆ ಇರುವ ಹಾಗೂ ಅಸ್ಪೃಶ್ಯತೆ ವಿರೋಧಿಸುವ ಸಹೃದಯರಂತೆ ಹಂಸಲೇಖ ಅವರೂ ತಮ್ಮ ಬೇಸರ ವ್ಯಕ್ತಪಡಿಸಿದ್ದಾರೆ' ಎಂದಿದ್ದಾರೆ.

'ಆದರೆ, ಈ ವಿಚಾರದಲ್ಲಿ ಕೆಲ ಮತಾಂಧರು ಹಾಗೂ ಜಾತಿವಾದಿಗಳು ಪುಕ್ಕಟೆ ಪ್ರಚಾರಕ್ಕಾಗಿ ಹಂಸಲೇಖ ಅವರನ್ನು ನಿಂದಿಸುವ ಪ್ರಯತ್ನ ಮಾಡಿರುವುದನ್ನು ಆದಿಜಾಂಬವ ಸಂಘ ಖಂಡಿಸುತ್ತದೆ' ಎಂದೂ ಹೇಳಿದ್ದಾರೆ.

'ಮಹಿಳಾ ಉದ್ಯಮಕ್ಕೆ ಉತ್ತೇಜನ'



ಬೆಂಗಳೂರು: 'ಮಹಿಳಾ ಉದ್ಯಮಿಗಳ ಉತ್ತೇಜನಕ್ಕೆ ಸರ್ಕಾರ ಬದ್ಧವಾಗಿದ್ದು, ಉದ್ಯಮಕ್ಕೆ ಸಂಬಂಧಿಸಿದ ಪೂರಕ ಯೋಜನೆಗಳಿಗೆ ಒತ್ತು ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಇದೇ 18ರಂದು ಲಲಿತ್ ಅಶೋಕ್ ಹೋಟೆಲ್‌ನಲ್ಲಿ ನಡೆಯಲಿರುವ 'ಉಬುಂಟು' ಸಮಾವೇಶಕ್ಕೆ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ ಅವರ ನಿಯೋಗವು ಆಹ್ವಾನಿಸಿತು.

'ಸ್ವಾವಲಂಬನೆ ಹಾಗೂ ಸ್ಥಿರತೆಗೆ ಆದ್ಯತೆ ನೀಡಲು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯಮಗಳಲ್ಲಿ ತೊಡಗಬೇಕು' ಎಂದರು.

'ಸರ್ಕಾರವು ಮಹಿಳಾ ಉದ್ಯಮಕ್ಕೆ ಹೆಚ್ಚಿನ ಅನುದಾನ ನೀಡಿ, ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಬೇಕು' ಎಂದು ರತ್ನಪ್ರಭಾ ಅವರು ಮುಖ್ಯಮಂತ್ರಿಗೆ ಮನವಿ ಮಾಡಿಕೊಂಡರು.

ವಕ್ಫ್ ಮಂಡಳಿ ಅಧ್ಯಕ್ಷ ಸ್ಥಾನ ಚುನಾವಣೆಗೆ ಹಸಿರು ನಿಶಾನೆ

ಬೆಂಗಳೂರು: ರಾಜ್ಯ ವಕ್ಫಮಂಡಳಿಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು ಹೈಕೋರ್ಟ್ ಹಸಿರು ನಿಶಾನೆ ತೋರಿದೆ.

ಚುನಾವಣೆ ನಡೆಸದಂತೆ ಕೋರಿ ನಗರದ ಮುತವಲ್ಲಿ ಮೊಹಮ್ಮದ್ ಮುಜಮ್ಮಿಲ್ ಸಲ್ಲಿಸಿದ್ದ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿ ವಜಾ ಮಾಡಿತು.

'ಒಂದು ವೇಳೆ ಯಾವುದೇ ತಕರಾರು ಇದ್ದಲ್ಲಿ ವಕ್ಫ್ ಕಾಯ್ದೆ ಕಲಂ 83ರ ಅನುಸಾರ ನ್ಯಾಯಮಂಡಳಿ ಮುಂದೆ ಆಕ್ಷೇಪಿಸಿಮೂರುತಿಂಗಳೊಳಗೆಪರಿಹಾರ ಪಡೆಯಿರಿ' ಎಂದು ಅರ್ಜಿದಾರರಿಗೆ ನಿರ್ದೇಶಿಸಿದೆ. 'ಹಾಲಿ ಮಂಡಳಿಯ ಚುನಾಯಿತ ಮತ್ತು ನಾಮ ನಿರ್ದೇಶಿತ ಸದಸ್ಯರ ಸಂಖ್ಯೆ ಅನುಪಾತಕ್ಕೆ ಅನುಗುಣವಾಗಿಲ್ಲ. ಆದ್ದರಿಂದ, ಚುನಾವಣೆ ನಡೆಸದಂತೆ ತಡೆ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದರು.

ಡೀಲರ್ ಮಟ್ಟದಲ್ಲಿ ವಾಹನ ನೋಂದಣಿ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವಾಹನಗಳ ನೋಂದಣಿ ಪ್ರಕ್ರಿಯೆಯನ್ನು ಖಾಸಗಿ ಡೀಲರ್‌ಗಳ ಮಾರಾಟ ಮಳಿಗೆಗಳಲ್ಲೇ ನಡೆಸಲು ಅವಕಾಶ ಕಲ್ಪಿಸಿರುವ ಸಾರಿಗೆ ಇಲಾಖೆ ಅಧಿಸೂಚನೆ ಪ್ರಶ್ನಿಸಿದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'2021ರ ಅಕ್ಟೋಬರ್ 31ರಂದು ಸಾರಿಗೆ ಇಲಾಖೆ ಹೊರಡಿಸಿರುವ ಅಧಿಸೂಚನೆ ರದ್ದುಗೊಳಿಸಬೇಕು' ಎಂದು ಕೋರಿ ಸಾರಿಗೆ ಇಲಾಖೆ ನಿವೃತ್ತ ಅಧಿಕಾರಿ ಮೊಹಮ್ಮದ್ ದಸ್ತಗೀರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ಪೀಠ ಮಂಗಳವಾರ ವಿಚಾರಣೆ ನಡೆಸಿತು.

'ತಿದ್ದುಪಡಿ ನಿಯಮದ ಪ್ರಕಾರ ಈಗಾಗಲೇ ನೋಂದಣಿ ಮಾಡಿರುವುದು, ಈ ಅರ್ಜಿಯ ಕುರಿತಂತೆ ನೀಡಲಾಗುವ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದೂ ನ್ಯಾಯಪೀಠ ಮಧ್ಯಂತರ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಅರ್ಜಿದಾರರ ಪರ ವಕೀಲ ಪುತ್ತಿಗೆ ಆರ್. ರಮೇಶ್, 'ಕರ್ನಾಟಕ ಮೋಟಾರು ವಾಹನ ಅಧಿನಿಯಮ-1989ರ ನಿಯಮ 33ಕ್ಕೆ ತಿದ್ದುಪಡಿ ತರುವ ಮೂಲಕ ಹೊಸ ವಾಹನಗಳ ನೋಂದಣಿ ಮಾಡುವ ಪ್ರಕ್ರಿಯೆಯನ್ನು ಖಾಸಗಿ ವಾಹನ ಮಾರಾಟಗಾರರಿಗೇ ವಹಿಸಿರುವುದು ಮೋಟಾರು ವಾಹನ ಕಾಯ್ದೆಗೆ ವಿರುದ್ಧ' ಎಂದರು.

'ಇದು, ಟ್ರಾವೆಲ್ ಏಜೆನ್ಸಿಗಳಿಗೆ ಪಾಸ್‌ಪೋರ್ಟ್ ಹಾಗೂ ವೀಸಾ ವಿತರಿಸುವ ಹಕ್ಕು ನೀಡಿದಷ್ಟೇ ಅಪಾಯಕಾರಿಯಾಗಿದೆ. ಯಾರು ಯಾರಿಗೆ ಬೇಕಾದರೂ ವಾಹನ ನೋಂದಣಿ ಮಾಡಿಕೊಡುವ ಸಾಧ್ಯತೆ ಇರುವ ಕಾರಣ ಅಧಿಸೂಚನೆ ರದ್ದುಪಡಿಸಬೇಕು' ಎಂದು ಕೋರಿದರು.

ಸರ್ಕಾರಿ ವಕೀಲರು, ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡುವಂತೆ ಕೋರಿದ್ದನ್ನು ಪರಿಗಣಿಸಿದ ನ್ಯಾಯಪೀಠ, ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಸಾರಿಗೆ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ನಾಲ್ಕು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆ ಮುಂದೂಡಲಾಗಿದೆ.

'ಶ್ರೀಕಿಗೆ ಕಾಂಗ್ರೆಸ್‌ನಿಂದಲೇ ಅಪಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಗೆ ಪ್ರಾಣ ಬೆದರಿಕೆ ಇದೆ ಎಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ. ಅವರಿಂದಲೇ ಆತನಿಗೆ ಅಪಾಯವಿರಬಹುದು ಎಂಬ ಅನುಮಾನ ಕಾಡುತ್ತಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.



ಆರಗ ಜ್ಞಾನೇಂದ್ರ

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಹಲವರು ಶ್ರೀಕಿಗೆ ಪ್ರಾಣ ಭಯವಿದೆ ಎಂದು ಹೇಳಿಕೆ ನೀಡಿದ್ದಾರೆ. ಅವರೇ ಏನಾದರೂ ಮಾಡಿ ಸರ್ಕಾರದ ಮೇಲೆ ಹಾಕುತ್ತಾರಾ ಎಂಬ ಅನುಮಾನ ಮೂಡುತ್ತಿದೆ. ಶ್ರೀಕಿಗೆ ಪ್ರಾಣ ಭಯವಿದೆ ಎಂಬ ಆರೋಪದ ಕುರಿತು ಮುಖ್ಯಮಂತ್ರಿಯವರ ಜತೆ ಚರ್ಚಿಸಿ, ಕ್ರಮ ಕೈಗೊಳ್ಳಲಾಗುವುದು' ಎಂದರು.

ಬಿಟ್‌ಕಾಯಿನ್ ವಿಚಾರದಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಕಾಂಗ್ರೆಸ್‌ನವರು ಒಂದೇ ಸುಳ್ಳನ್ನು ಪದೇ ಪದೇ ಹೇಳಿ ಸತ್ಯ ಎಂದು ನಂಬಿಸಲು ಯತ್ನಿಸುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಶ್ರೀಕೃಷ್ಣನ ವಿರುದ್ಧ ಪ್ರಕರಣ ದಾಖಲಾಗಿತ್ತು. ಆಗ, ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಎಂದು ಹೇಳಿದರು.

'ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ಶ್ರೀಕೃಷ್ಣನನ್ನು ಬಂಧಿಸದೇ ಬಿಟ್ಟು ಕಳುಹಿಸಿದ್ದರು. ನಾವು ಅವನನ್ನು ಬಂಧಿಸಿ, ತನಿಖೆ ನಡೆಸಿದ್ದೇವೆ. ಸಮರ್ಪಕವಾಗಿ ತನಿಖೆ ನಡೆಸಿ, ಇಂಟರ್‌ಪೋಲ್‌ಗೂ ಮಾಹಿತಿ ನೀಡಲಾಗಿದೆ. ಏನೋ ನಡೆದಿದೆ ಎಂದು ಕಾಂಗ್ರೆಸ್‌ನವರು ವದಂತಿ ಹಬ್ಬಿಸುತ್ತಿದ್ದಾರೆ. ಶ್ರೀಕಿ ಜತೆಗೆ ಕಾಂಗ್ರೆಸ್‌ನವರಿಗೆ ಯಾವ ರೀತಿಯ ವ್ಯವಹಾರದ ನಂಟು ಇತ್ತು ಎಂಬುದನ್ನು ಹೇಳಲಿ' ಎಂದು ಜ್ಞಾನೇಂದ್ರ ಸವಾಲು ಹಾಕಿದರು.

'ಅಪಾಯವಿದ್ದರೆ ರಕ್ಷಣೆ ಕೊಡಲಿ'



ಕುಮಾರಸ್ವಾಮಿ

'ಹ್ಯಾಕರ್ ಶ್ರೀಕೃಷ್ಣನ ಜೀವಕ್ಕೆ ಅಪಾಯವಿದೆ ಎಂಬುದು ಕಾಂಗ್ರೆಸ್‌ನವರಿಗೆ ಹೇಗೆ ತಿಳಿಯಿತೋ ಗೊತ್ತಿಲ್ಲ. ಆತನ ಜೀವಕ್ಕೆ ಬೆದರಿಕೆ ಇದ್ದರೆ ಸರ್ಕಾರ ರಕ್ಷಣೆ ನೀಡಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇಷ್ಟು ವರ್ಷ ಆತನ ಜೀವಕ್ಕೆ ಅಪಾಯವಿರಲಿಲ್ಲ. ಈಗ ಅವನಿಗೆ ಜೀವ ಬೆದರಿಕೆ ಇದೆ ಎಂದರೆ ಹೇಗೆ? ಈ ಬಗ್ಗೆ ಕಾಂಗ್ರೆಸ್ ಪಕ್ಷಕ್ಕೆ ನಿಖರ ಮಾಹಿತಿ ಇರಬಹುದು' ಎಂದರು.

ಬಿಟ್‌ಕಾಯಿನ್ ವಿಚಾರದಲ್ಲಿ ಗೊಂದಲ ಸೃಷ್ಟಿಸಲಾಗುತ್ತಿದೆ. ತನಿಖೆಯನ್ನು ಜಾರಿ ನಿರ್ದೇಶನಾಲಯಕ್ಕೆ ವಹಿಸಲಾಗಿದೆ ಎನ್ನುತ್ತಾರೆ. ಯಾರ ಬಳಿಯೂ ಖಚಿತ ಮಾಹಿತಿ ಇಲ್ಲ. ತಜ್ಞರ ಸಲಹೆ ಪಡೆದು ತನಿಖೆ ನಡೆಸಬೇಕು ಎಂದರು.

ಆಯುಕ್ತರಾಗಿ ಭೋಯಿ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭವಿಷ್ಯನಿಧಿ ಸಂಘಟನೆಯ ಬೆಂಗಳೂರು ವಲಯದ ಹೆಚ್ಚುವರಿ ಕೇಂದ್ರೀಯ ಭವಿಷ್ಯನಿಧಿ ಆಯುಕ್ತರಾಗಿ ಮಾರುತಿ ಭೋಯಿ ಅಧಿಕಾರ ಸ್ವೀಕರಿಸಿದ್ದಾರೆ. ಅವರು ಕರ್ನಾಟಕ ಮತ್ತು ಗೋವಾ, ಹುಬ್ಬಳ್ಳಿ ವಲಯಗಳ ಹೆಚ್ಚುವರಿ ಕೇಂದ್ರೀಯ ಭವಿಷ್ಯನಿಧಿ ಆಯುಕ್ತರಾಗಿ ಕಾರ್ಯನಿರ್ವಹಿಸಿದ್ದರು.



ಮಾರುತಿ ಭೋಯಿ

ಕೆಜಿಐಡಿ–ವಕೀಲರ ಪರಿಷತ್ ಕಟ್ಟಡ ನೀಡಲು ಕೋರಿಕೆ

ಬೆಂಗಳೂರು: 'ಕಬ್ಬನ್ ಪಾರ್ಕ್‌ನಲ್ಲಿರುವ ಚುನಾವಣಾ ಆಯೋಗದ ಹಳೆಯ ಕಟ್ಟಡ ಮತ್ತು ರಾಜ್ಯ ವಿಮಾ ಇಲಾಖೆಯ ಕಟ್ಟಡಗಳನ್ನು (ಕೆಜಿಐಡಿ) ಹೈಕೋರ್ಟ್ ಸುಪರ್ದಿಗೆ ನೀಡಬೇಕು. ಹೈಕೋರ್ಟ್‌ನ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ನಿರ್ಧಾರ ಕೈಗೊಳ್ಳಬೇಕು' ಎಂದು ಹೈಕೋರ್ಟ್ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

ಹೈಕೋರ್ಟ್ ಕಟ್ಟಡದ ತಳಮಹಡಿಯಲ್ಲಿರುವ (ಬೇಸ್‌ಮೆಂಟ್) ಎಲ್ಲ ಕಚೇರಿಗಳ ತೆರವಿಗೆ ಆದೇಶಿಸಲು ಕೋರಿ ತುಮಕೂರಿನ ವಕೀಲ ಎಲ್.ರಮೇಶ್ ನಾಯ್ಕ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು, 'ತಾಂತ್ರಿಕ ಶಿಕ್ಷಣ ಇಲಾಖೆಯ ಕಟ್ಟಡದಲ್ಲಿ ಎರಡು ಕೊಠಡಿಗಳನ್ನು ಈಗಾಗಲೇ ಹೈಕೋರ್ಟ್‌ಗೆ ನೀಡಲಾಗಿದೆ. ಸದ್ಯ ಅಲ್ಲಿ ಸ್ಥಳಾವಕಾಶ ಇಲ್ಲದ ಕಾರಣ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲಾಗುತ್ತಿಲ್ಲ' ಎಂದರು.

ಹೈಕೋರ್ಟ್ ಪರ ಹಿರಿಯ ವಕೀಲ ಎಸ್.ಎಸ್. ನಾಗಾನಂದ, 'ಹೈಕೋರ್ಟ್‌ನ ಸಮೀಪದಲ್ಲೇ ಇರುವ ಚುನಾವಣಾ ಆಯೋಗದ ಹಳೆಯ ಕಟ್ಟಡ ಮತ್ತು ಕೆಜಿಐಡಿ ಕಚೇರಿಗಳಿರುವ ಕಟ್ಟಡಗಳನ್ನು ಹೈಕೋರ್ಟ್‌ಗೆ ಹಸ್ತಾಂತರಿಸಿದರೆ ಈ ಸಮಸ್ಯೆ ತಕ್ಷಣವೇ ಬಗೆಹರಿಯಲಿದೆ' ಎಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಈ ಎರಡೂ ಕಟ್ಟಡಗಳನ್ನು ಹೈಕೋರ್ಟ್‌ಗೆ ಹಸ್ತಾಂತರಿಸುವಂತೆ ನ್ಯಾಯಾಲಯ ಸರ್ಕಾರವನ್ನು ಕೋರುತ್ತಿದೆ' ಎಂದು ಹೇಳಿತು.

'ಹೈಕೋರ್ಟ್ ಕಟ್ಟಡದ ತಳಮಹಡಿಯ ಜಾಗವನ್ನು ಕಚೇರಿಗಳನ್ನಾಗಿ ಬಳಸುವುದು ನಿಯಮಗಳಿಗೆ ವಿರುದ್ಧ. ಹೆಚ್ಚುವರಿ ಜಾಗ ಕಲ್ಪಿಸಿದರೆ ಅಲ್ಲಿರುವ ಕಚೇರಿಗಳನ್ನು ಸ್ಥಳಾಂತರಿಸಬಹುದು. ಸರ್ಕಾರವು ಈ ಬಗ್ಗೆ ಸಕಾರಾತ್ಮಕವಾಗಿ ಉತ್ತರಿಸುವ ಎಂಬ ವಿಶ್ವಾಸವನ್ನು ನ್ಯಾಯಾಲಯ ಹೊಂದಿದೆ' ಎಂದು ತಿಳಿಸಿತು. ವಿಚಾರಣೆಯನ್ನು 2022ರ ಜನವರಿ 6ಕ್ಕೆ ಮುಂದೂಡಿತು.

ರಾಜಿ ಡಿಕ್ರಿ ಪ್ರಕರಣ: ವಿಧಿವಿಜ್ಞಾನ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರ್ಟ್ ಆದೇಶ ತಿರುಚಿ, ನಕಲಿ ದಾಖಲೆ ಸೃಷ್ಟಿಸುವ ಮೂಲಕ ಖಾಸಗಿ ವ್ಯಕ್ತಿಗಳ ಆಸ್ತಿ ಕಬಳಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳ ಮೂಲ ದಾಖಲೆಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಲು ಹೈಕೋರ್ಟ್ ಸಮ್ಮತಿಸಿದೆ.

'ಖಾಸಗಿ ವ್ಯಕ್ತಿಗಳ ಆಸ್ತಿ ಕಬಳಿಕೆ ಪ್ರಕರಣಗಳಲ್ಲಿ ವಕೀಲರು ಭಾಗಿಯಾಗಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರಕರಣದಲ್ಲಿ ಅಮಿಕಸ್ ಕ್ಯೂರಿ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ಶ್ರೀಧರ್ ಪ್ರಭು ವಾದ ಮಂಡಿಸಿ, 'ಡಿಜಿಟಲ್ ದಾಖಲೆಗಳನ್ನು ನೋಟರಿ ಮೂಲಕ ದೃಢೀಕರಿಸುವ ಅಗತ್ಯವಿದೆ. ಹಾಗಾಗಿ ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರವನ್ನೂ ಪ್ರತಿವಾದಿಯನ್ನಾಗಿ ಮಾಡಲು ನಿರ್ದೇಶಿಸಬೇಕು' ಎಂದು ಕೋರಿದರು.

'ಇದನ್ನು ಅಂತಿಮ ಆದೇಶದ ವೇಳೆಗೆ ಪರಿಗಣಿಸಲಾಗುವುದು' ಎಂದು ತಿಳಿಸಿದ ನ್ಯಾಯಪೀಠ, 'ಹಾಲಿ ಪ್ರಕರಣದಲ್ಲಿ ಮೂಲ ದಾಖಲೆಗಳನ್ನು ತನಿಖಾಧಿಕಾರಿಗಳು ವಿಧಿವಿಜ್ಞಾನ ಪ್ರಯೋಗಾಲಯದ ಪರೀಕ್ಷೆಗೆ ಕಳುಹಿಸಿಕೊಡಬಹುದು. ಅಂತೆಯೇ ತನಿಖೆಯನ್ನು ತ್ವರಿತವಾಗಿ ನಡೆಸಬೇಕು' ಎಂದು ಸಿಐಡಿಗೆ ನಿರ್ದೇಶಿಸಿ, ವಿಚಾರಣೆಯನ್ನು 2022ರ ಫೆಬ್ರುವರಿ 25ಕ್ಕೆ ಮುಂದೂಡಿತು.

ಏನಿದು ಪ್ರಕರಣ?: ಬೆಂಗಳೂರಿನ ಶಾ ಹರಿಲಾಲ್ ಬಿಕಾಭಾಯಿ ಎಂಬುವರ ಆಸ್ತಿ ಕಬಳಿಕೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದ ರಿಟ್ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ನ್ಯಾಯಾಲಯಗಳ ತೀರ್ಪಿನ ಪ್ರತಿಗಳನ್ನು ತಿರುಚಲಾಗಿದೆ ಎಂಬುದನ್ನು ಗಮನಿಸಿತ್ತು. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಐಡಿಗೆ ವಹಿಸಿತ್ತು.

ತನಿಖೆ ವೇಳೆ, ಕೆಲ ವ್ಯಕ್ತಿಗಳು ಖಾಸಗಿ ಆಸ್ತಿಗಳಿಗೆ ನಕಲಿ ದಾಖಲೆ ಮತ್ತು ಬಾಡಿಗೆದಾರರನ್ನು ಸೃಷ್ಟಿಸಿ ನ್ಯಾಯಾಲಯದಲ್ಲಿ ದಾವೆ ಹೂಡಿ, ನಂತರ ನಕಲಿ ವ್ಯಕ್ತಿಗಳೇ ರಾಜಿ ಮೂಲಕ ಡಿಕ್ರಿ ಪಡೆದು ಆಸ್ತಿ ಕಬಳಿಸುತ್ತಿದ್ದುದು ಬೆಳಕಿಗೆ ಬಂದಿತ್ತು. ಇಂತಹ ಪ್ರಕರಣಗಳಲ್ಲಿ ವಕೀಲರು ಮತ್ತು ನೋಟರಿಗಳೂ ಶಾಮೀಲಾಗಿದ್ದಾರೆ ಎಂಬ ಅಂಶವನ್ನು ತನಿಖಾಧಿಕಾರಿಗಳು ಪತ್ತೆಹಚ್ಚಿ ಕೆಲ ವಕೀಲರನ್ನೂ ಬಂಧಿಸಿದ್ದರು. ಇದೇ ರೀತಿಯ 118 ಪ್ರಕರಣಗಳು ಪತ್ತೆಯಾಗಿವೆ ಎನ್ನಲಾಗಿದೆ.

ಚಿತ್ರಾವಳಿ



'ಕರುನಾಡ ವಿಜಯಸೇನೆ' ನಗರದಲ್ಲಿ ಸೋಮವಾರ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕನ್ನಡಪರ ಹೋರಾಟಗಾರ್ತಿ ಬೆಳಗಾವಿಯ ಕಸ್ತೂರಿ ಬಾವಿ ಅವರಿಗೆ ಕದಂಬ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ಎಡದಿಂದ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎಸ್.ರಂಗಪ್ಪ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಬೇಲಿಮಠ ಸಂಸ್ಥಾನದ ಶಿವರುದ್ರ ಸ್ವಾಮೀಜಿ, 'ಕರುನಾಡ ವಿಜಯಸೇನೆ'ಯ ಅಧ್ಯಕ್ಷ ಎಚ್.ಎನ್. ದೀಪಕ್, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು, ನ್ಯೂಸ್ 18 ಕನ್ನಡದ ಸಹ ಸಂಪಾದಕ ಹರೀಶ್ ನಾಗರಾಜ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಮತ್ತು ಉದ್ಯಮಿ ದಯಾನಂದ್ ಇದ್ದರು ಪ್ರಜಾವಾಣಿ ಚಿತ್ರ



ಸಿ.ಪಿ.ಬ್ರೌನ್ ಸೇವಾ ಸಮಿತಿಯು ನಗರದ ಕೃಷ್ಣದೇವರಾಯ ಕಲಾಮಂದಿರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತೆಲುಗಿನ ಖ್ಯಾತ ಸಹಸ್ರಾವಧಾನಿ ಗರಿಕಿಪಾಟಿ ನರಸಿಂಹರಾವ್ ಅವರಿಗೆ ಶತಾವಧಾನಿ ಆರ್.ಗಣೇಶ್ ಅವರು ಸುವರ್ಣ ಕಂಕಣ ತೊಡಿಸಿದರು. ಬ್ರೌನ್ ಸೇವಾ ಸಮಿತಿ ಅಧ್ಯಕ್ಷೆ ಲಕ್ಷ್ಮೀರೆಡ್ಡಿ ದಂಪತಿ, ತೆಲುಗು ವಿಜ್ಞಾನ ಸಮಿತಿ ಅಧ್ಯಕ್ಷ ರಾಧಾಕೃಷ್ಣ ರಾಜು, ತೆಲಂಗಾಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಚೆನ್ನಯ್ಯ ಹಾಗೂ ಇತರರು ಇದ್ದರು.

ಸಂಕ್ಷಿಪ್ತ ಸುದ್ದಿ

ಕಲರಾಥಾನ್ ಚಿತ್ರಕಲೆ ಸ್ಪರ್ಧೆ

ಬೆಂಗಳೂರು: ಬ್ರೀಥ್ ಎಂಟರ್‌ಟೈನ್‌ಮೆಂಟ್ ಮತ್ತು ಕಿಡ್ಸ್ ಚೌಪಲ್ ಸಂಸ್ಥೆಗಳು 'ಕಲರಾಥಾನ್' ಶೀರ್ಷಿಕೆಯಡಿ ಆನ್‌ಲೈನ್ ಚಿತ್ರಕಲೆ ಸ್ಪರ್ಧೆಗಳನ್ನು ಡಿಸೆಂಬರ್ 15 ರವರೆಗೆ ಏರ್ಪಡಿಸಿವೆ.

ಆರ್ಟ್ ಟ್ರೀಟ್ (2ನೇ ತರಗತಿವರೆಗೆ), ಆಲ್ ಎಬೌಂಟ್ ಶೇಡ್ಸ್ (3ರಿಂದ 7ನೇ ತರಗತಿ), ಕ್ರಿಯೇಟಿವ್ ಸ್ಟ್ರೀಕ್ (8ರಿಂದ 12ನೇ ತರಗತಿ) ಎಂಬ ಮೂರು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ.

ಬೆಂಗಳೂರು, ನವದೆಹಲಿ, ಚೆನ್ನೈ ಹಾಗೂ ಹೈದರಾಬಾದ್ ಸೇರಿದಂತೆ ದೇಶದಾದ್ಯಂತ ಒಂದು ಲಕ್ಷ ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸ್ಪರ್ಧೆಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭವಾಗಿದ್ದು, ಕಿಡ್ಸ್ ಚೌಪಲ್ (KidsChaupal) ಆ್ಯಪ್‌ನಲ್ಲಿ ಅರ್ಜಿಗಳು ಲಭ್ಯ.

600 ಅತ್ಯುತ್ತಮ ವರ್ಣಚಿತ್ರಗಳನ್ನು shop.kidschaupal.comನಲ್ಲಿ ಹರಾಜಿಗೆ ಆಯ್ಕೆ ಮಾಡಲಾಗುವುದು. ತೀರ್ಪುಗಾರರಿಂದ ಆಯ್ಕೆಯಾದ 15 ಅತ್ಯುತ್ತಮ ಚಿತ್ರಗಳಿಗೆ ಬಹುಮಾನ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಚಿನ್ನ ಕುರಿತ ಸಾಕ್ಷ್ಯಚಿತ್ರ ಸರಣಿ ಬಿಡುಗಡೆ

ಬೆಂಗಳೂರು: ಚಿನ್ನ ಸಾಗಿ ಬಂದ ಹಾದಿ ಕುರಿತು 'ದಿ ಗೋಲ್ಡನ್ ಥ್ರೆಡ್' ಎಂಬ ಸಾಕ್ಷ್ಯಚಿತ್ರ ಸರಣಿಯನ್ನು ವಿಶ್ವ ಚಿನ್ನ ಪರಿಷತ್ತು ಬಿಡುಗಡೆ ಮಾಡಿದೆ. 5 ಸಂಚಿಕೆಗಳ ಈ ಸರಣಿಯಲ್ಲಿ ಚಿನ್ನದ ಇತಿಹಾಸ, ಸಾಂಸ್ಕೃತಿಕ ಮಹತ್ವ ಮತ್ತು ತಂತ್ರಜ್ಞಾನಗಳ ಬಳಕೆಯ ವಿವರಗಳಿವೆ.

10 ನಿಮಿಷ ಅವಧಿಯ ಪ್ರತಿ ಸಂಚಿಕೆಯು GoldenThread.gold.org ವೆಬ್‌ಸೈಟ್‌ನಲ್ಲಿ ಲಭ್ಯವಿರಲಿದೆ. ಮೊದಲ ಸಂಚಿಕೆ ಯೂಟ್ಯೂಬ್‌ನಲ್ಲಿ ಬಿಡುಗಡೆಗೊಳ್ಳಲಿದೆ. ನಂತರ ಉಳಿದ 4 ಸಂಚಿಕೆಗಳು ಪ್ರತಿವಾರ ಅಪ್‌ಲೋಡ್ ಆಗಲಿವೆ.

ಈ ಸಂಚಿಕೆಗಳನ್ನು ವೀಕ್ಷಿಸಲು https://thegoldenthread.gold.org ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ವಿಶ್ವವಿದ್ಯಾಲಯದ 'ಸಿಎಸ್‌ಎಸ್‌ಇಐಪಿ' ಅಧ್ಯಯನ

ಬಡವರ ಕಾಡುವ ಹೃದ್ರೋಗ!

ಪ್ರಜಾವಾಣಿ ವಾರ್ತೆ

ಮೈಸೂರು: 'ದಶಕದಿಂದ ಬಿಪಿಎಲ್ ಕುಟುಂಬಗಳಲ್ಲಿ ಹೃದ್ರೋಗ ಸಮಸ್ಯೆಗಳು ಹೆಚ್ಚಾಗಿ ಕಾಣಿಸಿಕೊಂಡಿದ್ದು, ಶೇ 53ರಷ್ಟು ಪುರುಷರು, ಶೇ 47ರಷ್ಟು ಮಹಿಳೆಯರು ಹೃದಯಾಘಾತಕ್ಕೀಡಾಗಿದ್ದಾರೆ' ಎಂದು ಮೈಸೂರು ವಿಶ್ವವಿದ್ಯಾಲಯದ ಅಧ್ಯಯನ ವರದಿ ತಿಳಿಸಿದೆ.

ಕರ್ನಾಟಕ ಸುವರ್ಣಾ ರಕ್ಷಾ ಟ್ರಸ್ಟ್ ದತ್ತಾಂಶ ಆಧರಿಸಿ ವಿಶ್ವವಿದ್ಯಾಲಯದ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರ (ಸಿಎಸ್‌ಎಸ್‌ಇಐಪಿ) ವರದಿ ಸಿದ್ಧಗೊಳಿಸಿದ್ದು, 2022ರ ಜೂನ್‌ನಲ್ಲಿ ಸರ್ಕಾರಕ್ಕೆ ಸಲ್ಲಿಸಲಿದೆ.

ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ದಾಖಲಾಗುವ ಬಿಪಿಎಲ್ ಕಾರ್ಡುದಾರರ ಮಾಹಿತಿಯನ್ನು ಕರ್ನಾಟಕ ಸುವರ್ಣಾ ರಕ್ಷಾ ಟ್ರಸ್ಟ್ ದಾಖಲಿಸುತ್ತದೆ. ಆ ದತ್ತಾಂಶಗಳನ್ನು ಅಂತರರಾಷ್ಟ್ರೀಯ ಮಾನದಂಡದಲ್ಲಿ ಕ್ರೋಡೀಕರಿಸಿರುವ 'ಸಿಎಸ್‌ಎಸ್‌ಇಐಪಿ' ತಜ್ಞರ ತಂಡವು 2019ರಿಂದ ಅಧ್ಯಯನವನ್ನು ನಡೆಸಿದೆ.

'2010– 2020ರ ಅವಧಿಯಲ್ಲಿ 2012–14ರ ದತ್ತಾಂಶ ದೊರೆತಿರಲಿಲ್ಲ. ಹೊಸದಾಗಿ ಸಂಗ್ರಹ ಮಾಡುವಂತೆ ಮನವಿ ಮಾಡಿ ಸಮರ್ಪಕವಾಗಿ ಜೋಡಿಸಲಾಯಿತು. ನಂತರ ನಡೆಸಿದ ಅಧ್ಯಯನದ ಪ್ರಕಾರ ಚಿಕಿತ್ಸೆ ಪಡೆದ 1,25,574 ಮಂದಿ ಬಿಪಿಎಲ್ ಕಾರ್ಡುದಾರರಲ್ಲಿ 1,12,018 ಜನರು ಹೃದ್ರೋಗಕ್ಕೆ ಸಂಬಂಧಿಸಿದಂತೆ ಚಿಕಿತ್ಸೆ ಪಡೆದಿದ್ದಾರೆ. ಇವರಲ್ಲಿ ಶೇ 7ರಷ್ಟು ಪರಿಶಿಷ್ಟ ಜಾತಿ ಹಾಗೂ ಶೇ 3 ರಷ್ಟು ಮಂದಿ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ' ಎಂದು ಸಿಎಸ್‌ಎಸ್‌ಇಐಪಿಯ ಉಪ ನಿರ್ದೇಶಕ ಡಾ.ಡಿ.ಸಿ.ನಂಜುಂಡ 'ಪ್ರಜಾವಾಣಿ'ಗೆ ತಿಳಿಸಿದರು.

'ಶೇ 90ರಷ್ಟು ಮಂದಿಗೆ ಹೃದ್ರೋಗಗಳಲ್ಲಿ ಕ್ರಮವಾಗಿ ಕರೋನರಿ ಅರ್ಟರಿ, ಮೈಯೊಕಾರ್ಡಿಯಲ್ ಇನ್ಫಾರ್ಕ್ಶನ್, ವಾಲ್ವೋಟಮಿ ಸಮಸ್ಯೆಗಳು ಕಾಡುತ್ತಿದೆ. ಶೇ 10ರಷ್ಟು ಜನರು ಮೂತ್ರಪಿಂಡ, ಕ್ಯಾನ್ಸರ್, ನರರೋಗ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಈ ಕುರಿತೂ ಅಧ್ಯಯನ ನಡೆಯುತ್ತಿದೆ' ಎಂದು ಮಾಹಿತಿ ನೀಡಿದರು.

ಅಧ್ಯಯನ ತಂಡದಲ್ಲಿ ಛತ್ತೀಸ್‌ಗಡ ಏಮ್ಸ್‌ನ ಡಾ.ಅಮಿತ್ ಕುಮಾರ ಮಿಶ್ರಾ, ಮೈಸೂರಿನ ಆಯುರ್ವೇದ ವೈದ್ಯ ಡಾ.ಕೆ.ಸಿ.ಶ್ರೀವತ್ಸ ಇದ್ದಾರೆ. ಇವರಿಗೆ ರಾಮಚಂದ್ರ ಮೂರ್ತಿ, ಲ್ಯಾನ್ಸಿ ಡಿಸೋಜಾ, ವಿ.ಜಿ.ಸಿದ್ದರಾಜು, ರಮೇಶ್ ರಂಗಪ್ಪ, ಎಚ್.ಎಸ್. ಯೋಗೇಶ್ ಸಹಕರಿಸಿದ್ದಾರೆ.

ಮುಖ್ಯಾಂಶಗಳು

- ಹತ್ತು ವರ್ಷದ ದತ್ತಾಂಶ ಸಂಗ್ರಹ
- 1.12 ಲಕ್ಷ ಮಂದಿ ಚಿಕಿತ್ಸೆ
- ರೋಗಗಳ ಕುರಿತು ಜಾಗೃತಿ ಅಗತ್ಯ

'ಮೊದಲ ಸ್ಥಾನದಲ್ಲಿ ಬೆಂಗಳೂರು'



ಡಾ.ಡಿ.ಸಿ. ನಂಜುಂಡ

'ಬಿಪಿಎಲ್ ಕಾರ್ಡುದಾರರಲ್ಲೇ ಅತಿ ಹೆಚ್ಚು ಹೃದ್ರೋಗ ಸಮಸ್ಯೆ ಎದುರಿಸಿರುವವರು ಬೆಂಗಳೂರು ನಗರ ಜಿಲ್ಲೆಯವರು. ತಾಲ್ಲೂಕುಗಳಲ್ಲಿ ಕಲಬುರ್ಗಿ ಮೊದಲ ಸ್ಥಾನದಲ್ಲಿದೆ' ಎಂದು 'ಸಿಎಸ್‌ಎಸ್‌ಇಐಪಿ' ಹೇಳಿದೆ.

'ಬಿಪಿಎಲ್ ಕುಟುಂಬದವರು ರೋಗ ಬಂದ ಮೇಲೂ ಕಾಳಜಿ ವಹಿಸವುದಿಲ್ಲ. ಇದಕ್ಕೆ ಸಾಮಾಜಿಕ ಸ್ಥಿತಿಗತಿ, ಬದಲಾದ ಜೀವನಶೈಲಿ, ಆರೋಗ್ಯ ವ್ಯವಸ್ಥೆಯಲ್ಲಿ ಅಸಮಾನತೆ, ಆಹಾರ ಪದ್ಧತಿ, ಬಡತನವೇ ಕಾರಣವಾಗಿದೆ' ಎಂದು ಡಾ.ಡಿ.ಸಿ.ನಂಜುಂಡ ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆ • ಆರಂಭದಲ್ಲೇ ಹಳಿ ತಪ್ಪಿದ ಅಭಿವೃದ್ಧಿ • ನಿವೇಶನದಾರರ ಅಸಮಾಧಾನ

ಸೌಲಭ್ಯಕ್ಕೆ ಎಷ್ಟು ವರ್ಷ ಕಾಯಬೇಕು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವ್ಯವಸ್ಥಿತ ಬೆಳವಣಿಗೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿದ ಬಡಾವಣೆಗಳ ಪಾತ್ರವೂ ಮಹತ್ವದ್ದು. ನಗರದ ವಸತಿ ಸಮಸ್ಯೆ ನಿವಾರಿಸಲು ಸರ್ಕಾರ ಆರಂಭಿಸಿದ ಮಹತ್ವಾಕಾಂಕ್ಷಿ ಯೋಜನೆ ನಾಡಪ್ರಭು ಕೆಂಪೇಗೌಡ ಬಡಾವಣೆ. ಈ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವ ಕಾರ್ಯ ಆರಂಭದಲ್ಲೇ ಹಳಿ ತಪ್ಪಿದೆ ಎಂಬ ಟೀಕೆ ವ್ಯಕ್ತವಾಗಿದೆ.

ಈ ಬಡಾವಣೆಯಲ್ಲಿ 2016ರಲ್ಲೇ ಮೊದಲ ಹಂತದ ನಿವೇಶನ ಹಂಚಿಕೆ ಮಾಡಲಾಗಿದೆ. ಆದರೂ, ಮನೆ ನಿರ್ಮಿಸಲು ಅಗತ್ಯವಿರುವಷ್ಟು ಮೂಲಸೌಕರ್ಯವನ್ನು ಈ ಬಡಾವಣೆಯ ಯಾವುದೇ ಬ್ಲಾಕ್‌ನಲ್ಲೂ ಇದುವರೆಗೆ ಕಲ್ಪಿಸಲಾಗಿಲ್ಲ. ಹಂಚಿಕೆ ಮಾಡಿರುವ ನಿವೇಶನಗಳಿಗೆ 2021ರ ಡಿಸೆಂಬರ್ ಒಳಗೆ ಮೂಲಸೌಕರ್ಯ ಕಲ್ಪಿಸುತ್ತೇವೆ ಎಂದು ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಕ್ಕೆ (ರೇರಾ) ಬಿಡಿಎ ವಾಗ್ದಾನ ನೀಡಿತ್ತು. ಆದರೆ, ಇದುವರೆಗೆ ಈ ಕಾರ್ಯವು ಶೇ 50ರಷ್ಟೂ ಪೂರ್ಣಗೊಂಡಿಲ್ಲ ಎನ್ನುವುದು ಇಲ್ಲಿನ ನಿವೇಶನದಾರರ ಅಳಲು.

ಭೂಸ್ವಾಧೀನ ಪ್ರಕ್ರಿಯೆ ಕಗ್ಗಂಟು, ಮೂಲಸೌಕರ್ಯ ಕಲ್ಪಿಸುವ ಕಾರ್ಯ ಸಕಾಲದಲ್ಲಿ ಪೂರ್ಣಗೊಳ್ಳದಿರುವುದು, ಹೆಚ್ಚುವರಿ ಕಾಮಗಾರಿಗಳ ವೆಚ್ಚ ಭರಿಸುವಲ್ಲಿ ಪ್ರಾಧಿಕಾರ ಮೀನಮೇಷ ಮಾಡುತ್ತಿರುವುದು... ಮುಂತಾದ ಸಮಸ್ಯೆಗಳಿಂದ ಬಿಡಿಎ ಮೇಲೆ ಜನ ವಿಶ್ವಾಸ ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗುತ್ತಿದೆ.

ಈ ಬಡಾವಣೆಯ ಮೂಲಸೌಕರ್ಯ ಅಭಿವೃದ್ಧಿ ವಿಳಂಬದಿಂದ ಎದುರಾದ ಸಮಸ್ಯೆಗಳ ಕುರಿತು ನಿವೇಶನದಾರರು ಇಲ್ಲಿ ನೋವು ಹಂಚಿಕೊಂಡಿದ್ದಾರೆ. ಬಿಡಿಎ ಆಯುಕ್ತರ ಪ್ರತಿಕ್ರಿಯೆಯೂ ಇಲ್ಲಿದೆ.

ರಾಜಧಾನಿ ಒಡಲದನಿ

‘ಮನೆ ಕಟ್ಟಲಾಗುತ್ತಿಲ್ಲ ಆದರೆ, ಸಾಲ ಕಟ್ಟಲೇಬೇಕಿದೆ’



ಸೂರ್ಯಕಿರಣ್

ಮೂಲಸೌಕರ್ಯವಿಲ್ಲದ ಕಾರಣ ಈ ಬಡಾವಣೆಯಲ್ಲಿ ಮನೆ ಕಟ್ಟಲು ಸಾಧ್ಯವಾಗುತ್ತಿಲ್ಲ. ಆದರೆ, ಈ ನಿವೇಶನ ಖರೀದಿಗಾಗಿ ಮಾಡಿರುವ ಸಾಲದ ಜೊತೆಗೆ ಮನೆಬಾಡಿಗೆಯನ್ನೂ ಕಟ್ಟಬೇಕಾಗಿದೆ.

ಈ ಬಡಾವಣೆಯಲ್ಲಿ ಮನೆ ನಿರ್ಮಿಸಲು ಶೇ 6.5 ಬಡ್ಡಿದರದಲ್ಲಿ ಗೃಹ ಸಾಲ ಪಡೆದ ಅನೇಕರು ಈಗ ಅದಕ್ಕೆ ವಾಣಿಜ್ಯ ದರದ (ಶೇ 11ರವರೆಗೆ) ಪ್ರಕಾರ ಬಡ್ಡಿ ಕಟ್ಟುತ್ತಿದ್ದಾರೆ. ಇನ್ನೊಂದೆಡೆ ಸಿಮೆಂಟ್, ಮರಳು, ಕಬ್ಬಿಣದ ದರ ಗಗನಕ್ಕೇರುತ್ತಿದೆ. ಈಗಿನ ಪರಿಸ್ಥಿತಿಯಲ್ಲಿ ಪ್ರಕಾರ ಮನೆ ನಿರ್ಮಿಸಲು ಮೊದಲು ಲೆಕ್ಕ ಹಾಕಿದ್ದಕ್ಕಿಂತ 15 ಲಕ್ಷದಷ್ಟು ಹೆಚ್ಚು ವೆಚ್ಚ ಮಾಡಬೇಕಾದ ಅನಿವಾರ್ಯ ಸೃಷ್ಟಿಯಾಗಿದೆ.

ಎರಡು ತಿಂಗಳಿನಿಂದ ಮೂಲಸೌಕರ್ಯ ಕಾಮಗಾರಿಯಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಹೆಚ್ಚುವರಿ ಕಾಮಗಾರಿಗಳಿಗೆ ಸಂಬಂಧಿಸಿದ ವೆಚ್ಚ ಭರಿಸಲು ಬಿಡಿಎ ಮೀನಮೇಷ ಎಣಿಸುತ್ತಿದೆ. ಹಾಗಾಗಿ ಗುತ್ತಿಗೆದಾರರು ಕೆಲಸವನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಇದರಿಂದ ಕುಡಿಯುವ ನೀರು, ಒಳಚರಂಡಿ, ರಸ್ತೆ ಸಂಪರ್ಕಗಳನ್ನು ಪ್ರತಿ ನಿವೇಶನಕ್ಕೆ ತಲುಪಿಸಲು ಸಮಸ್ಯೆ ಆಗಿದೆ.


ಕಟ್ಟಡ ನಿರ್ಮಿಸಲು ವಿದ್ಯುತ್ ಸಂಪರ್ಕ ಅನಿವಾರ್ಯ. ಆದರೆ, ವಿದ್ಯುತ್ ಸಂಪರ್ಕ ಕಲ್ಪಿಸುವ ಕೆಲಸ ಇನ್ನೂ ಆರಂಭವೇ ಆಗಿಲ್ಲ. ಕಂದಾಯ ನಿವೇಶನಗಳಿಗೆ ವಿದ್ಯುತ್ ಸಂಪರ್ಕ ಸುಲಭದಲ್ಲಿ ಸಿಗುತ್ತದೆ. ಬಿಡಿಎ ಬಡಾವಣೆಗೆ ಸಿಗುತ್ತಿಲ್ಲ ಎಂಬುದು ವಿಪರ್ಯಾಸ.

ಸೂರ್ಯಕಿರಣ್, ಬಡಾವಣೆಯ ನಿವೇಶನದಾರ



ನಾಡಪ್ರಭು ಕೆಂಪೇಗೌಡ ಬಡಾವಣೆ

‘ಕಾಮಗಾರಿ ಶೇ 40ರಷ್ಟೂ ಪೂರ್ಣಗೊಂಡಿಲ್ಲ’



ಎನ್‌.ಶ್ರೀಧರ್

ಬಡಾವಣೆಯ ಮೂಲಸೌಕರ್ಯ ಕಾಮಗಾರಿ ಶೇ 40ರಷ್ಟೂ ಪೂರ್ಣಗೊಂಡಿಲ್ಲ. ನಿವೇಶನದಾರರು ಇಲ್ಲಿ ಮನೆ ನಿರ್ಮಿಸುವುದಾದರೂ ಹೇಗೆ. ನಿವೇಶನಗಳಿಗೆ ಮೂಲಸೌಕರ್ಯ ಕಲ್ಪಿಸದಿರುವುದನ್ನು ಪ್ರಶ್ನಿಸಿ ನಾವು ರೇರಾದಲ್ಲಿ ದಾವೆ ಹೂಡಿದ್ದೆವು. ಕೊಟ್ಟ ಮಾತಿನಂತೆ 2021ರ ಡಿಸೆಂಬರ್ ಒಳಗೆ ಮೂಲಸೌಕರ್ಯ ಕಾಮಗಾರಿ ಪೂರ್ಣಗೊಳಿಸುವ ಯಾವುದೇ ಲಕ್ಷಣಗಳೂ ಕಾಣಿಸುತ್ತಿಲ್ಲ. ಭೂಸ್ವಾಧೀನಕ್ಕೆ ಸಂಬಂಧಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕೂ ಪ್ರಾಧಿಕಾರಕ್ಕೆ ಸಾಧ್ಯವಾಗಿಲ್ಲ. ನಿವೇಶನ ಹಂಚಿಕೆ ಆಗಿ ಐದು ವರ್ಷ ಕಳೆದ ಬಳಿಕವೂ ಯಾವುದೇ ನಿವೇಶನಕ್ಕೂ ಪೂರ್ಣಪ್ರಮಾಣದಲ್ಲಿ ಕುಡಿಯುವ ನೀರು, ಒಳಚರಂಡಿ, ರಸ್ತೆ ಸಂಪರ್ಕ ಕಲ್ಪಿಸಿಲ್ಲ. ಮನೆಗಳು ನಿರ್ಮಾಣವಾದರೆ ಮಾತ್ರ ಬಡಾವಣೆಯ ನಿವೇಶನಗಳಿಗೆ ಬೇಡಿಕೆ ಹೆಚ್ಚುತ್ತದೆ. ಬಿಡಿಎ ತನ್ನಲ್ಲೇ ಉಳಿಸಿಕೊಂಡಿರುವ ಮೂಲೆ ನಿವೇಶನಗಳೂ ಉತ್ತಮ ಬೆಲೆಗೆ ಮಾರಾಟವಾಗುತ್ತವೆ. ಈ ಸತ್ಯವನ್ನು ಅರಿತು ಬಿಡಿಎ ತ್ವರಿತವಾಗಿ ಮೂಲಸೌಕರ್ಯ ಕಲ್ಪಿಸಬೇಕು. ಇಲ್ಲದಿದ್ದರೆ ಕಾನೂನು ಹೋರಾಟ ಅನಿವಾರ್ಯ.

ಎನ್‌.ಶ್ರೀಧರ್, ನಾಡಪ್ರಭು ಕೆಂಪೇಗೌಡ ಬಡಾವಣೆ ನಿವೇಶನದಾರರ ಮುಕ್ತ ವೇದಿಕೆಯ ಅಧ್ಯಕ್ಷ

‘ಸಮಸ್ಯೆಗಳನ್ನು ಶೀಘ್ರ ಬಗೆಹರಿಸುತ್ತೇವೆ’



ರಾಜೇಶ ಗೌಡ

ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವಲ್ಲಿ ಎದುರಾಗಿರುವ ಸಮಸ್ಯೆಗಳನ್ನು ಒಂದೊಂದಾಗಿ ಬಗೆಹರಿಸಲು ಶಕ್ತಿಮೀರಿ ಪ್ರಯತ್ನ ಮಾಡುತ್ತಿದ್ದೇವೆ. ಮಳೆಯಿಂದಾಗಿ ಎರಡು ತಿಂಗಳುಗಳಿಂದ ಕಾಮಗಾರಿ ನಿಧಾನವಾಗಿರುವುದು ನಿಜ. ಕಾಮಗಾರಿಯೇ ನಡೆಯುತ್ತಿಲ್ಲ ಎಂಬ ಆರೋಪ ಒಪ್ಪಲಾಗದು. ನಾವೇ ಖುದ್ದು ಸ್ಥಳ ಪರಿಶೀಲನೆ ನಡೆಸಿದಾಗಲೂ ಕಾಮಗಾರಿಗಳು ನಡೆಯುತ್ತಿದ್ದವು. ಕೋವಿಡ್‌ನಿಂದ ಸ್ವಲ್ಪ ವಿಳಂಬವಾಗಿದ್ದ ಕಾಮಗಾರಿ ಮತ್ತೆ ಬಿರುಸಿನಿಂದ ನಡೆಯಲಿದೆ.

ರೇರಾಕ್ಕೆ ನೀಡಿರುವ ವಾಗ್ದಾನದಂತೆ ನಿವೇಶನಗಳಿಗೆ ಗಡುವಿನ ಒಳಗೆ ಮೂಲಸೌಕರ್ಯ ಕಲ್ಪಿಸಲು ಕ್ರಮ ವಹಿಸಿದ್ದೇವೆ. ವಹಿಸಿಕೊಂಡ ಕಾಮಗಾರಿಯನ್ನು ಗಡುವಿನ ಒಳಗೆ ಪೂರ್ಣಗೊಳಿಸುವುದು ಗುತ್ತಿಗೆದಾರರ ಕರ್ತವ್ಯ. ಹೆಚ್ಚುವರಿ ಕಾಮಗಾರಿಗೆ ಸಂಬಂಧಿಸಿದ ವೆಚ್ಚ ಭರಿಸುವುದಕ್ಕೂ ಬಿಡಿಎ ಆಡಳಿತ ಮಂಡಳಿ ಸಭೆಯಲ್ಲಿ ಒಪ್ಪಿಗೆ ಸಿಕ್ಕಿದೆ. ಅದೇನೇ ಇದ್ದರೂ, ಗುತ್ತಿಗೆದಾರರು ನಡೆಸಿರುವಷ್ಟು ಕಾಮಗಾರಿಯ ವೆಚ್ಚ ಭರಿಸುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ಇದಕ್ಕೆ ಹಣಕಾಸಿನ ಕೊರತೆಯೂ ಇಲ್ಲ.

ಭೂಸ್ವಾಧೀನ ಸಮಸ್ಯೆಗಳು ಎದುರಾಗಿದ್ದರಿಂದ ಮೂಲಸೌಕರ್ಯ ಕಾಮಗಾರಿ ನಡೆಸಲು ಸ್ವಲ್ಪ ಸಮಸ್ಯೆ ಆಗಿದ್ದು ನಿಜ. ಈ ವ್ಯಾಜ್ಯಗಳೂ ಶೀಘ್ರವೇ ಇತ್ಯರ್ಥಗೊಳ್ಳಲಿವೆ. ಈ ಬಡಾವಣೆಯ ನಿವೇಶನದಾರರು ಎದುರಿಸುತ್ತಿರುವ ಆತಂಕಗಳ ಅರಿವು ನಮಗೂ ಇದೆ. ಹಾಗಾಗಿ ಇಲ್ಲಿ ಮನೆ ನಿರ್ಮಿಸುವುದಕ್ಕೆ ಏನೆಲ್ಲ ಸೌಕರ್ಯಗಳು ಅಗತ್ಯವಿದೆಯೋ ಅವುಗಳೆಲ್ಲವನ್ನೂ ಆದಷ್ಟು ಬೇಗ ಒದಗಿಸಲು ಪ್ರಾಧಿಕಾರವು ಕ್ರಮಕೈಗೊಳ್ಳಲಿದೆ.

ಎಂ.ಬಿ.ರಾಜೇಶ ಗೌಡ, ಆಯುಕ್ತ, ಬಿಡಿಎ

ಮತದಾರರ ಪಟ್ಟಿ ಮೇಲೆ ಕಣ್ಣಿಡಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಪಸಂಖ್ಯಾತರು ಮತ್ತು ದಲಿತ ಸಮುದಾಯದವರನ್ನು ಮತದಾರರ ಪಟ್ಟಿಯಿಂದ ಹೊರ ಗಿಡಲು ಬಿಜೆಪಿಯವರು ಪ್ರಯತ್ನ ಮಾಡುತ್ತಿದ್ದಾರೆ. ರಾಜ್ಯದಾದ್ಯಂತ ಮತದಾರರ ಪಟ್ಟಿಯ ಮೇಲೆ ಕಣ್ಣಿಡಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪಕ್ಷದ ಕಾರ್ಯಕರ್ತರಿಗೆ ಸಲಹೆ ನೀಡಿದರು.

ನಗರದಲ್ಲಿ ಮಂಗಳವಾರ ನಡೆದ ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಅಬ್ದುಲ್ ಜಬ್ಬಾರ್ ಅವರ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ‘ಮತದಾರರ ಪಟ್ಟಿಯಿಂದ ಕಿತ್ತು ಹಾಕಿರುವ ಹೆಸರುಗಳ ಪರಿಶೀಲನೆಗಾಗಿ ಪಕ್ಷದ ಮುಖಂಡ ನಜೀರ್ ಅಹ್ಮದ್ ಅವರನ್ನು ನೇಮಕ ಮಾಡಲಾಗುವುದು. ಪಕ್ಷದ ಕಾರ್ಯಕರ್ತರೂ ಈ ಬಗ್ಗೆ ಎಚ್ಚರದಿಂದ ಕೆಲಸ ಮಾಡಬೇಕು. ಸ್ಥಳೀಯವಾಗಿ ಸಮಿತಿಗಳನ್ನು ರಚಿಸಿಕೊಂಡು ಕೆಲಸ ಮಾಡಬೇಕು’ ಎಂದರು.

ಹಾನಗಲ್ ಮತ್ತು ಸಿಂದಗಿ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಅಲ್ಪಸಂಖ್ಯಾತರು ಏಕತೆ ಪ್ರದರ್ಶಿಸಿದರು. ಮುಂದೆಯೂ ಅದೇ ರೀತಿ ಗಟ್ಟಿಯಾದ ನಿಲುವು ತಾಳಬೇಕು. ಎಲ್ಲ ವರ್ಗದವರೂ ಒಗ್ಗೂಡಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ವಾತಾವರಣವನ್ನು ನಿರ್ಮಿಸಬೇಕು ಎಂದು ಹೇಳಿದರು.

‘ಕೋವಿಡ್ ಸಂಕಷ್ಟದ ಕಾಲದಲ್ಲಿ ಅಲ್ಪಸಂಖ್ಯಾತ ಸಮುದಾಯದ ಜನರು ಪ್ರದರ್ಶಿಸಿದ ಸೇವಾ ಮನೋಭಾವ ಮಾದರಿಯಾದುದು. ಸರ್ಕಾರವೇ ಬಳ್ಳಾರಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಶವಗಳನ್ನು ಹೇಗೆ ಎಸೆದಿತ್ತು ಎಂಬುದನ್ನು ಎಲ್ಲರೂ ನೋಡಿದ್ದಾರೆ. ಆದರೆ, ಅಲ್ಪಸಂಖ್ಯಾತ ಸಮುದಾಯದ ಯುವಕರು ಧೈರ್ಯದಿಂದ ಮೃತ ದೇಹಗಳ ಗೌರವಯುತ ಅಂತ್ಯಸಂಸ್ಕಾರ ನಡೆಸಿರುವುದು ಶ್ಲಾಘನೀಯ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ‘ಎರಡು ಬಾರಿ ಅಧಿಕಾರಕ್ಕೇರಿದ ಪ್ರಧಾನಿ ನರೇಂದ್ರ ಮೋದಿ ದೇಶವನ್ನು ಹಾಳು ಮಾಡಿದ್ದಾರೆ. ಮೂರನೇ ಬಾರಿ ಅಧಿಕಾರಕ್ಕೆ ಬಂದರೆ ದೇಶವನ್ನೇ ನಾಶ ಮಾಡುತ್ತಾರೆ. ಮತ್ತೆ ಅವರು ಅಧಿಕಾರಕ್ಕೇರದಂತೆ ತಡೆಯಲು ಎಲ್ಲರೂ ಒಗ್ಗೂಡಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು’ ಎಂದು ಹೇಳಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, ‘ಕಾಂಗ್ರೆಸ್ ಎಲ್ಲ ಸಂದರ್ಭಗಳಲ್ಲೂ ಅಲ್ಪಸಂಖ್ಯಾತರ ಹಿತಾಸಕ್ತಿ ರಕ್ಷಣೆಗೆ ಕೆಲಸ ಮಾಡುತ್ತಿರುವ ಪಕ್ಷ. ಜಾತ್ಯತೀತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುವ ನಮ್ಮ ಪಕ್ಷ ಮುಂದೆಯೂ ಎಲ್ಲ ಜನರನ್ನೂ ಒಟ್ಟಿಗೆ ಕರೆದೊಯ್ಯುವ ಕೆಲಸ ಮಾಡಲಿದೆ’ ಎಂದರು.

ಸಮಾರಂಭದಲ್ಲಿ ಎಐಸಿಸಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಇಮ್ರಾನ್ ಪ್ರತಾಪ್‌ಗಡಿ, ಶಾಸಕರಾದ ಎಚ್‌.ಕೆ. ಪಾಟೀಲ, ಎನ್‌.ಎ. ಹ್ಯಾರೀಸ್ ಮಾತನಾಡಿದರು.

ಸಿದ್ದರಾಮಯ್ಯಗೆ ಜೈಕಾರ

ಸಂಚಾರ ದಟ್ಟಣೆಯಲ್ಲಿ ಸಿಲುಕಿದ್ದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ತಡವಾಗಿ ಸಮಾರಂಭಕ್ಕೆ ಬಂದರು.

ಅವರು ಸಭಾಂಗಣ ಪ್ರವೇಶಿಸುತ್ತಿದ್ದಂತೆ ಅಲ್ಲಿ ನೆರೆದಿದ್ದವರು ಜೋರಾಗಿ ಜೈಕಾರ ಕೂಗಲಾರಂಭಿಸಿದರು. ಸ್ವಾಗತ ಭಾಷಣ ಮಾಡುತ್ತಿದ್ದ ಶಾಸಕ ಎನ್‌.ಎ. ಹ್ಯಾರೀಸ್ ಕೂಡ ಸಿದ್ದರಾಮಯ್ಯ ಅವರನ್ನು ಹೊಗಳಿದರು.

ಬಿಬಿಎಂಪಿ ಯಲಹಂಕ ವಲಯ: ಕಾಮಗಾರಿ ಪ್ರಗತಿ ಪರಿಶೀಲನೆ

ಸಮನ್ವಯದಿಂದ ಕಾಮಗಾರಿ ಅಧಿಕಾರಿಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬಿಬಿಎಂಪಿ ಯಲಹಂಕ ವಲಯ ವ್ಯಾಪ್ತಿಗೆ ಸಂಬಂಧಿಸಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳು, ಮಳೆಯಿಂದ ರಸ್ತೆಹಾನಿ ಮತ್ತು ಅದರ ಕಾಮಗಾರಿ, ತ್ಯಾಜ್ಯ ವಿಂಗಡಣೆ ಸೇರಿದಂತೆ ವಿವಿಧ ಕಾಮಗಾರಿಗಳ ಕುರಿತು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಪಾಲಿಕೆ ಹಾಗೂ ಜಲಮಂಡಳಿ ಅಧಿಕಾರಿಗಳೊಂದಿಗೆ ಮಿನಿ ವಿಧಾನಸೌಧದಲ್ಲಿ ಮಂಗಳವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮಳೆಗಾಲದಲ್ಲಿ ಬಿಬಿಎಂಪಿ ವಾರ್ಡ್ ಎಂಜಿನಿಯರ್‌ಗಳು ಹಾಗೂ ಜಲಮಂಡಳಿ ಅಧಿಕಾರಿಗಳು ಸಮನ್ವಯ ಮಾಡಿಕೊಂಡು ಸಾರ್ವಜನಿಕರಿಗೆ ಯಾವುದೇ ಸಮಸ್ಯೆಯಾಗದಂತೆ ಅಗತ್ಯ-ಕ್ರಮಗಳನ್ನು ಕೈಗೊಳ್ಳಬೇಕು. ಮನೆಗಳಿಗೆ ನೀರುನುಗ್ಗುವ ಮತ್ತು ರಸ್ತೆಗಳಲ್ಲಿ ನೀರು ಸಂಗ್ರಹವಾಗುವ ಸ್ಥಳಗಳನ್ನು ಗುರುತಿಸಿ ಕೂಡಲೇ ಸಮಸ್ಯೆ ಬಗೆಹರಿಸಬೇಕು. ರಾಜಕಾಲುವೆಗೆ ಸಂಪರ್ಕ ಕಲ್ಪಿಸುವ ಕಾಲುವೆಗಳಲ್ಲಿ ಹೂಳನ್ನು ತೆರವುಮಾಡಿ ಮಳೆನೀರು ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಕಲ್ಪಿಸಬೇಕು. ರಸ್ತೆಬದಿಯ ಶೋಲ್ಡರ್ ಡ್ರೈನ್‌ಗಳನ್ನು ಸ್ವಚ್ಛವಾಗಿ ರುವಂತೆ ನಿಗಾವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

110 ಹಳ್ಳಿಗಳಿಗೆ ಸಂಬಂಧಿಸಿದಂತೆ 16 ಹಳ್ಳಿಗಳು ಈ ವ್ಯಾಪ್ತಿಗೆ ಸೇರಿದ್ದು, ಜಲಮಂಡಳಿಯಿಂದ ನಡೆಯುತ್ತಿರುವ ಒಳಚರಂಡಿ, ನೀರು ಮತ್ತು ಕಾವೇರಿ 5ನೇಹಂತದ ಪೈಪ್‌ಲೈನ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಪಟ್ಟಿಯನ್ನು ನೀಡಬೇಕು. ಆ ಬಳಿಕ ಪುನಶ್ಚೇತನ ಕಾಮಕಾರಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ವಲಯ ವ್ಯಾಪ್ತಿಗೆ ಬರುವ ಪ್ರಮುಖ ರಸ್ತೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಮೂಲಕ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮಕೈಗೊಳ್ಳಬೇಕು. ಥಣಿಸಂದ್ರ ಮುಖ್ಯರಸ್ತೆಯ ರಾಷ್ಟ್ರೋತ್ಥಾನ ಶಾಲೆಯ ಬಳಿ ಮೇಲ್ಸೇತುವೆ ಸಮೀಪ ಕೆಪಿಟಿಸಿಎಲ್‌ನಿಂದ 66 ಕೆವಿ ವಿದ್ಯುತ್ ಮಾರ್ಗದ ಕಾರ್ಯ ಹಾಗೂ ಕಾವೇರಿ 5ನೇ ಹಂತದ ನೀರಿನ ಮಾರ್ಗದ ಕಾಮಗಾರಿ ಇನ್ನೂ ಮುಗಿಯದ ಕಾರಣ, ಸರ್ವಿಸ್ ರಸ್ತೆ ತೀರಾ ಹದಗೆಟ್ಟಿದೆ. ಈ ದಿಸೆಯಲ್ಲಿ ಕೂಡಲೇ ರಸ್ತೆ ದುರಸ್ತಿಕಾರ್ಯ ಕೈಗೊಂಡು ಸುಗಮಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ತಿಳಿಸಿದರು.

ಕಸ ವಿಲೇವಾರಿ-ನಿಗಾವಹಿಸಿ: ಒಣ ಮತ್ತು ಹಸಿ ಕಸ ಸರಿಯಾಗಿ ವಿಂಗಡಣೆ ಆಗುವಂತೆ ನೋಡಿಕೊಳ್ಳಬೇಕು. ಕಸ ವಿಲೇವಾರಿ ಜಾಗಗಳನ್ನು ಗುರುತಿಸಿ, ಕೂಡಲೇ ತೆರವುಗೊಳಿಸಿ ಕಸ ಸುರಿಯುವ ಸ್ಥಳಗಳು ನಿರ್ಮಾಣವಾಗದಂತೆ ಮಾಡಬೇಕು. ಎಲ್ಲ ಕೆರೆಗಳನ್ನು ಸರಿಯಾಗಿ ನಿರ್ವಹಣೆ ಮಾಡುವ ಮೂಲಕ ಸರಾಗವಾಗಿ ಕೆರೆಗಳಿಗೆ ನೀರು ಹರಿದುಹೋಗುವಂತೆ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದರು.

ಶಾಸಕ ಎಸ್‌.ಆರ್‌.ವಿಶ್ವನಾಥ್ ಅವರು, ‘ಒಳಚರಂಡಿ ಮತ್ತು ನೀರಿನ ಮಾರ್ಗ, ಬೆಸ್ಕಾಂ ನೆಲದಡಿ ಕೇಬಲ್ ಅಳವಡಿಕೆ, ಗ್ಯಾಸ್ ಲೈನ್, ಒಎಫ್‌ಸಿ ಕೇಬಲ್ ಅಳವಡಿಕೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ರಸ್ತೆ ಪುನಶ್ಚೇತನ ಕಾರ್ಯವನ್ನು ಕೂಡಲೇ ಮುಗಿಸಬೇಕು. 110 ಹಳ್ಳಿಗಳಿಗೆ ಒಳಚರಂಡಿ ಮತ್ತು ನೀರಿನ ಪೈಪ್‌ಲೈನ್ ಕಾಮಗಾರಿ ವಿಳಂಬವಾಗಿದ್ದು, ರಸ್ತೆ ದುರಸ್ತಿ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಜಲಮಂಡಳಿ ಅಧಿಕಾರಿಗಳು ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಬೇಕು’ ಎಂದರು.

ತಹಶೀಲ್ದಾರ್ ಕೆ.ನರಸಿಂಹಮೂರ್ತಿ, ಬಿಬಿಎಂಪಿ ವಲಯ ಆಯುಕ್ತ ಕೆ.ಎ. ದಯಾನಂದ್, ಯಲಹಂಕ ವಲಯದ ಜಂಟಿ ಆಯುಕ್ತೆ ಪಿ.ವಿ.ಪೂರ್ಣಿಮಾ, ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತ ಸರ್ಫರಾಜ್ ಖಾನ್, ಪ್ರಹ್ಲಾದ್, ಸುಗುಣಾ ಉಪಸ್ಥಿತರಿದ್ದರು



ಸಭೆಯನ್ನು ಉದ್ದೇಶಿಸಿ ಶಾಸಕ ಎಸ್‌.ಆರ್‌.ವಿಶ್ವನಾಥ್ ಮಾತನಾಡಿದರು. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಮುಖ್ಯ ಎಂಜಿನಿಯರ್ ರಂಗನಾಥ್ ಇದ್ದರು.

‘ಗುಜರಾತ್ ಮಾದರಿ ಸಂಪುಟ ಪುನಾರಚನೆ ಖಚಿತ’

ಕಲಬುರಗಿ: ‘ಮುಂದಿನ ಎರಡು ತಿಂಗಳಲ್ಲಿ ರಾಜ್ಯ ಸರ್ಕಾರದಲ್ಲಿ ಮಹತ್ತರ ಬದಲಾವಣೆಗಳಾಗಲಿವೆ. ಗುಜರಾತ್ ಮಾದರಿಯಲ್ಲಿ ರಾಜ್ಯದ ಸಂಪುಟ ಪುನಾರಚನೆಯಾಗಲಿದ್ದು, ಹಿರಿಯ ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡುವ ಬಗ್ಗೆ ಬಿಜೆಪಿ ಹೈಕಮಾಂಡ್ ಚಿಂತನೆ ನಡೆಸಿದೆ’ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಎಲ್ಲ ಜಿಲ್ಲೆಗಳಿಗೂ ಪ್ರಾತಿನಿಧ್ಯ ನೀಡಲು ಹೈಕಮಾಂಡ್ ನಿರ್ಧರಿಸಿದೆ. ಎಲ್ಲ ಜಿಲ್ಲೆ ಗಳಲ್ಲಿ ಕನಿಷ್ಠ ಒಬ್ಬರಿಗಾದರೂ ಪ್ರಾತಿನಿಧ್ಯ ನೀಡಬೇಕು ಎಂಬುದು ನಮ್ಮ ಒತ್ತಾಯ. ಅದು ಈಡೇರುವ ಸಮಯ ಬಂದಿದೆ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ನಾನೇನೂ ಹೇಳಲಾರೆ. ಸ್ವತಃ ಗೃಹ ಸಚಿವ ಅಮಿತ್ ಶಾ ಅವರೇ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆ ನಡೆಯಲಿದೆ ಎಂದು ಕೆಲ ದಿನಗಳ ಹಿಂದೆ ಹೇಳಿಕೆ ನೀಡಿದ್ದಾರೆ’ ಎಂದು ಹೇಳಿದರು.



ಕಾರ್ಯಕ್ರಮವನ್ನು ಬಮೂಲ್ ನಿರ್ದೇಶಕ ಜಿ.ಆರ್‌. ಭಾಸ್ಕರ್ ಉದ್ಘಾಟಿಸಿದರು

ಸಹಕಾರ ಸಪ್ತಾಹ ಉದ್ಘಾಟನೆ

ದಾಬಸ್ ಪೇಟೆ: ‘ಎಲ್ಲರಿಗಾಗಿ ನಾನು. ನನಗಾಗಿ ಎಲ್ಲರೂ ಅನ್ನುವುದು ಸಹಕಾರ ತತ್ವದ ಮುಖ್ಯ ತತ್ವ. ಇಂತಹ ಶ್ರೇಷ್ಠ ತತ್ವದ ಅಡಿಪಾಯದ ಮೇಲೆ ಕಟ್ಟಿರುವುದು ಸಹಕಾರ ಕ್ಷೇತ್ರ. ಸಹಕಾರ ತತ್ವದ ಧ್ಯೇಯವನ್ನು ಅಳವಡಿಸಿಕೊಂಡರೆ, ಆರ್ಥಿಕವಾಗಿ ಸಬಲರಾಗಬಹುದು’ ಎಂದು ಬಮೂಲ್ ನಿರ್ದೇಶಕ ಜಿ.ಆರ್‌. ಭಾಸ್ಕರ್ ಹೇಳಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಹಕಾರ ಒಕ್ಕೂಟ ಮತ್ತು ಬೆಂಗಳೂರು ಹಾಲು ಒಕ್ಕೂಟವು ನೆಲಮಂಗಲ ತಾಲ್ಲೂಕಿನ ಕರಿಮಣ್ಣೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಮಂಗಳವಾರ ಏರ್ಪಡಿಸಿದ್ದ 68ನೇ ಸಹಕಾರ ಸಪ್ತಾಹ ಉದ್ಘಾಟಿಸಿ ಅವರು ಮಾತನಾಡಿದರು.

‘ಪರಸ್ಪರ ಸಹಕಾರ, ನಂಬಿಕೆಯ ಅಮೂಲ್ಯ ತತ್ವಗಳ ಬುನಾದಿಯ ಮೇಲೆ ಅಸ್ತಿತ್ವಕ್ಕೆ ಬಂದ ಹಾಲು ಉತ್ಪಾದಕರ ಸಹಕಾರ ಸಂಘಗಳು ಇವತ್ತು ಗ್ರಾಮೀಣ ಭಾಗದ ರೈತರು ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಿವೆ’ ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಎ.ಸಿ.ನಾಗರಾಜು ಅಧ್ಯಕ್ಷತೆ ವಹಿಸಿದ್ದರು.

ಬೆಂಗಳೂರು ಹಾಲು ಒಕ್ಕೂಟದ ನೆಲಮಂಗಲ ಶಿಬಿರದ ಉಪ ವ್ಯವಸ್ಥಾಪಕ ಎ.ಆರ್‌.ಗೋಪಾಲ ಗೌಡ, ಕರಿಮಣ್ಣೆ ಡೈರಿ ಅಧ್ಯಕ್ಷೆ ಸುಮಾ, ವಿಸ್ತರಣಾಧಿಕಾರಿ ಚಂದನ್ ಇದ್ದರು.

ಇಂದಿನಿಂದ ಬೆಂಗಳೂರು ತಂತ್ರಜ್ಞಾನ ಶೃಂಗಸಭೆ

30ಕ್ಕೂ ಹೆಚ್ಚು ದೇಶ ಭಾಗವಹಿಸುವಿಕೆ • ವರ್ಚ್ಯುವಲ್ ರೂಪದಲ್ಲಿ ಇಸ್ರೇಲ್, ಆಸ್ಟ್ರೇಲಿಯಾ ಪ್ರಧಾನಿ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 24ನೇ ‘ಬೆಂಗಳೂರು ತಂತ್ರಜ್ಞಾನ ಶೃಂಗ -2021’(ಬಿಟಿಎಸ್) ಬುಧವಾರದಿಂದ ಮೂರು ದಿನ ನಗರದ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ನಡೆಯಲಿದ್ದು, ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಸಮಾವೇಶ ಉದ್ಘಾಟಿಸಲಿದ್ದಾರೆ.

ತಂತ್ರಜ್ಞಾನ ಶೃಂಗಕ್ಕೆ ನಡೆದಿರುವ ಅಂತಿಮ ಹಂತದ ಸಿದ್ಧತೆಗಳನ್ನು ಮಂಗಳವಾರ ವೀಕ್ಷಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಟಿ, ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಹೈಬ್ರಿಡ್ ಮಾದರಿಯಲ್ಲಿ ನಡೆಯುವ ಈ ಶೃಂಗದಲ್ಲಿ 30 ಕ್ಕೂ ಹೆಚ್ಚು ದೇಶಗಳು ಭಾಗವಹಿಸುತ್ತಿವೆ. ಇದೇ ಮೊದಲ ಬಾರಿಗೆ ಯುಎಇ, ಐರೋಪ್ಯ ಒಕ್ಕೂಟ, ವಿಯೆಟ್ನಾಂ, ದಕ್ಷಿಣ ಆಫ್ರಿಕಾ ದೇಶಗಳು ಪಾಲ್ಗೊಳ್ಳುತ್ತಿವೆ. ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಮತ್ತು ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್ ವರ್ಚ್ಯುವಲ್ ಮೂಲಕ ಮಾತನಾಡಲಿದ್ದಾರೆ ಎಂದರು.

‘ಡ್ರೈವಿಂಗ್ ದಿ ನೆಕ್ಸ್ಟ್’ ಘೋಷವಾಕ್ಯದಡಿ ನಡೆಯುವ ಈ ಶೃಂಗದಲ್ಲಿ ಐಟಿ, ಬಿಟಿ, ಕೃಷಿ, ಆರೋಗ್ಯ, ಲಸಿಕೆ, ಸೈಬರ್ ಸೆಕ್ಯುರಿಟಿ, ವೈದ್ಯಕೀಯ ಮತ್ತು ಆರ್ಥಿಕ ತಂತ್ರಜ್ಞಾನಗಳಿಗೆ ಒತ್ತು ನೀಡಲಾಗುತ್ತಿದೆ. ಈ ಮೂಲಕ ಡಿಜಿಟಲೀಕರಣ, ಹೈಬ್ರೀಡ್ ಮಲ್ಟಿ ಕ್ಲೌಡ್, ಸೆಲ್ ಥೆರಪಿ ಮತ್ತು ಜೀನ್ ಎಡಿಟಿಂಗ್ ಕ್ಷೇತ್ರಗಳ ಬಗ್ಗೆ ಚರ್ಚೆ ನಡೆಯಲಿದೆ. ರೈತ ಸಮುದಾಯ ಮತ್ತು ಮಹಿಳಾ ಉದ್ಯಮಿಗಳ ಸಬಲೀಕರಣಕ್ಕೂ ಹೆಜ್ಜೆ ಇಡಲಾಗುವುದು ಎಂದರು.

ಕಾರ್ಯಕ್ರಮದ ಉದ್ಘಾಟನೆಯಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಐಟಿ ವಿಷನ್ ಗ್ರೂಪ್ ಮುಖ್ಯಸ್ಥರಾದ ಕ್ರಿಸ್ ಗೋಪಾಲಕೃಷ್ಣನ್, ಕಿರಣ್ ಮಜುಂದಾರ್ ಷಾ, ಸ್ಟಾರ್ಟ್ ಅಪ್ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ಮುಂತಾದವರು ಭಾಗವಹಿಸಲಿದ್ದಾರೆ ಎಂದರು.

ವೀಕ್ಷಣೆ, ನೋಂದಣಿಗೆ ಅವಕಾಶ: ಬಿಟಿಎಸ್-21 ರಲ್ಲಿ ವರ್ಚ್ಯುವಲ್ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ. ಇದರಲ್ಲಿ 320 ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳುತ್ತಿವೆ. ಇವುಗಳ ಪೈಕಿ ರಾಜ್ಯ ಸರ್ಕಾರದ ಎಲಿವೇಟ್ ಯೋಜನೆಯಡಿ ಆಯ್ಕೆಯಾಗಿರುವ 100 ಮಳಿಗೆಗಳಿರಲಿವೆ.

ಆಸಕ್ತರು https://www.bengalurutechsummit.com/web/it_forms/registration-conference.php ಮೂಲಕ ನೋಂದಣಿ ಮಾಡಿ, ಸಮಾವೇಶ ವೀಕ್ಷಿಸಬಹುದು.



ಬೆಂಗಳೂರು ತಂತ್ರಜ್ಞಾನ ಶೃಂಗದ ಕೊನೆಯ ಹಂತದ ಸಿದ್ಧತೆಗಳ ಬಗ್ಗೆ ಅಧಿಕಾರಿಗಳ ಜತೆ ಚರ್ಚೆ ನಡೆಸಿದ ಸಚಿವ ಡಾ.ಸಿ.ಎನ್‌.ಅಶ್ವತ್ಥನಾರಾಯಣ.

ಅಂಕಿ-ಅಂಶಗಳು

300 ತಂತ್ರಜ್ಞಾನ ಕ್ಷೇತ್ರದ ಕಂಪನಿಗಳು ಭಾಗಿ

500 ನವೋದ್ಯಮಗಳ ಪ್ರಮುಖರ ಉಪಸ್ಥಿತಿ

20 ಸಾವಿರ ಪ್ರತಿನಿಧಿಗಳ ಸಮಾಗಮ

5 ಲಕ್ಷ ವರ್ಚ್ಯುವಲ್ ರೂಪದಲ್ಲಿ ಪಾಲ್ಗೊಳ್ಳುವಿಕೆ

ಜೈಶಂಕರ್, ಚೇತನ್ ಭಗತ್, ಶಿವನ್ ಉಪನ್ಯಾಸ

ಶೃಂಗದಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್, ಆಸ್ಟ್ರೇಲಿಯಾದ ವಿದೇಶಾಂಗ ಸಚಿವ ಮಾರಿಸ್ ಪೇನ್, ಇಸ್ರೊ ಅಧ್ಯಕ್ಷ ಕೆ.ಶಿವನ್, ಭಾರತ ಮೂಲದ ನೊಬೆಲ್ ಪುರಸ್ಕೃತ ವಿಜ್ಞಾನಿ ವೆಂಕಿ ರಾಮಕೃಷ್ಣನ್, ಲೇಖಕ ಚೇತನ್ ಭಗತ್, ಖ್ಯಾತ ಕ್ಯಾನ್ಸರ್ ವೈದ್ಯ-ವಿಜ್ಞಾನಿ ಡಾ.ಸಿದ್ಧಾರ್ಥ ಮುಖರ್ಜಿ, ವಿಶ್ವ ಆರ್ಥಿಕ ವೇದಿಕೆ ಸ್ಥಾಪಕ ಪ್ರೊ.ಕ್ಲಾಸ್ ಶ್ವಾಬ್, ಮೈಕ್ರೊಸಾಫ್ಟ್ ಮುಖ್ಯಸ್ಥ ಅನಂತ ಮಹೇಶ್ವರಿ, ಆಪಲ್ ಇಂಕ್ ಸಮೂಹ ಉಪಾಧ್ಯಕ್ಷೆ ಪ್ರಿಯಾ ಬಾಲಸುಬ್ರಹ್ಮಣ್ಯಂ, ಕ್ರಿಂಡೈಲ್ ಕಂಪನಿಯ ಸಿಇಒ ಮಾರ್ಟಿನ್ ಶ್ರೊಟರ್, ಟೆಲ್ಸ್ಟ್ರಾ ಕಂಪನಿಯ ಪಾಲುದಾರ ಗ್ಯಾವೆನ್ ಸ್ಟ್ಯಾಂಡನ್ ಮಾತನಾಡಲಿದ್ದಾರೆ.

ಚಿತ್ರನಟ ರಮೇಶ್ ಅರವಿಂದ್ ಅಭಿಮತ

ಆಡಳಿತದ ಮೇಲೆ ಮಾಧ್ಯಮ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಸಮಯದಲ್ಲಿ ಸಮರ್ಪಕ ಆಡಳಿತ ನಡೆಯಲು ಮಾಧ್ಯಮ ಕ್ಷೇತ್ರ ಕಾರಣ. ಪ್ರಶ್ನಿಸುವ ಹಾಗೂ ಎಲ್ಲ ವಿಷಯಗಳ ಮೇಲೆ ಸದಾ ಹದ್ದಿನ ಕಣ್ಣಿಟ್ಟಿರುವುದರಿಂದ ಆಡಳಿತ ಸುಸೂತ್ರವಾಗಿದೆ. ಮಾಧ್ಯಮ ಇರದಿದ್ದರೆ ಭಾರಿ ಅನ್ಯಾಯಗಳು ನಡೆದು ಹೋಗುತ್ತಿದ್ದವು’ ಎಂದು ನಟ ರಮೇಶ್ ಅರವಿಂದ್ ಹೇಳಿದರು.

ರಾಷ್ಟ್ರೀಯ ಪತ್ರಿಕಾ ದಿನದ ಅಂಗವಾಗಿ ಕರ್ನಾಟಕ ಮಾಧ್ಯಮ ಅಕಾಡೆಮಿ ಮಂಗಳವಾರ ಆಯೋಜಿಸಿದ್ದ ‘ಮಾಧ್ಯಮ ಕಂಡರೆ ಯಾರಿಗೆ ಭಯವಿಲ್ಲ?’ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಕೋಟ್ಯಂತರ ಜನರಿಗೆ ವ್ಯಕ್ತಿಯ ಭಾವನೆ ಮತ್ತು ಚಿಂತನೆಗಳನ್ನು ತಲುಪಿಸುವಲ್ಲಿ ಮಾಧ್ಯಮದ ಪಾತ್ರ ಮಹತ್ವದ್ದು. ವಿಷಯ ತಲುಪಿಸುವ ಏಕೈಕ ಸಾಮರ್ಥ್ಯವನ್ನು ಮಾಧ್ಯಮಗಳು ಹೊಂದಿವೆ’ ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಕೆ.ಜಿ. ಜಗದೀಶ್,‘ಮಾಧ್ಯಮಗಳ ಸಹಾಯದಿಂದ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುತ್ತೇವೆ. ಆಡಳಿತದಲ್ಲಿ ಸಾರ್ಥಕ ಸೇವೆಗೆ ಮಾಧ್ಯಮ ರಂಗ ಸಹಕಾರಿಯಾಗಿದೆ’ ಎಂದರು.

ಮಾಧ್ಯಮ ಅಕಾಡೆಮಿ ಅಧ್ಯಕ್ಷ ಕೆ.ಸದಾಶಿವ ಶೆಣೈ,‘ಅಕಾಡೆಮಿ ವತಿಯಿಂದ ‘40ರ ಸಂಭ್ರಮ’ ಸಮಾರಂಭದ ಅಂಗವಾಗಿ 40 ಮಂದಿಗೆ ಸನ್ಮಾನ ಹಾಗೂ 40 ಪುಸ್ತಕಗಳನ್ನು ಹೊರತರುವ ಚಿಂತನೆ ಇದೆ’ ಎಂದರು.

ಪತ್ರಕರ್ತ ಪದ್ಮರಾಜ ದಂಡಾವತಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಹಾಗೂ ಇತರರು ಭಾಗವಹಿಸಿದ್ದರು.



ನಟ ರಮೇಶ್ ಅರವಿಂದ್ ಮಾತನಾಡಿದರು. ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಕೆ.ಸದಾಶಿವ ಶೆಣೈ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಕೆ.ಜಿ.ಜಗದೀಶ್ ಇದ್ದಾರೆ —ಪ್ರಜಾವಾಣಿ ಚಿತ್ರ

ಹನಿವೆಲ್ ಸೆಂಟರ್ ಆಫ್ ಎಕ್ಸಲೆನ್ಸ್ ಆರಂಭ

ಯಲಹಂಕ: ಬಿಎಂಎಸ್ ತಾಂತ್ರಿಕ ಮತ್ತು ನಿರ್ವಹಣೆ ಮಹಾವಿದ್ಯಾಲಯದಲ್ಲಿ ಯುವ ಸಬಲೀಕರಣಕ್ಕಾಗಿ ಹನಿವೆಲ್ ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಉದ್ಘಾಟಿಸಲಾಯಿತು.

ಬಿಗ್ ಡೇಟಾ ಅನಾಲಿಟಿಕ್ಸ್, ಎಐ, ಎಂಎಲ್, ಆರ್‌ಪಿಎ ಮುಂತಾದ ಡಿಜಿಟಲ್ ಕೌಶಲಗಳೊಂದಿಗೆ ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸುವ ಗುರಿಯನ್ನು ಕೇಂದ್ರ ಹೊಂದಿದೆ. 138 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಿದೆ. ಟೆಕ್ ತಜ್ಞರಿಂದ ಜಾಗತಿಕ ಪ್ರಮಾಣೀಕರಣ ಒದಗಿಸಿ, ಪ್ರಮಾಣೀಕೃತ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಿದೆ.

ಹನಿವೆಲ್ ಇಂಡಿಯಾದ ಅಧ್ಯಕ್ಷ ಆಶಿಶ್ ಗಾಯಕ್ವಾಡ್ ಅವರು, ‘ಈ ತಂತ್ರಜ್ಞಾನ ಕಾರ್ಯಕ್ರಮಗಳು ಕೈಗೆಟುಕುವ ಮತ್ತು ಸಮಾಜದ ಎಲ್ಲವರ್ಗದ ಜನರಿಗೂ ಲಭ್ಯವಾಗಬೇಕು’ ಎಂದು ತಿಳಿಸಿದರು.

ಸರ್ಕಾರ ಮತ್ತು ಕಾರ್ಪೊರೇಟ್ ಉಪಕ್ರಮಗಳ ಮುಖ್ಯಸ್ಥ ಎಲ್‌.ಸುರೇಶ್ ಬಾಬು ಮಾತನಾಡಿ, ‘ತಂತ್ರಜ್ಞಾನವು ವಿಕಸನಗೊಂಡಂತೆ ಕೌಶಲ, ಉದ್ಯೋಗ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಲಿದೆ’ ಎಂದರು.

ಪ್ರಾಂಶುಪಾಲ ಡಾ.ಜಿ.ಎನ್. ಮೋಹನ್ ಬಾಬು, ಡೀನ್ ಡಾ.ಸೀಮಾ ಸಿಂಗ್, ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥೆ ಡಾ.ಸಿ.ಎಂ.ಭುವನೇಶ್ವರಿ ಇದ್ದರು.



ಕನ್ನಡ ಸಂಘರ್ಷ ಸಮಿತಿಯು ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಾ.ವೀ.ಮಂಜುಳಾ ಶಿವಾನಂದ (ದಿ.ಸಾಕಮ್ಮ ಮುದ್ದಪ್ಪ ನೆನಪಿನ ‘ನಿಸ್ಸೀಮ ಕನ್ನಡತಿ’), ರಾಮಣ್ಣ ಎಚ್‌. ಕೋಡಿಹೊಸಹಳ್ಳಿ (75 ವರ್ಷದ ಅಭಿನಂದನೆ) ಹಾಗೂ ರಾ.ತಿಮ್ಮೇಗೌಡ (ದಿ.ರೆಹಮಾನ್ ಖಾನ್ ಸ್ಮಾರಕ ‘ಕನ್ನಡ ಕಟ್ಟಾಳು’) ಅವರಿಗೆ ಸಾಹಿತಿ ಬಿ.ಟಿ. ಲಲಿತಾನಾಯಕ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ.ಎಸ್‌.ನಾಗರಾಜಸ್ವಾಮಿ, ಸಂಘಟನಾ ಕಾರ್ಯದರ್ಶಿ ಇಂದಿರಾ ಶರಣ್, ಉಪಾಧ್ಯಕ್ಷರಾದ ಶಾಂತಲಾ ಸುರೇಶ, ವರದಾ ಶ್ರೀನಿವಾಸ್, ಗಾಯತ್ರಿ ರಾಮಣ್ಣ ಹಾಗೂ ಎಂ.ಪ್ರಕಾಶಮೂರ್ತಿ ಇದ್ದರು. —ಪ್ರಜಾವಾಣಿ ಚಿತ್ರ

ಮತದಾನಕ್ಕೆ ಎಲ್ಲರಿಗೂ ಅವಕಾಶ ನೀಡಿ: ಎಎಪಿ

ಬೆಂಗಳೂರು: ‘ಮತದಾರರ ಪಟ್ಟಿಗೆ ಹೆಸರು ನೋಂದಣಿ ಮಾಡಿಕೊಳ್ಳಲು ಸಾಧ್ಯವಾಗದ ಪದವೀಧರರು ಹಾಗೂ ಶಿಕ್ಷಕರಿಗೂ ವಿಧಾನ ಪರಿಷತ್ ಚುನಾವಣೆಯಲ್ಲಿ ಮತದಾನಕ್ಕೆ ಅವಕಾಶ ನೀಡಬೇಕು’ ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಬೆಂಗಳೂರು ನಗರ ಘಟಕದ ಪ್ರಧಾನ ಕಾರ್ಯದರ್ಶಿ ಜಗದೀಶ್ ಚಂದ್ರ, ‘ರಾಜ್ಯದಲ್ಲಿ ವಿವಿಧ ವಿಶ್ವವಿದ್ಯಾಲಯಗಳಿಂದ ವಾರ್ಷಿಕ 3 ಲಕ್ಷಕ್ಕೂ ಹೆಚ್ಚು ಪದವೀಧರರು ಹೊರ ಬರುತ್ತಾರೆ. ಈಗ ಹೆಸರು ನೋಂದಣಿ ಮಾಡಿಸಿಕೊಂಡಿದ್ದವರಿಗೆ ಮಾತ್ರ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ನೋಂದಣಿ ಸಾಧ್ಯವಾಗದ ಲಕ್ಷಾಂತರ ಪದವೀಧರರು ಮತದಾನದ ಹಕ್ಕಿನಿಂದ ವಂಚಿತರಾಗಲಿದ್ದಾರೆ’ ಎಂದರು.

‘ಚುನಾವಣಾ ಆಯೋಗವು ಪದವಿ ಪೂರ್ಣಗೊಳಿಸಿದವರ ಮಾಹಿತಿಯನ್ನು ವಿಶ್ವವಿದ್ಯಾಲಯಗಳಿಂದ ತರಿಸಿಕೊಂಡು, ಎಲ್ಲರಿಗೂ ಮತದಾನಕ್ಕೆ ಅವಕಾಶ ಕಲ್ಪಿಸಬೇಕು’ ಎಂದು ಆಗ್ರಹಿಸಿದರು.

ಪಕ್ಷದ ಪದವೀಧರರು ಹಾಗೂ ಶಿಕ್ಷಕರ ವಿಭಾಗದ ಅಧ್ಯಕ್ಷ ಚನ್ನಬಸಪ್ಪ ರೇವಡಿ, ‘ಈಗಿನ ನಿಯಮವನ್ನು ದುರುಪಯೋಗಪಡಿಸಿಕೊಂಡು ತಮಗೆ ಬೇಕಾದವರನ್ನು ಮಾತ್ರ ಮತದಾರ ಪಟ್ಟಿಗೆ ಸೇರಿಸಿ, ಸುಲಭವಾಗಿ ಕೆಲವರು ಜಯಿಸುತ್ತಿದ್ದಾರೆ. ನಿಯಮಗಳಿಗೆ ಬದಲಾವಣೆ ತಂದರೆ ಇದಕ್ಕೆ ಕಡಿವಾಣ ಹಾಕಬಹುದು’ ಎಂದು ಹೇಳಿದರು.





ಮಧುಗಿರಿ ಪಟ್ಟಣದ ಆನಂದರಾಯನ ಗುಡ್ಡದ ಬುಡದಲ್ಲಿ ಕಲ್ಲಿನ ಬಂಡೆ ಉರುಳಿರುವುದು (ಎಡ ಚಿತ್ರ), ತುಮಕೂರಿನ ಕೊಡಿಗೇನಹಳ್ಳಿಯ ಸೇತುವೆ ಬಳಿ ಹರಿಯುತ್ತಿರುವ ಜಯಮಂಗಲಿ ನದಿಯನ್ನು ನೋಡಲು ಸೇರಿದ್ದ ಜನ – ಪ್ರಜಾವಾಣಿ ಚಿತ್ರಗಳು

20 ವರ್ಷಗಳ ನಂತರ ಹರಿದ ಜಯಮಂಗಲಿ ನದಿ • ರಾಗಿ, ಬಾಳೆ ಬೆಳೆಗಳಿಗೆ ಹಾನಿ

ತುಮಕೂರು, ರಾಮನಗರ ಜಿಲ್ಲೆಯಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ತುಮಕೂರು: ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಜೋರು ಮಳೆಯಾಗಿದ್ದು, ಸಾಕಷ್ಟು ಸಂಖ್ಯೆಯಲ್ಲಿ ಕೆರೆ, ಕಟ್ಟೆಗಳು ಭರ್ತಿಯಾಗಿವೆ. 20 ವರ್ಷಗಳ ನಂತರ ಜಯಮಂಗಲಿ ನದಿ ತುಂಬಿ ಹರಿಯುತ್ತಿದೆ.

ಪಾವಗಡ, ಶಿರಾ, ತಿಪಟೂರು ತಾಲ್ಲೂಕುಗಳನ್ನು ಹೊರತುಪಡಿಸಿದರೆ ಉಳಿದೆಡೆ ಮಳೆ ಬಿರುಸಾಗಿತ್ತು. ಕೊರಟಗೆರೆ, ತುಮಕೂರು, ಗುಬ್ಬಿ, ಕುಣಿಗಲ್, ತುರುವೇಕೆರೆ, ಮಧುಗಿರಿ ಭಾಗದಲ್ಲಿ ಭಾರಿ ಮಳೆಯಾಗಿದ್ದು, ಜಯಮಂಗಲಿ ನದಿ ಹರಿಯುವುದನ್ನು ನೋಡಲು ಜನರು ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದರು. ನದಿಗೆ ನಿರ್ಮಿಸಿರುವ ಚೆಕ್‌ಡ್ಯಾಂ, ಸೇತುವೆ ಮತ್ತು ನದಿ ಪಾತ್ರದ ಉದ್ದಕ್ಕೂ ಮೊಬೈಲ್‌ಗಳಲ್ಲಿ ಫೋಟೊ ತೆಗೆದುಕೊಂಡು, ವಿಡಿಯೊ ಮಾಡಿಕೊಂಡು ಇತರರಿಗೆ ಹಂಚಿಕೊಂಡು ಸಂತಸ ವ್ಯಕ್ತಪಡಿಸುತ್ತಿದ್ದ ದೃಶ್ಯಗಳು ಕಂಡುಬಂದವು.

ಕೊರಟಗೆರೆ ತಾಲ್ಲೂಕಿನ ತೀತಾ ಬಳಿ 40 ವರ್ಷಗಳ ಹಿಂದೆ ಅಣೆಕಟ್ಟು ನಿರ್ಮಿಸಲಾಗಿತ್ತು. ಆಗಿನಿಂದ ಕೊಡಿಗೇನಹಳ್ಳಿ ಭಾಗಕ್ಕೆ ನೀರು ಹರಿಯುವುದು ಕಡಿಮೆಯಾಯಿತು. ಜೊತೆಗೆ ಮಳೆ ಕಡಿಮೆಯಾದ ಕಾರಣ ನದಿ ಹರಿಯದೆ ಬರಡಾಗಿತ್ತು. ತಾಲ್ಲೂಕಿನ ಪ್ರಮುಖ ನದಿಗಳಾದ ಸುವರ್ಣಮುಖಿ ನದಿ ಕೂಡ 15 ದಿನಗಳಿಂದ ತುಂಬಿ ಹರಿಯುತ್ತಿದೆ. ತಿಪಟೂರಿನಲ್ಲಿ 72 ಗಂಟೆಯಲ್ಲಿ ಸುಮಾರು 79 ಮಿ.ಮೀ ಮಳೆ ಬಿದ್ದಿದ್ದು ತಾಲ್ಲೂಕಿನ ಗಂಗನಘಟ್ಟದ ಶಿಂಶಾ ನದಿಯೂ ತುಂಬಿ ಹರಿಯುತ್ತಿದೆ.

ಕೆರೆ ಕೋಡಿ– ಬೆಳೆಗಳಿಗೆ ಹಾನಿ: ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಾದ್ಯಂತ ಸೋಮವಾರ ರಾತ್ರಿ ಉತ್ತಮ ಮಳೆ ಆಗಿದ್ದು, ವಿರೂಪಾಕ್ಷಿಪುರ ಹಾಗೂ ಬಿ.ವಿ. ಹಳ್ಳಿ ಕೆರೆ ತುಂಬಿ ಕೋಡಿ ಹರಿದವು. ಇದರಿಂದ ಮಳೆ ನೀರು ಸುತ್ತಲಿನ ಜಮೀನುಗಳಿಗೆ ನುಗ್ಗಿದ್ದು, ಬೆಳೆಗಳಿಗೆ ಹಾನಿಯಾಯಿತು.

ಮಳೆಯಿಂದಾಗಿ ರಾಗಿ, ಭತ್ತ, ಬಾಳೆ ಬೆಳೆಗಳಿಗೆ ಹಾನಿಯಾಗಿದೆ. ಸಂಗ್ರಹಿಸಿ ಇಟ್ಟಿದ್ದ ಧಾನ್ಯ ಹಾಗೂ ತೆಂಗಿನಕಾಯಿ, ಗೊಬ್ಬರ ನೀರು ಪಾಲಾಗಿದ್ದು, ರೈತರು ನಷ್ಟ ಅನುಭವಿಸುವಂತೆ ಆಗಿದೆ.

15 ಜಿಲ್ಲೆಗಳಲ್ಲಿ ಭಾರಿ ಮಳೆಯ ಮುನ್ಸೂಚನೆ

ಬೆಂಗಳೂರು: ಅರಬ್ಬಿ ಸಮುದ್ರ ಮತ್ತು ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಹಾಗೂ ಮೇಲ್ಮೈ ಸುಳಿಗಾಳಿ ಉಂಟಾಗಿರುವುದರಿಂದ ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ನ.17 ಮತ್ತು 18ರಂದು ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ನ.21ರವರೆಗೆ ಹೆಚ್ಚು ಮಳೆಯಾಗುವ ಸಾಧ್ಯತೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ ಜಿಲ್ಲೆಗಳಿಗೂ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ರಾಜ್ಯದ ಕರಾವಳಿಯಲ್ಲಿ ಗಂಟೆಗೆ 60 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, 3.2 ಮೀಟರ್‌ಗಳಷ್ಟು ಎತ್ತರದ ಅಲೆಗಳೂ ಏಳುವ ಸೂಚನೆಗಳು ಇರುವುದರಿಂದ ಮೀನುಗಾರರು ಸಮುದ್ರಕ್ಕೆ ಬುಧವಾರ ಇಳಿಯಬಾರದು ಎಂದು ಇಲಾಖೆ ಸೂಚಿಸಿದೆ.

ಮಳೆ–ಎಲ್ಲಿ, ಎಷ್ಟು?: ಕಾರವಾರದಲ್ಲಿ ಮಂಗಳವಾರ 9 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಹಾಸನ 7, ಚಿಕ್ಕಬಳ್ಳಾಪುರ 6, ಬೆಂಗಳೂರು, ಚನ್ನಪಟ್ಟಣ 5, ಬೇಲೂರು, ಮಾಲೂರು, ನೆಲಮಂಗಲ, ತುಮಕೂರು, ಮಾಗಡಿ 4, ಕೊಪ್ಪ, ಗೌರಿಬಿದನೂರು, ರಾಮನಗರ, ಹೊಸಕೋಟೆ 3, ಸಾಗರ, ಮದ್ದೂರು, ತಿಪಟೂರು, ಶಿರಾ, ತೊಂಡೆಬಾವಿ, ಚಿಕ್ಕಮಗಳೂರು, ಕನಕಪುರ 2, ಭಟ್ಕಳ, ಗುಂಡ್ಲುಪೇಟೆ, ಕೊಳ್ಳೇಗಾಲ, ಅರಸೀಕೆರೆ, ಭದ್ರಾವತಿ, ಸೊರಬ, ಆನೇಕಲ್, ತೀರ್ಥಹಳ್ಳಿ, ತರೀಕೆರೆ, ಶಿಡ್ಲಘಟ್ಟದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ದಾವಣಗೆರೆಯಲ್ಲಿ 19 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಮಳೆಯಿಂದ ಹತ್ತಿ ಬೆಳೆಗೆ ಹಾನಿ

ರಾಯಚೂರು: ಜಿಲ್ಲೆಯ ವಿವಿಧೆಡೆ ಮಂಗಳವಾರ ಬಿರುಸಾಗಿ ಸುರಿದ ಮಳೆಯಿಂದಾಗಿ ಕೊಯ್ಲಿಗೆ ಬಂದಿರುವ ಭತ್ತ, ಹತ್ತಿ ಬೆಳೆ ಹಾನಿಯಾಗಿದೆ.

ರಾಯಚೂರು ತಾಲ್ಲೂಕಿನ ದೇವಸುಗೂರು ಹೋಬಳಿ, ಸಿರವಾರ ತಾಲ್ಲೂಕಿನ ಶಿವನಗರ ಕ್ಯಾಂಪ್‌ನಲ್ಲಿ ಭತ್ತದ ಬೆಳೆಗಳು ನೆಲಕ್ಕೆ ಬಿದ್ದಿವೆ. ಮಳೆಯಿಂದಾಗಿ ಹತ್ತಿ ಹಾಳಾಗಿದ್ದು, ಕೊಯ್ಲು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕವಿತಾಳದಲ್ಲಿ ಸುಮಾರು 40 ಎಕರೆ ಪ್ರದೇಶದಲ್ಲಿ ಈರುಳ್ಳಿ ಬೆಳೆ ಹಾನಿಯಾಗಿದೆ.

ಉತ್ತಮ ಮಳೆ (ಚಿಕ್ಕಮಗಳೂರು ವರದಿ): ಕಾಫಿನಾಡಿನಲ್ಲಿ ಉತ್ತಮ ಮಳೆಯಾಗಿದೆ. ಬಾಳೆಹೊನ್ನೂರು ಸಮೀಪದ ಮಹಾಲ್‌ಗೋಡು ಸೇತುವೆ ಮೇಲೆ ನೀರು ಹರಿಯುತ್ತಿದೆ. ಕಿರುಸೇತುವೆಗೆ ಅಳವಡಿಸಿದ್ದ ಮರಳಿನ ಚೀಲಗಳು ಕೊಚ್ಚಿ ಹೋಗಿವೆ.

ಉತ್ತರ ಕನ್ನಡದಲ್ಲಿ ಜೋರು ಮಳೆ

ಹುಬ್ಬಳ್ಳಿ: ಉತ್ತರ ಕನ್ನಡ, ಬಳ್ಳಾರಿ, ಧಾರವಾಡ, ಬೆಳಗಾವಿ,ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯ ವಿವಿಧೆಡೆ ಮಂಗಳವಾರ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಜೋರಾದ ಮಳೆ ಮುಂದುವರಿಯಿತು. ಕಾರವಾರ ನಗರದಲ್ಲಿ ಮಧ್ಯಾಹ್ನದ ನಂತರ ಗುಡುಗು, ಸಿಡಿಲು ಸಹಿತ ಎರಡು ತಾಸಿಗೂ ಅಧಿಕ ಕಾಲ ವರ್ಷಧಾರೆಯಾಯಿತು.

ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಒಂದು ವಾರದಿಂದ ಆಗಾಗ ಮಳೆಯಾಗುತ್ತಿದೆ. ಇದರಿಂದ 794.90 ಹೆಕ್ಟೇರ್‌ಗಳಷ್ಟು ಭತ್ತದ ಬೆಳೆಗೆ ಹಾನಿಯಾಗಿದೆ. ಮಳೆ ಮುಂದುವರಿದರೆ ಈ ಪ್ರಮಾಣವು ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಹೊನ್ನಪ್ಪ ಗೌಡ ತಿಳಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿ ಪಟ್ಟಣದ ಮತ್ತು ಸುತ್ತಲಿನ ಪ್ರದೇಶದಲ್ಲಿ ರಭಸದಿಂದ ಮಳೆ ಸುರಿದಿದೆ. ಧಾರವಾಡದಲ್ಲಿ ಮುಸ್ಸಂಜೆಯಲ್ಲಿ ಜೋರಾದ ಗಾಳಿ ಮಳೆಯಾಗಿದೆ.

ಹಳ್ಳದಲ್ಲಿ ಕೊಚ್ಚಿಹೋದ 20 ಕುರಿ

ಹೊಸದುರ್ಗ (ಚಿತ್ರದುರ್ಗ ಜಿಲ್ಲೆ): ತಾಲ್ಲೂಕಿನಲ್ಲಿ ವರುಣನ ಆರ್ಭಟ ಮುಂದುವರಿದಿದ್ದು, ಪಟ್ಟಣ ಸೇರಿ ಹಲವೆಡೆ ಮಂಗಳವಾರವೂ ಗುಡುಗು, ಸಿಡಿಲು ಸಹಿತ ಭಾರಿ ಮಳೆ ಸುರಿಯಿತು. ಹೋಬಳಿಯ ದೊಡ್ಡತೇಕಲವಟ್ಟಿಯಲ್ಲಿ ಹಳ್ಳ ದಾಟುವಾಗ 20 ಕುರಿಗಳು ಕೊಚ್ಚಿಹೋದವು. ಚಳ್ಳಕೆರೆ ತಾಲ್ಲೂಕಿನ ಬೆಳಗೆರೆ ಗ್ರಾಮದಲ್ಲಿ ಸಿಡಿಲು ಬಡಿದು 7 ಕುರಿಗಳು ಮೃತಪಟ್ಟಿವೆ. 13 ಮನೆಗಳಿಗೆ ಭಾಗಶಃ ಹಾನಿಯಾಗಿವೆ. ಶ್ರೀರಾಂಪುರದಲ್ಲೂ ಕೆರೆಗಳು ತುಂಬಿದ್ದು, ಕೋಡಿ ಬಿದ್ದಿವೆ.

ಜೋರು ಮಳೆ: ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಗಡುಗು ಸಹಿತ ಜೋರು ಮಳೆ ಸುರಿಯಿತು. ನಗರದ ತಗ್ಗುಪ್ರದೇಶಗಳ ಮನೆಗಳಿಗೆ ನೀರು ನುಗ್ಗಿತು. ನಗರದ ಅನೇಕ ಕಡೆ ಕಾಲುವೆಗಳು ತುಂಬಿ ಹರಿದವು. ರಸ್ತೆಗಳು ನೀರಿನಿಂದ ಜಲಾವೃತವಾದವು.

ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ನ್ಯಾಮತಿ ತಾಲ್ಲೂಕುಗಳ ವಿವಿಧೆಡೆ ಉತ್ತಮ ಮಳೆಯಾಗಿದೆ.

ಸುದ್ದಿ 2 ನಿಮಿಷ

ಭಾಷಾ ಉನ್ನತಾಧಿಕಾರ ಸಮಿತಿಗೆ ಕೃಷ್ಣಶಾಸ್ತ್ರಿ ಅಧ್ಯಕ್ಷ

ಬೆಂಗಳೂರು: ಎಲ್ಲ ಭಾರತೀಯ ಭಾಷೆಗಳ ಉನ್ನತಿಗಾಗಿ ಕೇಂದ್ರ ಸರ್ಕಾರ ಸೋಮವಾರ ರಚಿಸಿರುವ ಉನ್ನತಾಧಿಕಾರ ಸಮಿತಿಗೆ ಸಂಸ್ಕೃತ ವಿದ್ವಾಂಸ ಚಮೂ ಕೃಷ್ಣಶಾಸ್ತ್ರಿ ಅವರನ್ನು ನೇಮಕ ಮಾಡಲಾಗಿದೆ.

ದಕ್ಷಿಣ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕೆದಿಲದವರಾದ ಕೃಷ್ಣಶಾಸ್ತ್ರಿಯವರು ತಮಿಳುನಾಡಿನ ತಂಜಾವೂರಿನಲ್ಲಿ ನೆಲೆಸಿದ್ದಾರೆ. ಶಿಕ್ಷಣ ತಜ್ಞರೂ ಆಗಿರುವ ಇವರು, ಸಂಸ್ಕೃತ ಭಾರತಿಯ ಸಹ ಸಂಸ್ಥಾಪಕರಲ್ಲಿ ಒಬ್ಬರು. ಸಂಸ್ಕೃತ ಸಂವರ್ಧನೆಗಾಗಿ 'ಸಂಸ್ಕೃತ ಸಂವರ್ಧನಾ ಪ್ರತಿಷ್ಠಾನ' ಸ್ಥಾಪಿಸಿದ್ದಾರೆ.



ಸಂವಿಧಾನದ 8ನೇ ಪರಿಚ್ಛೇದದಲ್ಲಿರುವ ಭಾಷೆಗಳಲ್ಲದೆ, ಅಪಾಯದ ಅಂಚಿನಲ್ಲಿರುವ ಭಾಷೆಗಳು, ಪರಿಚ್ಛೇದದಲ್ಲಿ ಇಲ್ಲದ ಭಾಷೆಗಳು, ಅಲ್ಪಸಂಖ್ಯಾತ, ಬುಡಕಟ್ಟು ಮತ್ತು ಶಾಸ್ತ್ರೀಯ ಭಾಷೆಗಳ ಕುರಿತಾಗಿ ಅಧ್ಯಯನ ನಡೆಸಿ, ಅವುಗಳ ಉನ್ನತಿಗಾಗಿ ಕೆಲಸ ಮಾಡಲು ಉನ್ನತಾಧಿಕಾರ ಸಮಿತಿಯನ್ನು ಕೇಂದ್ರ ಸರ್ಕಾರ ರಚಿಸಿದೆ.

ಈ ಸಮಿತಿಯು ಎರಡು ವರ್ಷಗಳ ಅವಧಿಯಲ್ಲಿ ಭಾಷಾಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ನಡೆಸುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಭಾಷಾ ಸಂಬಂಧಿತ ಸಂಸ್ಥೆಗಳ ಜೊತೆ ಸಮನ್ವಯ ಸಾಧಿಸಿ ಸೂಕ್ತವಾದ ಕ್ರಿಯಾ ಯೋಜನೆಗಳನ್ನು ರೂಪಿಸುವ ಹೊಣೆಗಾರಿಕೆ ಹೊಂದಿದೆ.

ಮಿನಿಯಲ್ಲ, ತಾಲ್ಲೂಕು ಆಡಳಿತ ಸೌಧ

ಬೆಂಗಳೂರು: ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿರುವ 'ಮಿನಿ ವಿಧಾನಸೌಧ'ದ ಹೆಸರನ್ನು 'ತಾಲ್ಲೂಕು ಆಡಳಿತ ಸೌಧ' ಎಂದು ಬದಲಾಯಿಸಿ ಸುತ್ತೋಲೆ ಹೊರಡಿಸಲಾಗಿದೆ.

ತಾಲ್ಲೂಕು ಆಡಳಿತ ಕಚೇರಿಯನ್ನು ರಾಜ್ಯದ ಭಾಷಾ ನೀತಿಗೆ ಒಳಪಡುವಂತೆ ಹಾಗೂ ರಾಜ್ಯದ ಅಧಿಕೃತ ಭಾಷೆ ಕನ್ನಡವಾಗಿರುವುದರಿಂದ, ನಾಡು–ನುಡಿ ಸಂಸ್ಕೃತಿಗೆ ಪೂರಕವಾಗಿ 'ತಾಲ್ಲೂಕು ಆಡಳಿತ ಸೌಧ' ಎಂದು ಬದಲಾಯಿಸುವುದು ಸೂಕ್ತವೆಂದು ಕಂದಾಯ ಇಲಾಖೆ ತಿಳಿಸಿದೆ.

ಈಗ ಇರುವ ಮಿನಿ ಎಂಬ ಪದ ಆಂಗ್ಲ ಭಾಷೆಯಾದ್ದಾಗಿದ್ದು, ತಾಲ್ಲೂಕು ಮಟ್ಟದ ಆಡಳಿತ ಕಟ್ಟಡಗಳಲ್ಲಿ ಯಾವುದೇ ಕಲಾಪಗಳನ್ನಾಗಲಿ ಕಾಯಿದೆ ಕಾನೂನುಗಳನ್ನಾಗಲೀ ರೂಪಿಸುವ ಶಕ್ತಿ ಕೇಂದ್ರಗಳಿಲ್ಲದ ಕಾರಣ 'ಮಿನಿ ವಿಧಾನಸೌಧ' ಎಂಬುದರ ಬದಲಾಗಿ 'ತಾಲ್ಲೂಕು ಆಡಳಿತ ಸೌಧ' ಎಂದು ಬದಲಿಸುವುದು ಅರ್ಥಪೂರ್ಣವಾಗಿರುತ್ತದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಮತ್ತು ಕೆಲವು ಗಣ್ಯರು ಮನವಿ ಮಾಡಿದ್ದರು ಎಂದು ಹೇಳಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	12,508	12,299
ಹಾರಂಗಿ	2,859	2,857.78	1,160	655
ಕಬಿನಿ	2,284	2,283.86	2,300	2,000
ಹೇಮಾವತಿ	2,922	2,908.99	5,216	2,866
ಲಿಂಗನಮಕ್ಕಿ	1,819	1,813.65	12,302	-
ಸೂಪಾ (ಮೀ)	564	555.35	287	3,767
ಮಾಣಿ	594.36	586.68	633	-
ತುಂಗಭದ್ರಾ	1,633	1,632.16	5,869	8,756
ಮಲಪ್ರಭಾ	2,079.50	2,076.12	-	2,694
ಘಟಪ್ರಭಾ	2,175	2,167.11	-	2,539
ಭದ್ರಾ	186	185.80	6,102	3,683
ಆಲಮಟ್ಟಿ (ಮೀ)	519.60	518.45	-	15,659
ನಾರಾಯಣಪುರ (ಮೀ)	492.25	491.52	12,447	7,864

* ನೆಲಮಟ್ಟದಿಂದ

ಬೆಂಗಳೂರು: 24 ಗಂಟೆಗಳಲ್ಲಿ 73 ಮಿ.ಮೀ.ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 24 ಗಂಟೆಗಳಲ್ಲಿ (ಸೋಮವಾರ ಬೆಳಿಗ್ಗೆ 8.30 ರಿಂದ ಮಂಗಳವಾರ ಬೆಳಿಗ್ಗೆ 8.30) ಒಟ್ಟು 73 ಮಿಲಿ ಮೀಟರ್ ಮಳೆಯಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಸುತ್ತಮುತ್ತ 32.5 ಮಿ. ಮೀ. ಮಳೆ ದಾಖಲಾಗಿದೆ. ಹೆಸರಘಟ್ಟ ಹಾಗೂ ಉತ್ತರಹಳ್ಳಿಯಲ್ಲಿ ಕ್ರಮವಾಗಿ 13 ಮತ್ತು 14.5 ಮಿ.ಮೀ.ಮಳೆ ಬಿದ್ದಿದೆ. ಸಂಪಂಗಿ ರಾಮನಗರ, ಶಾಂತಿನಗರ, ಇಂದಿರಾನಗರ, ಕಾವಲ್‌ಭೈರಸಂದ್ರ, ಬಾಣಸವಾಡಿ, ಎಲೆಕ್ಟ್ರಾನಿಕ್ ಸಿಟಿ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೂ ಅಧಿಕ ಮಳೆಯಾಗಿದೆ.

ಇಂದಿರಾನಗರದ 10ನೇ ತಿರುವು, ಆನಂದನಗರ ವಾರ್ಡ್ ಸಂಖ್ಯೆ 20, ಹೆಬ್ಬಾಳದ ಏರ್‌ಟೆಲ್ ಕಚೇರಿ, ಆವಲಹಳ್ಳಿಯ ವಿನೋಬಾ ಕಾಲೊನಿ (ಗಿರಿನಗರ ವಾರ್ಡ್ 158), ಅಂಜಾನಪುರ, ಮಾಳಗಾಳ ಮುಖ್ಯರಸ್ತೆ (ರಾಜರಾಜೇಶ್ವರಿ ನಗರ ವಾರ್ಡ್ 73) ಹಾಗೂ ಬಸವನಗುಡಿಯ ಕೃಷ್ಣಾರಾವ್ ಉದ್ಯಾನದ ಬಳಿ ಮರಗಳು ಉರುಳಿದ್ದವು. ಹೀಗಾಗಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಕಾವೇರಿನಗರ, ಕಾವಲ್‌ಭೈರಸಂದ್ರ, ಕಮ್ಮನಹಳ್ಳಿ ವಾರ್ಡ್ 28ರ ಕಾಳಮ್ಮ ರಸ್ತೆ, ಬಾಣಸವಾಡಿ ರೈಲ್ವೆ ನಿಲ್ದಾಣ, ಬ್ಯಾಟರಾಯನಪುರದ ಸರೋವರನಗರ ವಾರ್ಡ್ 8 ಹಾಗೂ ಎನ್‌ಟಿಐ ಲೇಔಟ್‌ನ ವಾರ್ಡ್ 9ರಲ್ಲಿ ಹಲವು ಮನೆಗಳಿಗೆ ನೀರು ನುಗ್ಗಿತ್ತು. ಹೀಗಾಗಿ ಜನ ನಿದ್ರೆ ಇಲ್ಲದೆ ರಾತ್ರಿ ಕಳೆಯುವಂತಾಗಿತ್ತು.

ಎಚ್‌ಬಿಆರ್ ಲೇಔಟ್, ಶಿವಾನಂದ ವೃತ್ತ, ಲುಂಬಿನಿ ಗಾರ್ಡನ್, ಬಿ.ನಾರಾಯಣಪುರ ರೈಲ್ವೆ ಕೆಳ ಸೇತುವೆ, ಎಂ.ಜಿ.ರಸ್ತೆ ಹಾಗೂ ಇತರೆಡೆ ರಸ್ತೆಯಲ್ಲಿ ನೀರು ಸಂಗ್ರಹವಾಗಿದ್ದರಿಂದ ವಾಹನ ಸವಾರರು ಪರದಾಡುವಂತಾಗಿತ್ತು.

ತಾಪ ಹೆಚ್ಚಿದರೆ ಕೋಲಾರದಲ್ಲೂ ಪ್ರವಾಹ!

ಗ್ಲಾಸ್ಗೊದಲ್ಲಿ ಕೈಗೊಂಡ ನಿರ್ಣಯ ರಾಜ್ಯ ಮಟ್ಟದಲ್ಲೂ ಜಾರಿ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ತಾಪಮಾನ ಈಗಿರುವುದಕ್ಕಿಂತ 0.5 ರಿಂದ 2.5 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾದರೂ ಕೋಲಾರ ಸೇರಿದಂತೆ ಬರಪೀಡಿತ ಪ್ರದೇಶಗಳಲ್ಲಿ ಭಾರಿ ಮಳೆಯಾಗುವ ಮತ್ತು ಮಲೆನಾಡಿನಂತಹ ಪ್ರದೇಶಗಳಲ್ಲಿ ಮಳೆಯ ಕೊರತೆಯಾಗುವ ಸಾಧ್ಯತೆ ಇದೆ. 2050 ರ ವೇಳೆಗೆ ನೈಸರ್ಗಿಕ ಪ್ರಕೋಪದ ಪರಿಣಾಮಗಳನ್ನು ಊಹಿಸುವುದೂ ಕಷ್ಟ...

ಜಾಗತಿಕ ತಾಪಮಾನ ರಾಜ್ಯದ ಮೇಲೆ ಬೀರುವ ಪರಿಣಾಮ ಮತ್ತು ಅದನ್ನು ಎದುರಿಸುವ ಬಗ್ಗೆ 'ಬೆಂಗಳೂರು ಕ್ಲೈಮೇಟ್‌ಚೇಂಜ್ ಇನಿಶಿಯೇಟಿವ್ ಕರ್ನಾಟಕ'ದ ತಜ್ಞರ ತಂಡದ ವರದಿ ಈ ಅಂದಾಜನ್ನು ಮಾಡಿದೆ.

ಆಗ ಮುಂಗಾರು ಮತ್ತು ಹಿಂಗಾರು ಮಳೆಯ ದಿನಗಳೂ ಹೆಚ್ಚಾಗಲಿವೆ. ಇದರ ಪರಿಣಾಮ ಹತ್ತಿ ಮತ್ತು ಕಬ್ಬು ಉತ್ಪಾದನೆ ಹೆಚ್ಚಾದರೆ, ಆಹಾರ ಧಾನ್ಯಗಳಾದ ಭತ್ತ, ರಾಗಿ, ಕಡಲೆಕಾಯಿ ಮುಂತಾದ ಬೆಳೆಗಳ ಇಳುವರಿ ಕುಸಿಯಲಿದೆ ಎಂದು ಹೇಳಿದೆ.



'ಬೆಂಗಳೂರು ಕ್ಲೈಮೇಟ್ ಚೇಂಜ್ ಇನಿಶಿಯೆಟಿವ್ ಕರ್ನಾಟಕ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಎಡದಿಂದ) ಜಗಮೋಹನ್ ಶರ್ಮ, ಡಾ. ಇಂದು ಕೆ. ಮೂರ್ತಿ, ಡಾ.ಎನ್‌.ಎಚ್ ರವೀಂದ್ರನಾಥ್, ಪ್ರೊ. ಬಿ.ಕೆ ಚಂದ್ರಶೇಖರ್ ಮತ್ತು ಜಯಂತ್ ನಾಡಿಗೇರ್ ಭಾಗವಹಿಸಿದ್ದರು

ಗ್ಲಾಸ್ಗೊದಲ್ಲಿ ನಡೆದ ಜಾಗತಿಕ ತಾಪಮಾನದ ನಿರ್ಣಯಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ನಗರದಲ್ಲಿ ತಜ್ಞರು ಮಂಗಳವಾರ ಸಭೆ ನಡೆಸಿ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರಿಸಿದರು.

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ಮಹಾನಿರ್ದೇಶಕ ಡಾ.ಜಗಮೋಹನ್ ಶರ್ಮಾ, ರಾಜ್ಯದಲ್ಲಿ ತಾಪಮಾನದ ಪ್ರಮಾಣ ತಗ್ಗಿಸದೇ ಹೋದರೆ, ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಹೆಚ್ಚು. ಇದಕ್ಕಾಗಿ ಪ್ಯಾರಿಸ್ ಮತ್ತು ಗ್ಲಾಸ್ಗೊದಲ್ಲಿ ನಡೆದ ಜಾಗತಿಕ ತಾಪಮಾನದ ನಿರ್ಣಯಗಳನ್ನು ಎಲ್ಲ ಹಂತಗಳಲ್ಲೂ ಅಳವಡಿಸಿಕೊಳ್ಳುವ ಬಗ್ಗೆ ಚಿಂತನೆ ನಡೆಸಬೇಕು ಎಂದರು.

ಭಾರತೀಯ ವಿಜ್ಞಾನ ಸಂಸ್ಥೆಯ ಸುಸ್ಥಿರ ತಂತ್ರಜ್ಞಾನ ಕೇಂದ್ರದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಚ್. ರವೀಂದ್ರನಾಥ್, ಜಾಗತಿಕ ಮಟ್ಟದಲ್ಲಿನ ಹೊರಸೂಸುವಿಕೆಯನ್ನು 2030 ರ ವೇಳೆಗೆ ಶೇ 40 ರಷ್ಟು ಮತ್ತು 2050 ರ ವೇಳೆಗೆ ಶೂನ್ಯ ಮಟ್ಟಕ್ಕೆ ಇಳಿಸುವ ಗುರಿ ಹಾಕಿಕೊಳ್ಳಲಾಗಿದೆ. ಇದನ್ನು ಸಾಧಿಸಲು ರಾಜ್ಯಗಳ ಮಟ್ಟದಲ್ಲಿ ಅಳವಡಿಸಿಕೊಳ್ಳಬೇಕಾದ ಕ್ರಮಗಳ ಬಗ್ಗೆ ಕೇಂದ್ರ ಸರ್ಕಾರ ರಾಜ್ಯಗಳ ಜತೆ ಚರ್ಚಿಸಬೇಕು ಎಂದರು.

ಪ್ರೊ. ಬಿ.ಕೆ.ಚಂದ್ರಶೇಖರ್ ಮಾತನಾಡಿ, ದೇಶದಲ್ಲಿ ಮಾಲಿನ್ಯ ತಗ್ಗಿಸುವ ನಿಟ್ಟಿನಲ್ಲಿ ಗ್ಲಾಸ್ಗೊದಲ್ಲಿ ಕೇಂದ್ರ ಸರ್ಕಾರ ವ್ಯಕ್ತಪಡಿಸಿರುವ ನಿಲುವು ಸರಿಯಾಗಿಯೇ ಇದೆ. ಪ್ಯಾರಿಸ್ ಸಮ್ಮೇಳನದಲ್ಲೂ ಹಲವು ಉತ್ತಮ ನಿರ್ಧಾರಗಳನ್ನು ಪ್ರಕಟಿಸಿತ್ತು. ಅವುಗಳನ್ನು ಜಾರಿಗೆ ತರುವ ಯತ್ನ ನಡೆದಿಲ್ಲ ಎಂದರು.

ಡಾ. ಕೆ. ಇಂದು ಮೂರ್ತಿ ಮಾತನಾಡಿ, 2030 ರ ಬಳಿಕ ಕೆಲವು ಕಡೆಗಳಲ್ಲಿ ದಿನಕ್ಕೆ 50 ಮಿ.ಮೀ.ಗಳಿಂದ 100 ಮಿ.ಮೀ ಮಳೆ ಆಗಬಹುದು. ಆಗ ಒಂದು ಕಡೆ ಪ್ರವಾಹ ಎದುರಿಸುವ ಮತ್ತೊಂದು ಕಡೆ ಬರ ಎದುರಿಸುವ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ ಎಂದರು.

ಮತೀಯ ಗೂಂಡಾಗಿರಿ ಆರು ಜನರ ಬಂಧನ

ಮಂಗಳೂರು: ನಗರ ಹೊರ ವಲಯದ ಸುರತ್ಕಲ್ ಬಳಿ ಸೋಮವಾರ ರಾತ್ರಿ ಮತೀಯ ಗೂಂಡಾಗಿರಿ ನಡೆದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಮಂದಿಯನ್ನು ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಪ್ರಹ್ಲಾದ್, ಪ್ರಶಾಂತ್, ಗುರುಪ್ರಸಾದ್, ಪ್ರತೀಶ್, ಭರತ್ ಹಾಗೂ ಸುಕೇಶ್ ಬಂಧಿತ ಆರೋಪಿಗಳು. ಘಟನೆಯ ಸಂದರ್ಭದಲ್ಲಿ ಇಬ್ಬರು ಆರೋಪಿಗಳು ಸ್ವಿಗ್ಗಿ ಫುಡ್ ಡೆಲಿವರಿ ಸಂಸ್ಥೆಯ ಟೀ ಶರ್ಟ್ ಧರಿಸಿದ್ದು, ಈ ಬಗ್ಗೆ ತನಿಖೆಗೆ ಸೂಚಿಸಲಾಗಿದೆ.

ಬಂಧಿತರು ತಾವು ಹಿಂದೂಪರ ಸಂಘಟನೆಗಳಿಗೆ ಸೇರಿದವರು ಎಂದು ಹೇಳಿಕೊಂಡಿದ್ದಾರೆ. ಆ ಮಾಹಿತಿಯನ್ನು ಸಂಬಂಧಪಟ್ಟ ಸಂಘಟನೆಗಳ ಮೂಲಕ ಪರಿಶೀಲನೆ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಸುರತ್ಕಲ್‌ನ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿನಿ, ತಾನು ಹಿಂದೆ ವಾಸ ಮಾಡುತ್ತಿದ್ದ ರೂಂ ಬದಲಾಯಿಸಿ ಸುರತ್ಕಲ್ ವ್ಯಾಪ್ತಿಯಲ್ಲಿ ತನ್ನ ಸ್ನೇಹಿತೆಯರ ರೂಂಗೆ ಸ್ಥಳಾಂತರಿಸಲು ನಿರ್ಧರಿಸಿದ್ದರು. ಶಿಫ್ಟ್ ಮಾಡುವಾಗ ತಡವಾಗಿತ್ತು. ರಾತ್ರಿ 10.30ರ ವೇಳೆಗೆ ಹಿರಿಯ ವಿದ್ಯಾರ್ಥಿಯೊಬ್ಬರನ್ನು ಕರೆಸಿಕೊಂಡು, ಅವರಿಂದ ಬೈಕ್‌ನಲ್ಲಿ ಡ್ರಾಪ್ ಪಡೆದಿದ್ದರು. ಈ ವೇಳೆ ಇಬ್ಬರು ಅವರನ್ನು ಹಿಂಬಾಲಿಸಿದ್ದಾರೆ. ವಿದ್ಯಾರ್ಥಿನಿ ತೆರಳಬೇಕಿದ್ದ ಸ್ಥಳ ತಲುಪಿದಾಗ, ಆಕೆಯ ಜತೆಗಿದ್ದ ವ್ಯಕ್ತಿಯ ಮೇಲೆ ಆರೋಪಿಗಳು ಹಲ್ಲೆ ನಡೆಸಿದ್ದಾರೆ.

ವಿದ್ಯಾರ್ಥಿನಿಯನ್ನು ಆರಂಭದಿಂದಲೇ ಇಬ್ಬರು ಹಿಂಬಾಲಿಸಿದ್ದು, ಮತ್ತೆ ನಾಲ್ವರನ್ನು ಫೋನ್ ಮೂಲಕ ಸಂಪರ್ಕಿಸಿ ಸ್ಥಳಕ್ಕೆ ಕರೆಸಿಕೊಂಡಿದ್ದಾರೆ. ಯುವತಿ ಹಾಗೂ ಆಕೆಯ ಪೋಷಕರ ಬಗ್ಗೆ ತೀರಾ ಅವಾಚ್ಯವಾಗಿ ನಿಂದಿಸಿದ್ದಾರೆ. ಯುವತಿಯ ಗೌರವಕ್ಕೆ ಧಕ್ಕೆ ಬರುವ ರೀತಿಯಲ್ಲಿ ನಡೆದುಕೊಂಡಿರುವುದು ಹಾಗೂ ಅನ್ಯಧರ್ಮೀಯರೆಂಬ ಕಾರಣಕ್ಕೆ ಜಗಳವಾಡಿರುವ ಬಗ್ಗೆ ಎರಡು ಪ್ರತ್ಯೇಕ ಕಲಂಗಳಡಿ ಪ್ರಕರಣ ದಾಖಲಿಸಲಾಗಿದೆ. ಉತ್ತರ ವಿಭಾಗದ ಎಸಿಪಿ ನೇತೃತ್ವದ ಸುರತ್ಕಲ್ ಪೊಲೀಸರ ತಂಡ ಆರೋಪಿಗಳನ್ನು ಬಂಧಿಸಿದೆ ಎಂದು ಅವರು ಮಾಹಿತಿ ನೀಡಿದರು.

ನದಿ ನೀರು ಹೆಚ್ಚಳ: ಮುಳುಗಿದ ದರ್ಗಾ

ಚಾಮರಾಜನಗರ/ಹಾಸನ/ಮೈಸೂರು: ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಮದ್ದೂರು ಸಮೀಪ ಸುವರ್ಣಾವತಿ ನದಿ ನೀರಿನ ಹರಿವು ಮಂಗಳವಾರ ಹೆಚ್ಚಳವಾಗಿ ಹಜರತ್ ಖ್ವಾಜಾ ದಿಲ್ಬರ್ ಷಾ ವಲಿ ದರ್ಗಾ ಮುಳುಗಡೆಯಾಗಿದೆ.

ಹಾಸನ ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ಹಿರೀಸಾವೆ ಹೋಬಳಿಯಲ್ಲಿ ನಾಲ್ಕು ಮನೆ ಗೋಡೆಗಳು ಕುಸಿದು ಬಿದ್ದಿವೆ. ಮೈಸೂರು ನಗರ ಹಾಗೂ ಸುತ್ತಮುತ್ತ ಸಂಜೆ ಧಾರಾಕಾರ ಮಳೆಯಾಗಿದೆ.

ಚೆನ್ನೈನಲ್ಲಿ ಮತ್ತೆ ರೆಡ್ ಅಲರ್ಟ್

ಚೆನ್ನೈ: ಕಳೆದ ವಾರ ಭಾರಿ ಮಳೆಯಿಂದ ಸಂಕಷ್ಟಕ್ಕೆ ಒಳಗಾಗಿದ್ದ ಚೆನ್ನೈಗೆ ಮತ್ತೆ ಮಳೆಯ ಆತಂಕ ಎದುರಾಗಿದೆ. ನವೆಂಬರ್ 18ರಂದು ನಗರ ಹಾಗೂ ಅಕ್ಕಪಕ್ಕದ ಜಿಲ್ಲೆಗಳಲ್ಲಿ ಅತ್ಯಧಿಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ 'ರೆಡ್ ಅಲರ್ಟ್' ಹೊರಡಿಸಿದೆ.

ಚೆನ್ನೈ ನಗರಕ್ಕೆ ವಾರದೊಳಗೆ ಎರಡನೇ ಬಾರಿ ರೆಡ್ ಅಲರ್ಟ್ ನೀಡಲಾಗಿದೆ. ತಮಿಳುನಾಡಿನ ಉತ್ತರ ಭಾಗ, ಆಂಧ್ರಪ್ರದೇಶದ ದಕ್ಷಿಣ ಕರಾವಳಿಯಲ್ಲಿ ಅತಿ ಹೆಚ್ಚು ಮಳೆ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಲಾಗಿದೆ.

ಹಂಸಲೇಖ ಬೆಂಬಲಕ್ಕೆ ದಸಂಸ

ಶಿವಮೊಗ್ಗ: ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ ದಲಿತ ಸಂಘರ್ಷ ಸಮಿತಿ ಬೆಂಬಲ ನೀಡಿದೆ.

'ಪೇಜಾವರ ಶ್ರೀಗಳು ಸೇರಿ ಮುಂದುವರಿದ ಜಾತಿಗಳ ಮಠಾಧೀಶರು, ನಾಯಕರು ದಲಿತರ ಮನೆಗಳಲ್ಲಿ ವಾಸ್ತವ್ಯ ಹೂಡುವುದಕ್ಕಿಂತ ದಲಿತರನ್ನೇ ತಮ್ಮ ಮನೆಗೆ ಕರೆಯಿಸಿ ಊಟ ಹಾಕಿಸಲಿ ಎಂಬ ಹಂಸಲೇಖ ಅವರ ಹೇಳಿಕೆ ಅತ್ಯಂತ ಸಮಂಜಸ. ಭಗವದ್ಗೀತೆಗಿಂತ ಸಂವಿಧಾನಕ್ಕೆ ಹೆಚ್ಚು ಗೌರವ ಕೊಡಬೇಕು ಎನ್ನುವ ಅವರ ಮಾತು ಅಕ್ಷರಶಃ ನಿಜ. ಭಗವದ್ಗೀತೆ ಸಂವಿಧಾನ ಆಗಲಾರದು. ಯಾವುದೇ ಧರ್ಮ ಸಂವಿಧಾನಕ್ಕಿಂತ ದೊಡ್ಡದಲ್ಲ ಎನ್ನುವ ಅವರ ಮಾತುಗಳಿಗೆ ಸಂಪೂರ್ಣ ಬೆಂಬಲ ನೀಡುವೆವು' ಎಂದು ದಸಂಸ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಕೆಲವರು ಅವರ ಮಾತು ಅರಗಿಸಿಕೊಳ್ಳಲಾರದೆ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆ ಮಾಡಿದ್ದಾರೆ. ಕ್ಷಮೆ ಕೋರುವಂತೆ ಒತ್ತಡ ಹಾಕಿದ್ದಾರೆ. ದೇಶದಲ್ಲಿ ಶೇ 15ರಷ್ಟು ಇರುವ ಮನುವಾದಿಗಳಿಂದ ಇಂತಹ ಒತ್ತಡ ತಂತ್ರಗಳು ನಡೆಯುತ್ತಲೇ ಇವೆ. ಶೇ 85ರಷ್ಟು ಇರುವ ದಲಿತರು, ಹಿಂದುಳಿದವರು ಮನುವಾದಿಗಳಿಗೆ ಹೆದರಿ ಜೀವಿಸಬೇಕಾಗಿದೆ. ದಲಿತಪರ ದನಿಗಳು ಅಡಗಿಹೋಗುತ್ತಿವೆ' ಎಂದರು.

'ಮೈಸೂರು ಸಂಸದ ಪ್ರತಾಪ ಸಿಂಹ ಒಬ್ಬ ಅವಿವೇಕಿ. ಪ್ರಿಯಾಂಕ್ ಖರ್ಗೆ ಅವರ ಕುರಿತು ಮಾತನಾಡಿರುವ ರೀತಿ ಅಸಹ್ಯಕರ. ಪ್ರಿಯಾಂಕ್ ಎಂದು ಹೆಸರಿಟ್ಟುಕೊಂಡಿರುವ ಖರ್ಗೆ ಗಂಡೋ, ಹೆಣ್ಣೋ ಎಂದು ಪ್ರಶ್ನಿಸುವ ಮೂಲಕ ತಮ್ಮ ಪ್ರತಾಪ ತೋರಿಸಿದ್ದಾರೆ. ಪ್ರತಾಪ ಸಿಂಹ ಎಂದರೆ ಆತ ಮೃಗದ ಜಾತಿಗೆ ಸೇರಿದವರೇ' ಎಂದು ಪ್ರಶ್ನಿಸಿದರು.

ದಸಂಸ ನಾಲ್ಕು ಬಣಗಳು ವಿಲೀನ

ಪ್ರೊ.ಬಿ. ಕೃಷ್ಣಪ್ಪ ಹೆಸರಿನಲ್ಲಿದ್ದ ದಲಿತ ಸಂಘರ್ಷ ಸಮಿತಿಯ ನಾಲ್ಕು ಬಣಗಳು ವಿಲೀನವಾಗಿವೆ ಎಂದು ಸಂಘಟನೆಯ ಮುಖಂಡರಾದ ಎಂ. ಗುರುಮೂರ್ತಿ, ರಾಯಚೂರಿನ ಹನುಮಂತಪ್ಪ, ಚಿಕ್ಕಬಳ್ಳಾಪುರದ ಗಂಗಾಧರ್, ಹಾಸನದ ಸೋಮಶೇಖರ್, ಮಂಡ್ಯದ ಅಂದಾನಿ ಅವರು ಮಂಗಳವಾರ ಶಿವಮೊಗ್ಗದಲ್ಲಿ ಘೋಷಿಸಿದರು.

'ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದಾಗಿ ಸಂಘಟನೆಗಳು ಬೇರೆ ಬೇರೆ ಬಣಗಳಾಗಿ ಗುರುತಿಸಿಕೊಂಡಿದ್ದವು. ಮೊದಲ ಹಂತದಲ್ಲಿ ನಾಲ್ಕು ಸಂಘಟನೆಗಳನ್ನು ವಿಲೀನಗೊಳಿಸಲಾಗಿದೆ. ಫೆಬ್ರವರಿ 11 ಮತ್ತು 12ರಂದು ದಾವಣಗೆರೆಯಲ್ಲಿ ರಾಜ್ಯಮಟ್ಟದ ಏಕತಾ ಸಮಾವೇಶ ಹಮ್ಮಿಕೊಳ್ಳಲಾಗುವುದು' ಎಂದು ಮಾಹಿತಿ ನೀಡಿದರು.

ಕನ್ನಡ ವಿಶ್ವವಿದ್ಯಾಲಯದಲ್ಲಿ ಲಂಚ, ಕಮಿಷನ್ ಆರೋಪ

ನ್ಯಾಯಾಂಗ ತನಿಖೆಗೆ ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಲಂಚ, ಕಮಿಷನ್ ಆರೋಪದ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕೆಂದು ವಿಶ್ವವಿದ್ಯಾಲಯದ ಅಧ್ಯಾಪಕರ ಸಂಘ ಹಾಗೂ ಬೋಧಕೇತರ ನೌಕರರ ಸಂಘ ಒಕ್ಕೊರಲ ಹಕ್ಕೊತ್ತಾಯ ಮಾಡಿವೆ.

'ಬಡ್ತಿಗೆ ಲಂಚ, ಪಿಂಚಣಿಗೆ ಕಮಿಷನ್', 'ಶಿಷ್ಯವೇತನಕ್ಕೂ ತೆರಬೇಕು ಹಣ' ಶೀರ್ಷಿಕೆ ಅಡಿ 'ಪ್ರಜಾವಾಣಿ' ಈಚೆಗೆ ಪ್ರಕಟಿಸಿದ್ದ ವರದಿ ಹಿನ್ನೆಲೆಯಲ್ಲಿ ಮಂಗಳವಾರ ಬೋಧಕ, ಬೋಧಕೇತರ ಸಿಬ್ಬಂದಿ ವಿಶ್ವವಿದ್ಯಾಲಯದಲ್ಲಿ ಸಭೆ ಸೇರಿ, ಚರ್ಚಿಸಿ ಆಗ್ರಹಿಸಿದರು. ಸಭೆ ಬಳಿಕ ಕುಲಸಚಿವ ಪ್ರೊ. ಎ. ಸುಬ್ಬಣ್ಣ ರೈ ಅವರಿಗೆ ಮನವಿ ಪತ್ರ ಸಲ್ಲಿಸಿದರು.

'ಲಂಚ ಆರೋಪದ ಕುರಿತು ಕುಲಪತಿ ಪ್ರೊ. ಸ.ಚಿ. ರಮೇಶ ಅವರು ಸಿಂಡಿಕೇಟ್‌ಗೆ ತನಿಖೆಗೆ ಒಪ್ಪಿಸುವುದಾಗಿ ತಿಳಿಸಿದ್ದಾರೆ. ಕುಲಪತಿಯವರ ಈ ಮಾತನ್ನೂ ಒಪ್ಪುವುದಿಲ್ಲ. ಅದನ್ನು ಖಂಡಿಸಲಾಗುವುದು. ಸಿಂಡಿಕೇಟ್ ಸದಸ್ಯರು ಕೂಡ ವಿಶ್ವವಿದ್ಯಾಲಯದ ಭಾಗ. ಕುಲಪತಿ ಅವರು ಪಾರದರ್ಶಕವಾಗಿದ್ದರೆ ನ್ಯಾಯಾಂಗ ತನಿಖೆ ನಡೆಸಬೇಕು. ಇದುವರೆಗಿನ ಹಣಕಾಸಿನ ಲೆಕ್ಕಪತ್ರದ ಕುರಿತು ಶ್ವೇತಪತ್ರ ಹೊರಡಿಸಬೇಕು. ನ. 17ರೊಳಗೆ ಸೂಕ್ತ ಕ್ರಮ ಜರುಗಿಸದಿದ್ದಲ್ಲಿ ನ. 18ರಿಂದ ಧರಣಿ ಸತ್ಯಾಗ್ರಹ ನಡೆಸಲಾಗುವುದು' ಎಂದು ಸಭೆಯಲ್ಲಿ ಎಚ್ಚರಿಕೆ ನೀಡಿದರು.



ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರ ಸಂಘ ಹಾಗೂ ಬೋಧಕೇತರ ನೌಕರರ ಸಂಘದವರು ಮಂಗಳವಾರ ಕುಲಸಚಿವ ಪ್ರೊ. ಎ. ಸುಬ್ಬಣ್ಣ ರೈ ಅವರಿಗೆ ಮನವಿ ಪತ್ರ ಸಲ್ಲಿಸಿದರು

'ಕಾಯಂ ಹಾಗೂ ಗುತ್ತಿಗೆ ನೌಕರರ ವೇತನ, ಪಿಂಚಣಿ ಸೌಲಭ್ಯ ಕಾಲಕಾಲಕ್ಕೆ ನೀಡಬೇಕು. ಅರ್ಹರಿಗೆ ಮುಂಬಡ್ತಿ ನೀಡಬೇಕು. ನೌಕರರ ಸೇವಾ ಪೂರ್ವ ಅವಧಿ ಘೋಷಿಸಬೇಕು. ಸಹ ಪ್ರಾಧ್ಯಾಪಕ ಎಂ. ಮಲ್ಲಿಕಾರ್ಜುನಗೌಡ ಅವರ ವರ್ಗಾವಣೆ ಆದೇಶ ರದ್ದುಗೊಳಿಸಬೇಕು. ಮೃತ ನೌಕರರ ಕುಟುಂಬದ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ನೌಕರಿ ಕೊಡಬೇಕು. 17 ಬೋಧಕ ಹುದ್ದೆಗಳ ನೇಮಕ ಪ್ರಕ್ರಿಯೆ ಕೈಬಿಡಬೇಕು' ಎಂದು ಒತ್ತಾಯಿಸಿದರು.

'ನನ್ನ ಸಂಬಳ ಬಿಡುಗಡೆ ಮಾಡಲು ಕುಲಪತಿಗಳು ಕಮಿಷನ್ ಪಡೆದುಕೊಂಡಿದ್ದಾರೆ' ಎಂದು ವಿಶ್ವವಿದ್ಯಾಲಯದ ವೈದ್ಯ ಡಾ. ಸಂಪತ್‌ಕುಮಾರ್ ತೆಗ್ಗಿ ಗಂಭೀರ ಆರೋಪ ಮಾಡಿದರು.

ಗ್ರಂಥಾಲಯದ ಸಹಾಯಕ ಶಂಕರಗೌಡ ಮಾತನಾಡಿ, 'ಸೇವಾಪೂರ್ವ ಅವಧಿ ಘೋಷಿಸಲು ಎಂಟು ತಿಂಗಳ ವೇತನವನ್ನು ಕೊಡಲು ಬೇಡಿಕೆ ಇಟ್ಟಿದ್ದಾರೆ' ಎಂದರು.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಕ್ಷೇಮಪಾಲನಾ ಘಟಕದ ಸೂಪರಿಟೆಂಡೆಂಟ್ ಕಾಶಿ, 'ವಿದ್ಯಾರ್ಥಿಗಳ ಶಿಷ್ಯ ವೇತನವನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ' ಎಂದು ಆರೋಪಿಸಿದರು.

‘ಮುತ್ತುರಾಜನ ಮುತ್ತು ಎತ್ತ ಹೋದೆಯೋ....’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುತ್ತುರಾಜ ಹೆತ್ತ ಮುತ್ತು ಎತ್ತ ಹೋದೆಯೋ...ಅತ್ತು ಕರೆದರೂ ಮತ್ತೆ ಬಾರದಾದೆಯೋ...

– ಹಾಡು ಅನುರಣಿಸುತ್ತಿದ್ದಂತೆಯೇ ಕತ್ತಲಾವರಿಸಿದ ಅರಮನೆ ಮೈದಾನದ ‘ಪುನೀತ ನಮನ’ದ ಸಭಾಂಗಣದಲ್ಲಿ ಬೆಳಗಿದ ಮೋಂಬತ್ತಿಗಳೂ ಮಂದ ಬೆಳಕು ಸೂಸುತ್ತಾ ಮೌನಗೌರವ ಸಲ್ಲಿಸಿದವು. ಅಭಿಮಾನಿಗಳು, ಸಿನಿಮಾ ಕ್ಷೇತ್ರದ ನೂರಾರು ಜನರ ಮೊಬೈಲ್ ಟಾರ್ಚ್‌ಗಳು ಬೆಳಗಿ ಅಗಲಿದ ಅಪ್ಪು ಎಂಬ ಬೆಳಕನ್ನು ಹುಡುಕಾಡಿದವು.

ಇದು ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಆಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡ ‘ಪುನೀತ ನಮನ’ದಲ್ಲಿ ನಡೆದ ಗೀತನಮನ–ದೀಪನಮನದ ಸಂದರ್ಭದ ಭಾವುಕ ಕ್ಷಣಗಳ ನೋಟ. ಅತ್ತ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರದ ಮೇಲೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹಿತ ವಿವಿಧ ಗಣ್ಯರು ಪುಷ್ಪಾರ್ಚನೆ ಮಾಡಿದರು. ಪುನೀತ್ ಅವರ ಧ್ವನಿ ಸಂಯೋಜಿಸಿದ ವಿಡಿಯೋವೊಂದು ವೇದಿಕೆಯ ಪರದೆಯಲ್ಲಿ ಬಿತ್ತರವಾಯಿತು. ಪರದೆಯಲ್ಲಿ ಮೂಡಿಬಂದ ಪುನೀತ್ ಮತ್ತೆ ಜೀವಂತವಾಗಿ ಕಾಣಿಸಬಾರದೇ ಎಂದು ಸಭಾಂಗಣದಲ್ಲಿದ್ದ ಪ್ರತಿ ಮನಸ್ಸುಗಳೂ ಆಶಿಸಿದವು.

ಇದಕ್ಕೂ ಮುನ್ನ ಪುನೀತ್ ಅವರ ಬಗೆಗಿನ ವಿಡಿಯೋ ಸಾಕ್ಷ್ಯಚಿತ್ರ ಪ್ರದರ್ಶನಗೊಂಡಿತು. ಹುಟ್ಟಿನಿಂದ ಈವರೆಗಿನ ಜೀವನ ಚಿತ್ರಣ, ಸಿನಿಮಾ ಬದುಕು, ಸಮಾಜ ಸೇವೆ ಹಾಗೂ ಅಂತಿಮ ಯಾತ್ರೆಯವರೆಗಿನ ಸಮಗ್ರ ಕಥನ ನಟ ಸುದೀಪ್ ಅವರ ಹಿನ್ನೆಲೆ ಧ್ವನಿಯಲ್ಲಿ ಮೂಡಿಬಂದಿತು. ದೃಶ್ಯ–ಧ್ವನಿ ಪರಿಣಾಮ ಇಡೀ ಸಭಾಂಗಣದಲ್ಲಿ ಗಂಭೀರ ಮೌನ ಸೃಷ್ಟಿಸಿತು.

ಮೈಸೂರಿನ ಶಕ್ತಿಧಾಮದ ಮಕ್ಕಳು ಗೀತನಮನ ಸಲ್ಲಿಸಿದರು. ಗೀತೆಯಲ್ಲಿ ರಾಜ್‌ಕುಮಾರ್ ಕುಟುಂಬದ ಸೇವೆ, ಸದ್ಯ ಅದನ್ನು ನೋಡಿಕೊಳ್ಳುತ್ತಿರುವ ಶಿವರಾಜ್‌ಕುಮಾರ್ ಮತ್ತು ಗೀತಾ ಶಿವರಾಜ್‌ಕುಮಾರ್ ಶಕ್ತಿಧಾಮದೊಂದಿಗೆ ಪುನೀತ್ ನಂಟು ಹೊರಹೊಮ್ಮಿತು.

ಪುನೀತ್ ದೃಶ್ಯಗಳನ್ನು ನೋಡುತ್ತಾ ಅವರ ಅಣ್ಣ ಶಿವರಾಜ್ ಕುಮಾರ್ ಅವರ ಕಣ್ಣಾಲಿಗಳು ತುಂಬಿಬಂದವು. ಪುನೀತ್ ಪತ್ನಿ ಅಶ್ವಿನಿ ಮತ್ತು ಮಕ್ಕಳು ದುಃಖದ ಮೌನಕ್ಕೆ ಜಾರಿದ್ದರು. ಒಂದು ಕಾರ್ಯಕ್ರಮ ಮುಗಿಯುತ್ತಿದ್ದಂತೆಯೇ ಅಭಿಮಾನಿಗಳು ‘ಪವರ್ ಸ್ಟಾರ್‌ಗೆ ಜೈ’, ‘ಪುನೀತ್‌ಗೆ ಜಯವಾಗಲಿ’ ಎಂದು ಜಯಘೋಷ ಕೂಗುತ್ತಿದ್ದರು. ಎಲ್ಲ ಗಣ್ಯರ ಬಾಯಲ್ಲಿ ಪುನೀತ್ ಅವರ ನಡವಳಿಕೆ ಮತ್ತು ವಿವಾದಾತೀತ ವ್ಯಕ್ತಿತ್ವ ಹಾಗೂ ಸೇವಾಭಾವವೇ ಬಣ್ಣನೆಗೆ ಒಳಗಾಯಿತು.

ನಮಗೆ ಪ್ರೀತಿ ಕೊಟ್ಟು
ನಮ್ಮನೆಲ್ಲ ಬಿಟ್ಟು
ಕಾಣದಂತೆ ಮಾಯವಾದರೋ
ನಮ್ಮ ಅಪ್ಪು ಕೈಲಾಸ
ಸೇರಿಕೊಂಡರು...

ಕವಿರಾಜ್ ಅವರ ಸಾಹಿತ್ಯದ ಈ ಹಾಡನ್ನು ಗುರುಕಿರಣ್, ವಿಜಯ ಪ್ರಕಾಶ್ ಮತ್ತು ಖ್ಯಾತ ಗಾಯಕರು ಸೇರಿ ಹಾಡಿದರು. ಕಾರ್ಯಕ್ರಮದ ಮುನ್ನ ಸ್ಯಾಕ್ಸೋಫೋನ್ ಕಛೇರಿ ನಡೆಯಿತು.

ಮುಖ್ಯಮಂತ್ರಿ ಭಾಷಣದ ಬಳಿಕ ಪುನೀತ್ ಪತ್ನಿ ಅಶ್ವಿನಿ ಸಭಾಂಗಣದಿಂದ ಮನೆಗೆ ತೆರಳಿದರು.



ಪುನೀತ್ ನೆನಪಿನಲ್ಲಿ ಕಣ್ಣೀರಿಟ್ಟ ಶಿವರಾಜ್‌ಕುಮಾರ್ ಮತ್ತು ಗೀತಾ ಶಿವರಾಜ್‌ಕುಮಾರ್



ದುಃಖತಪ್ತರಾಗಿದ್ದ ಪುನೀತ್ ಮಗಳು ವಂದನಾ, ಪತ್ನಿ ಅಶ್ವಿನಿ



ಕಾರ್ಯಕ್ರಮದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕ ಬಿ.ಎಸ್. ಯಡಿಯೂರಪ್ಪ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಮನ ಸಲ್ಲಿಸಿದರು

‘ಅರಮನೆ ಪೂರ್ವಜರ ಬಗ್ಗೆ ತಿಳಿಸಿದ್ದ ರಾಜ್’


ಬೆಂಗಳೂರು: ನನ್ನ ತಾತ ಹಾಗೂ ಪೂರ್ವಜರ ಬಗ್ಗೆ ಕಥನ ರೂಪದಲ್ಲಿ ತಿಳಿಸಿದ್ದೇ ಡಾ.ರಾಜ್‌ಕುಮಾರ್...

ಹೀಗೆ ಮೈಸೂರು ಅರಮನೆ ಮತ್ತು ರಾಜ್ ಕುಟುಂಬದ ನಂಟಿನ ಬಗ್ಗೆ ತೆರೆದಿಟ್ಟವರು ಮೈಸೂರು ಅರಸರ ವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್.

‘ಪುನೀತ ನಮನ’ದಲ್ಲಿ ಅರಮನೆಯೊಂದಿಗೆ ರಾಜ್ ಕುಟುಂಬದ ಸ್ನೇಹ ತೆರೆದಿಟ್ಟ ಅವರು, ‘ನನ್ನ ತಾತ ಕಂಠೀರವ ನರಸರಾಜ ಒಡೆಯರ್ ಬಗ್ಗೆ ಅಂಬಾವಿಲಾಸ ಅರಮನೆಯಲ್ಲಿ ಶೂಟಿಂಗ್ ನಡೆಸಿ ಒಂದು ಸಿನಿಮಾ ಮಾಡಿದ್ದರು. ಇದರಲ್ಲಿ ತಾತ ಕೂಡಾ ಕಾಣಿಸಿಕೊಂಡಿದ್ದಾರೆ. ಆ ಚಿತ್ರದ ಮೂಲಕ ನನ್ನ ಪೂರ್ವಜರ ಬಗ್ಗೆ ತಿಳಿದುಕೊಳ್ಳಲು ಅನುಕೂಲವಾಯಿತು. ಈಗ ಪುನೀತ್ ಅವರ ಅಗಲಿಕೆ ತುಂಬಾ ನೋವು ತಂದಿದೆ’ ಎಂದರು.

ಸ್ವಯಂ ಸೇವಕನಾಗಲು ಅವಕಾಶ ಕೊಡಿ: ಪುನೀತ್ ಅವರ ಅಗಲಿಕೆ ಭರಿಸಲಾಗದು. ರಾಜ್ ಕುಟುಂಬದೊಂದಿಗೆ ಸಹೋದರನಂತೆ ನಾನಿರುತ್ತೇನೆ. ಪುನೀತ್ ಅವರ ಒಳ್ಳೆಯ ಕೆಲಸಗಳನ್ನು ಮುಂದುವರಿಸಲು ನನಗೊಂದು ಅವಕಾಶ ಕೊಡಿ. ಒಬ್ಬ ಸ್ವಯಂ ಸೇವಕನಂತೆ ನಾನು ತೊಡಗಿಸಿಕೊಳ್ಳುತ್ತೇನೆ ಎಂದು ತಮಿಳು ನಟ ವಿಶಾಲ್ ಹೇಳಿದರು.

ಮನೆ ಕಟ್ಟಲೆಂದು ಕೂಡಿಟ್ಟ ಹಣವನ್ನು ಪುನೀತ್ ಅವರು ಮಾಡಿದ ಸಮಾಜ ಸೇವೆ ಮುಂದುವರಿಸಲು ವಿನಿಯೋಗಿಸುತ್ತೇನೆ. ಅದಕ್ಕೊಂದು ಅವಕಾಶ ಕೊಡಬೇಕು ಎಂದು ಕೋರಿದರು.



ಈ ನಾಡು ನನಗೆ ಯಾವಾಗಲೂ ಹತ್ತಿರ. ಪುನೀತ್ ರಾಜ್‌ಕುಮಾರ್ ಅವರು ಮಾಡಿರುವ ಒಳ್ಳೆಯ ಕೆಲಸಗಳನ್ನು ನಾವು ಮಾದರಿಯಾಗಿ ಇಟ್ಟುಕೊಳ್ಳೋಣ

ಶರತ್‌ಕುಮಾರ್, ತಮಿಳು ನಟ



ಪುನೀತ್ ದೊಡ್ಡ ಹೆಜ್ಜೆ ಬಿಟ್ಟು ಹೋಗಿದ್ದಾರೆ. ಅವರಿಗೆ ಪದ್ಮಶ್ರೀ ಕೊಡಿಸಲು ಮುಖ್ಯಮಂತ್ರಿಯವರು ಎಲ್ಲ ಪ್ರಯತ್ನ ಮಾಡಬೇಕು.

ಸಿದ್ದರಾಮಯ್ಯ
ವಿಧಾನಸಭೆಯ ವಿರೋಧ ಪಕ್ಷದ ನಾಯಕ



ಚಿತ್ರರಂಗಕ್ಕೆ ಬರುವವರಿಗಾಗಿ ಪುನೀತ್ ಹೆಸರಿನಲ್ಲಿ ಒಂದು ತರಬೇತಿ ಸಂಸ್ಥೆ ಅಥವಾ ಸ್ಟುಡಿಯೋ ಸ್ಥಾಪಿಸಬೇಕು. ಮುಖ್ಯಮಂತ್ರಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು.

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ



47 (ಪುನೀತ್ ವಯಸ್ಸು) ಅಂತ ಬರೆದಿದ್ದನ್ನು ಬ್ರಹ್ಮನಿಂದಲೂ ತಿದ್ದಲು ಆಗಲಿಲ್ಲವೇನೋ. ಯಾವುದನ್ನೂ ಬದಲಿಸಲಾಗದು ಎನ್ನುವ ವಿಧಿ ಬಗ್ಗೆ ಏನೆನ್ನಬೇಕೋ ಗೊತ್ತಾಗುತ್ತಿಲ್ಲ.

ದರ್ಶನ್, ನಟ

ಪುನೀತ್ ‘ಕರ್ನಾಟಕ ರತ್ನ’

ಒಂದನೇ ಪುಟದಿಂದ

‘ಅವರ ಸಮಾಧಿ ಸ್ಥಳವನ್ನು ಡಾ.ರಾಜ್ ಕುಮಾರ್ ಹಾಗೂ ಪಾರ್ವತಮ್ಮ ಅವರ ಸಮಾಧಿಯ ಮಾದರಿಯಲ್ಲೇ ಅಭಿವೃದ್ಧಿ ಮಾಡಲಾಗುವುದು’ ಎಂದೂ ಹೇಳಿದರು.

ಹೃದಯದ ಭಾವನೆಯ ಮುತ್ತು: ‘ಪುನೀತ್ ಅವರ ಪಾರ್ಥಿವ ಶರೀರದ ಹಣೆಗೆ ಮುತ್ತಿಟ್ಟದ್ದು ನನ್ನ ಹೃದಯದ ಭಾವನೆಯಿಂದ. ಅದಕ್ಕೆ ಏನೇನೋ ಮಾತುಗಳು ಕೇಳಿ ಬಂದಿವೆ. ಅದಕ್ಕೆಲ್ಲ ತಲೆಕೆಡಿಸಿಕೊಳ್ಳುವುದಿಲ್ಲ. ಆರು ಕೋಟಿ ಕನ್ನಡಿಗರ ಪರವಾಗಿ ನಾನು ಪಾರ್ಥಿವ ಶರೀರಕ್ಕೆ ಮುತ್ತು ಕೊಟ್ಟಿದ್ದೇನೆ’ ಎಂದು ಭಾವುಕರಾಗಿ ನುಡಿದರು.

‘ಪುನೀತ್ ಮರಣದ ನಂತರ ಜನರು ವ್ಯಕ್ತಪಡಿಸಿದ ಅಭಿಮಾನದ ಮಾತುಗಳಿಂದ ಅವರ ವ್ಯಕ್ತಿತ್ವ ನಾಡಿಗೆ ಗೊತ್ತಾಗಿದೆ. ಅವರ ಮರಣದ ಬಳಿಕ ರಾಜ್ ಕುಟುಂಬದವರು ನಡೆದುಕೊಂಡ ಪರಿ ಅನುಕರಣೀಯ. ಅಭಿಮಾನಿಗಳೂ ಕೂಡ ಅಪ್ಪು ಅವರ ವಿನಯಪೂರ್ವಕ ನಡವಳಿಕೆಯನ್ನೇ ತೋರಿದರು’ ಎಂದು ಅವರು ಸ್ಮರಿಸಿದರು.

ಈ ಸಂದರ್ಭದಲ್ಲಿ ಕನ್ನಡ ಚಿತ್ರರಂಗವೇ ನೆರೆದಿತ್ತು. ತಮಿಳಿನ ನಟ ವಿಶಾಲ್, ತೆಲುಗು ನಟ ಮಿಂಚು ಮನೋಜ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯದ ಹೆಚ್ಚಿನ ಸಚಿವರು ಈ ಕ್ಷಣಕ್ಕೆ ಸಾಕ್ಷಿಯಾದರು.

ಕರ್ನಾಟಕ ರತ್ನ ಪುರಸ್ಕೃತರು

ಹೆಸರು	ವರ್ಷ	ಕ್ಷೇತ್ರ
ಕುವೆಂಪು	1992	ಸಾಹಿತ್ಯ
ರಾಜ್‌ಕುಮಾರ್	1992	ಸಿನಿಮಾ
ಎಸ್. ನಿಜಲಿಂಗಪ್ಪ	1999	ರಾಜಕೀಯ
ಸಿ.ಎನ್.ಆರ್. ರಾವ್	2000	ವಿಜ್ಞಾನ
ದೇವಿಪ್ರಸಾದ್ ಶೆಟ್ಟಿ	2001	ವೈದ್ಯಕೀಯ
ಭೀಮಸೇನ ಜೋಷಿ	2005	ಸಂಗೀತ
ಶಿವಕುಮಾರ ಸ್ವಾಮೀಜಿ	2007	ಸಾಮಾಜಿಕ ಸೇವೆ
ದೇ.ಜವರೇಗೌಡ	2008	ಶಿಕ್ಷಣ ಮತ್ತು ಸಾಹಿತ್ಯ
ಡಿ.ವೀರೇಂದ್ರ ಹೆಗ್ಗಡೆ	2009	ಸಾಮಾಜಿಕ ಸೇವೆ

ಪುನೀತ್‌ಗೆ ಮರಣೋತ್ತರ ‘ಸಿದ್ಧಶ್ರೀ’ ಪ್ರಶಸ್ತಿ

ಕಲಬುರಗಿ: ಆಳಂದ ತಾಲ್ಲೂಕಿನ ಜಿಡಗಾ ಮಠದಿಂದ ಕೊಡಮಾಡುವ ಪ್ರಸಕ್ತ ಸಾಲಿನ ‘ಸಿದ್ಧಶ್ರೀ’ ಪ್ರಶಸ್ತಿಯನ್ನು ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ನೀಡಲು ನಿರ್ಧರಿಸಲಾಗಿದೆ.

ಡಿಸೆಂಬರ್ 2ರಂದು ಮಠದ ಆವರಣದಲ್ಲಿ ನಡೆಯಲಿರುವ ಜಿಡಗಾ ಮಠಾಧಿಪತಿ ಡಾ.ಮುರುಘರಾಜೇಂದ್ರ ಸ್ವಾಮೀಜಿ ಅವರ 37ನೇ ಗುರುವಂದನಾ ಮಹೋತ್ಸವದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹ 1 ಲಕ್ಷ ನಗದು ಹಾಗೂ 20 ಗ್ರಾಂ ತೂಕದ ಚಿನ್ನದ ಪದಕ ಒಳಗೊಂಡಿದೆ.

‘ಪುನೀತ್ ಅವರಿಗೆ ಈ ಪ್ರಶಸ್ತಿ ನೀಡಲು ಮೂರು ತಿಂಗಳ ಹಿಂದೆಯೇ ನಿರ್ಧರಿಸಲಾಗಿತ್ತು. ಅವರ ಅಕಾಲಿಕ ಅಗಲಿಕೆಯಿಂದ ಇಡೀ ದೇಶಕ್ಕೆ ಬೇಸರವಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಅಭಿಮಾನಿಗಳ ಪರವಾಗಿ ರಾಜ್‌ಕುಮಾರ್ ಕುಟುಂಬಕ್ಕೆ ಸಾಂತ್ವನ ಹೇಳುವ ಜತೆಗೆ, ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನೂ ನೀಡಲಾಗುತ್ತಿದೆ’ ಎಂದು ಉತ್ಸವದ ಸ್ವಾಗತ ಸಮಿತಿ ಅಧ್ಯಕ್ಷರೂ ಆದ ಚಿನಮಗೇರಿ ವೀರಮಹಾಂತ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಧನ್ಯವಾದ ಸಲ್ಲಿಸಿದ ಅಶ್ವಿನಿ

ಬೆಂಗಳೂರು: ‘ಪುನೀತ ನಮನ’ದಲ್ಲಿ ಮುಖ್ಯಮಂತ್ರಿ ಭಾಷಣದ ಬಳಿಕ ಮನೆಗೆ ತೆರಳಿದ ಪುನೀತ್ ಅವರ ಪತ್ನಿ ಅಶ್ವಿನಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ದೀರ್ಘ ಪತ್ರವೊಂದನ್ನು ಬರೆದು ಅಭಿಮಾನಿಗಳಿಗೆ ಧನ್ಯವಾದ ಅರ್ಪಿಸಿದ್ದಾರೆ.

ಪತ್ರದ ಸಾರಾಂಶ ಹೀಗಿದೆ. ‘ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ಅಗಲಿಕೆ ನಮಗಷ್ಟೇ ಅಲ್ಲದೇ ಇಡೀ ರಾಜ್ಯಕ್ಕೆ ಆಘಾತಕಾರಿ ವಿಷಯ. ನಿಷ್ಕಲ್ಮಶ ಪ್ರೀತಿಯಿಂದ, ಅಕ್ಕರೆಯ ಅಭಿಮಾನದಿಂದ ಅವರನ್ನು ಪವರ್ ಸ್ಟಾರ್ ಆಗಿ ರೂಪಿಸಿದ್ದ ನಿಮ್ಮೆಲ್ಲರಿಗೆ ಅವರ ವಿದಾಯ ತಂದಿತ್ತ ದುಃಖ ಎಷ್ಟಿರಬಹುದೆಂದು ಊಹಿಸಲೂ ಸಾಧ್ಯವಿಲ್ಲ. ಆದರೂ ಇಂತಹ ಸಂದರ್ಭದಲ್ಲಿ ನೀವು ಎಲ್ಲಿಯೂ ಸಂಯಮ ಕಳೆದುಕೊಳ್ಳದೇ ಅಹಿತಕರ ಘಟನೆಗಳು ನಡೆಯಲು ಬಿಡದೆ ಅವರಿಗೊಂದು ಅತ್ಯಂತ ಗೌರವಯುತ ಬೀಳ್ಕೊಡುಗೆ ನೀಡುವಲ್ಲಿ ಸಹಕರಿಸಿದ್ದಿರಿ’.

‘ಸಿನಿಮಾ ಪ್ರೇಮಿಗಳಷ್ಟೇ ಅಲ್ಲದೇ, ವಯೋಮಾನದ ಮಿತಿಯಿಲ್ಲದೇ, ದೇಶ-ವಿದೇಶಗಳಿಂದ ಕೋಟ್ಯಂತರ ಜನರು ಸಂತಾಪ ಸೂಚಿಸುವುದನ್ನು ಕಂಡಾಗ ಮನಸ್ಸು ಭಾರವಾಗುತ್ತದೆ. ನಿಮ್ಮ ಪ್ರೀತಿಯ ಅಪ್ಪು ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆಯುತ್ತಾ ಸಾವಿರಾರು ಸಂಖ್ಯೆಯಲ್ಲಿ ನೇತ್ರದಾನಕ್ಕೆ ನೋಂದಣಿ ಮಾಡಿಸುವುದನ್ನು ನೋಡಿದಾಗ ಕಣ್ತುಂಬಿ ಬರುತ್ತದೆ. ಅವರನ್ನು ಆದರ್ಶವಾಗಿಟ್ಟುಕೊಂಡು ನೀವು ಮಾಡುವ ಸತ್ಕಾರ್ಯಗಳಲ್ಲಿ, ಅವರ ನೆನಪುಗಳು ನಿಮ್ಮಲ್ಲಿ ಮೂಡಿಸುವ ಉತ್ಸಾಹದಲ್ಲಿ ಅವರೆಂದಿಗೂ ಜೀವಂತವಾಗಿರುತ್ತಾರೆ. ವಿಶ್ವದಾದ್ಯಂತ ನಮ್ಮ ಶೋಕವನ್ನು ಹಂಚಿಕೊಂಡು ಬೆಂಬಲಕ್ಕೆ ನಿಂತ ಎಲ್ಲಾ ಸಹೃದಯಿ ಅಭಿಮಾನಿ ದೇವರುಗಳು ಮತ್ತು ಸಾರ್ವಜನಿಕರಿಗೆ ನಮ್ಮ ಇಡೀ ಕುಟುಂಬದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು’ ಎಂದು ಬರೆದುಕೊಂಡಿದ್ದಾರೆ.

ದೊಡ್ಡ ಗುಣ ಅವನದ್ದು

ಎಲ್ಲರೂ ಅವನ (ಪುನೀತ್) ಬಗ್ಗೆ ಮಾತನಾಡುತ್ತಿದ್ದಾರೆ. ಅವನ ಬಗ್ಗೆ ಮಾತನಾಡಲು ಏನೂ ಉಳಿದಿಲ್ಲ. ಅವನ ಬಗ್ಗೆ ಮಾತನಾಡಿ ನನ್ನ ದೃಷ್ಟಿಯೇ ಅವನಿಗೆ ಬಿತ್ತೇನೋ ಎಂದು ಅನಿಸುತ್ತದೆ. ಎಲ್ಲರೂ ಯಾಕೆ ಅಷ್ಟೊಂದು ಹೊಗಳುತ್ತಿ ಎಂದು ಕೇಳಿದ್ದರು. ಅವನಿಗೆ ಹೊಗಳಿಸಿಕೊಳ್ಳುವ ಅರ್ಹತೆ ಇದೆ. ನನಗೆ ನಟನೆಯಲ್ಲಿ ಆಸಕ್ತಿ ಇರಲಿಲ್ಲ. ಆದರೆ, ಪುನೀತ್‌ನಿಂದ ಸ್ಫೂರ್ತಿ ಸಿಕ್ಕಿತು. ಶಿವಣ್ಣ ನನ್ನ ಸ್ಫೂರ್ತಿ ಅನ್ನುತ್ತಾನೆ ಪುನೀತ್. ಆದರೆ, ಅದು ಹಾಗಲ್ಲ. ಹೀಗೆ ಹೇಳುವುದು ಅವನ ದೊಡ್ಡ ಗುಣ.

ಶಿವರಾಜ್ ಕುಮಾರ್

ಭಾಗವಹಿಸಿದ್ದ ಪ್ರಮುಖರು

ಸಚಿವರಾದ ಆರ್. ಅಶೋಕ್, ಆರಗ ಜ್ಞಾನೇಂದ್ರ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ

ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಡಿ.ಆರ್. ಜೈರಾಜ್, ನಿರ್ಮಾಪಕ ಸಾ.ರಾ. ಗೋವಿಂದು, ಚಿತ್ರನಟರಾದ ರವಿಚಂದ್ರನ್, ರಮೇಶ್ ಅರವಿಂದ್ ಮತ್ತಿತರರು ಇದ್ದರು.

ಕ್ಲೌಡ್ ಅಕೌಂಟ್ ವಿಶ್ಲೇಷಣೆ: ವಿಧಿ ವಿಜ್ಞಾನ ವರದಿಯಲ್ಲಿ ಬಹಿರಂಗ

ಶ್ರೀಕಿ ಲ್ಯಾಪ್‌ಟಾಪ್‌ನಲ್ಲಿ 76 ಲಕ್ಷ ಕೀ ಪತ್ತೆ!

• ಅಕ್ರಂ ಮೊಹಮ್ಮದ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಹ್ಯಾಕರ್ ಶ್ರೀಕೃಷ್ಣನ ಒಂದೇ ಲ್ಯಾಪ್‌ಟಾಪ್‌ನಲ್ಲಿ ಬಿಟ್‌ಕಾಯಿನ್‌ಗಳ ಅಕೌಂಟ್‌ಗೆ ಪ್ರವೇಶಿಸಲು ಬಳಸುವ 76 ಲಕ್ಷ ‘ಪ್ರೈವೇಟ್ ಕೀ’ ಮತ್ತು ಹಲವು ಡಿಜಿಟಲ್ ವ್ಯಾಲೆಟ್‌ಗಳು ಇದ್ದವು ಎಂಬುದನ್ನು ವಿಧಿವಿಜ್ಞಾನ ವಿಶ್ಲೇಷಣಾ ವರದಿ ಬಹಿರಂಗಪಡಿಸಿದೆ!

ಹ್ಯಾಕಿಂಗ್ ಪ್ರಕರಣದ ತನಿಖೆ ನಡೆಸುತ್ತಿದ್ದ ಪೊಲೀಸರ ಕೋರಿಕೆಯಂತೆ ಸೈಬರ್ ತಂತ್ರಜ್ಞರು ಶ್ರೀಕಿಯ ಲ್ಯಾಪ್‌ಟಾಪ್ ಅನ್ನು ಪರಿಶೀಲನೆಗೆ ಒಳಪಡಿಸಿದ್ದರು. ಆತನ ‘ಕ್ಲೌಡ್ ಅಕೌಂಟ್’ ಒಂದನ್ನು ವಿಶ್ಲೇಷಣೆ ನಡೆಸಿದಾಗ 27 ಇ– ವ್ಯಾಲೆಟ್‌ಗಳು, ಭಾರಿ ಸಂಖ್ಯೆಯ ಪ್ರೈವೇಟ್ ಕೀಗಳು ಹಾಗೂ ವಿಳಾಸಗಳು ಪತ್ತೆಯಾಗಿದ್ದವು. ಇದು, ಬಿಟ್‌ಕಾಯಿನ್ ವಹಿವಾಟಿಗೆ ಬಳಸುವ ‘ಬಿಟ್‌ಕಾಯಿನ್ ಕೋರ್’ ಎಂಬ ತಂತ್ರಾಂಶವನ್ನೇ ಆರೋಪಿ ಹ್ಯಾಕ್ ಮಾಡಿ, ತನ್ನ ಹಿಡಿತಕ್ಕೆ ತೆಗೆದುಕೊಂಡಿದ್ದಿರಬಹುದು ಎಂಬ ಅನುಮಾನಕ್ಕೆ ಕಾರಣವಾಗಿದೆ.

‘ಶ್ರೀಕಿಯ ಅಮೆಜಾನ್ ವೆಬ್ ಸರ್ವೀಸಸ್ ಖಾತೆ ಸೇರಿದಂತೆ ಕೆಲವು ‘ಕ್ಲೌಡ್ ಅಕೌಂಟ್’ಗಳ ವಿಶ್ಲೇಷಣೆ ಮಾಡಲಾಗಿದೆ. ಇಂತಹ ಐದು ಪ್ರಕರಣಗಳಲ್ಲಿ 27 ಇ– ವ್ಯಾಲೆಟ್‌ಗಳು ಹಾಗೂ ಬೃಹತ್ ಸಂಖ್ಯೆಯ ಪ್ರೈವೇಟ್ ಕೀ ಮತ್ತು ವಿಳಾಸಗಳು ಪತ್ತೆಯಾಗಿದ್ದವು. ಸಾರ್ವಜನಿಕ ಇ– ವ್ಯಾಲೆಟ್ ವಿಳಾಸಗಳು, ಪ್ರೈವೇಟ್ ಕೀಗಳು ಮತ್ತು ಬಿಟ್‌ಕಾಯಿನ್ ವಹಿವಾಟಿಗೆ ಬಳಸಿದ ಹಲವು ಐಡಿಗಳನ್ನು ಪತ್ತೆಮಾಡಲಾಗಿತ್ತು’ ಎಂದು ವಿಶ್ಲೇಷಣಾ ವರದಿ ಹೇಳಿದೆ.

ಸೈಬರ್ ಐಡಿ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆ ಆರೋಪಿಯ ಲ್ಯಾಪ್‌ಟಾಪ್ ಅನ್ನು ವಿಶ್ಲೇಷಣೆ ನಡೆಸಿತ್ತು. ಅದರಲ್ಲಿ ಬಿಟ್‌ಕಾಯಿನ್ ವಹಿವಾಟಿಗೆ ಬಳಸಿದ ಐಪಿ ವಿಳಾಸಗಳು, ವ್ಯಾಲೆಟ್ ವಿಳಾಸಗಳು ಇದ್ದವು. ಹೊಸದಾಗಿ ಸೃಷ್ಟಿಸಿದ ಖಾಸಗಿ ಕೀಗಳು ಮತ್ತು ಐಡಿಗಳೂ ಇದ್ದವು ಎಂಬ ಉಲ್ಲೇಖ ವರದಿಯಲ್ಲಿತ್ತು.

ಐದು ಐಪಿ ವಿಳಾಸಗಳಲ್ಲಿ 27 ಬಿಟ್‌ಕಾಯಿನ್ ವ್ಯಾಲೆಟ್‌ಗಳಿಗೆ ಸಂಬಂಧಿಸಿದ ಒಟ್ಟು 76,13,984 ಪ್ರೈವೇಟ್ ಕೀಗಳಿದ್ದವು. ಒಂದು ಐಪಿ ವಿಳಾಸದಲ್ಲಿ 53.37 ಲಕ್ಷ ಪ್ರೈವೇಟ್ ಕೀಗಳಿದ್ದವು. ಉಳಿದಂತೆ ಇತರ ಐಪಿ ವಿಳಾಸಗಳಲ್ಲಿ 10.17 ಲಕ್ಷ, 12.11 ಲಕ್ಷ, 27,218 ಮತ್ತು 19,996 ಕೀಗಳು ಕಂಡುಬಂದಿದ್ದವು. ಆತನ ವ್ಯಾಲೆಟ್‌ಗಳಿಗೆ ಸಂಬಂಧಿಸಿದ 1,15,018 ವಿಳಾಸಗಳಿದ್ದವು ಎಂಬ ಮಾಹಿತಿ ವರದಿಯಲ್ಲಿದೆ

ತಿರುಚಿರುವ ಸಂಶಯ: ತನಿಖಾಧಿಕಾರಿಗಳನ್ನು ದಿಕ್ಕು ತಪ್ಪಿಸಲು ಶ್ರೀಕಿ ಬಿಟ್‌ಕಾಯಿನ್ ಕೋರ್ ತಂತ್ರಾಂಶವನ್ನೇ ಹ್ಯಾಕ್ ಮಾಡಿ ತಿರುಚಿರುವ ಸಾಧ್ಯತೆ ಇದೆ ಎಂಬ ಸಂಶಯವನ್ನು ವಿಶ್ಲೇಷಣಾ ತಂಡ ವ್ಯಕ್ತಪಡಿಸಿದೆ.

‘ಪೊಲೀಸರು 31 ಬಿಟ್‌ಕಾಯಿನ್‌ಗಳನ್ನು ಆರೋಪಿಯ ಖಾತೆಯಿಂದ ವಶಕ್ಕೆ ಪಡೆಯಲು ಪ್ರಯತ್ನಿಸಿದ್ದರು. ಆದರೆ, ವರ್ಗಾವಣೆ ಪ್ರಕ್ರಿಯೆ ಯಶಸ್ವಿಯಾದಂತೆ ಕಂಡರೂ ಪೊಲೀಸ್ ವ್ಯಾಲೆಟ್‌ಗೆ ನಿಜವಾಗಿಯೂ ವರ್ಗಾವಣೆ ಆಗಿರಲಿಲ್ಲ. ವ್ಯಾಲೆಟ್‌ನ ಮೂಲ ಕೋಡ್ ಅನ್ನೇ ಬದಲಿಸಿ, ವ್ಯಾಲೆಟ್‌ನಿಂದ ಹೊರಹೋದ ಬಿಟ್‌ಕಾಯಿನ್‌ಗಳು ಮರಳಿ ಬರುವಂತೆ ಮಾಡಿಕೊಂಡಿರುವ ಸಾಧ್ಯತೆ ಇದೆ’ ಎಂದು ವರದಿಯಲ್ಲಿ ಹೇಳಲಾಗಿದೆ.

‘ಬಿಟ್‌ಕಾಯಿನ್ ಯಾರಿಗೆಷ್ಟು ಪಾಲು’



‘ಡಿಕೆಶಿ ವಿರುದ್ಧ ಸಿದ್ದರಾಮಯ್ಯ ಹುನ್ನಾರ’

ಬೆಂಗಳೂರು: ಬಿಟ್‌ಕಾಯಿನ್ ವಿಚಾರವಾಗಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹೇಳಿಕೆಗಳ ಹಿಂದೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರ ನಾಯಕತ್ವದ ಹೋರಾಟ ನಡೆದಿದ್ದು, ಶಿವಕುಮಾರ್ ಅವರನ್ನು ಮೂಲೆಗುಂಪು ಮಾಡುವ ಹುನ್ನಾರ ಇದೆ ಎಂದು ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಹೇಳಿದ್ದಾರೆ.

ಬಿಟ್‌ಕಾಯಿನ್ ಕುರಿತಂತೆ ಬಿಜೆಪಿ ಎಲ್ಲ ಅನುಮಾನಗಳಿಗೂ ಉತ್ತರ ನೀಡಿದೆ. ಇಲ್ಲಿಯವರೆಗೆ ಯಾವುದೇ ಕಂಪನಿಯು ಹ್ಯಾಕ್ ಬಗ್ಗೆ ಮಾತನಾಡಿಲ್ಲ. ತನಿಖೆಯಿಂದ ಇನ್ನಷ್ಟು ವಿವರಗಳು ಹೊರಬೀಳಲಿವೆ. ಸಿದ್ದರಾಮಯ್ಯ ಅವರು ಬಿಟ್‌ಕಾಯಿನ್ ದಂಧೆ ಬಗ್ಗೆ ಮಾತನಾಡಿದ್ದಾರೆ. ಅವರ ಪಕ್ಷ ರಾಷ್ಟ್ರೀಯ ಪ್ರಭಾರಿಗಳು 2016 ರಲ್ಲಿ ಈ ದಂಧೆ ನಡೆದಿದೆ ಎಂದಿದ್ದಾರೆ. ಆಗ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಏಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು.

‘ಪ್ರಿಯಾಂಕ್ ಖರ್ಗೆ ಅವರದು ₹50 ಸಾವಿರ ಕೋಟಿ ಹಣ ಇರುವ ಕುಟುಂಬವಂತೆ. 2016 ರಲ್ಲಿ ಅವರೂ ಸಚಿವರಾಗಿದ್ದರು. ಶ್ರೀಕಿಯನ್ನು ಭೇಟಿ ಮಾಡಿದ್ದ ಅವರು ಬಿಟ್‌ಕಾಯಿನ್‌ನಲ್ಲಿ ಹಣ ಹೂಡಲು ಬಯಸಿದ್ದರೆ? ಈ ಕುಟುಂಬದ ಒಟ್ಟು ಆಸ್ತಿ ಕುರಿತು ಪತ್ರಿಕೆಗಳಲ್ಲೂ ಬಂದಿದೆ’ ಎಂದು ಹೇಳಿದರು.

ಶ್ರೀಕಿ, ಮೊಹಮ್ಮದ್ ನಲಪಾಡ್, ದರ್ಶನ್ ಲಮಾಣಿ ಕುಟುಂಬದ ಜೊತೆಗಿನ ಸಂಬಂಧದ ಬಗ್ಗೆ ಕಾಂಗ್ರೆಸ್ಸಿಗರು ಮಾತನಾಡುತ್ತಿಲ್ಲವೇಕೆ? ಡಿ.ಕೆ.ಶಿವಕುಮಾರ್ ಪರಿಸ್ಥಿತಿಯ ಬಗ್ಗೆ ಅನುಕಂಪ ಮೂಡುತ್ತಿದೆ. ಬೆಂಗಳೂರಿನಲ್ಲಿ ಕುಳಿತು ಟ್ವೀಟ್ ಮಾಡುವುದೇ ವಿರೋಧ ಪಕ್ಷದ ನಾಯಕತ್ವದ ಕೆಲಸವೆಂದು ಸಿದ್ದರಾಮಯ್ಯ ಅಂದುಕೊಂಡಿದ್ದಾರೆ ಎಂದು ವ್ಯಂಗ್ಯವಾಡಿದರು.



ಸುಭಾಷಿತ

ಇತರರಿಗೆ ತೊಂದರೆ ಕೊಡುವ ಮನುಷ್ಯ ತನಗೆ ತಾನೂ ತೊಂದರೆ ಕೊಟ್ಟುಕೊಳ್ಳುತ್ತಿರುತ್ತಾನೆ.

-ಚಿನುವಾ ಅಚಿಬೆ

ಅತಿವೃಷ್ಟಿ: ವಿಳಂಬ ಮಾಡದೆ ಪರಿಹಾರ ಕ್ರಮಗಳನ್ನು ಕೈಗೊಳ್ಳಿ

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾದ ಪರಿಣಾಮ ರಾಜ್ಯದ ಹಲವು ಭಾಗಗಳಲ್ಲಿ ಧಾರಾಕಾರ ಮಳೆ ಸುರಿಯುತ್ತಿದೆ. ಕೆರೆ-ಕಟ್ಟೆಗಳೇನೋ ಮೈದುಂಬಿಕೊಂಡಿವೆ. ಆದರೆ, ಕೊಯ್ಲಿಗೆ ಬಂದಿದ್ದ ಫಸಲು ಮಳೆಯಿಂದ ತೀವ್ರವಾಗಿ ಹಾನಿಗೊಳಗಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿ ರಾಜ್ಯದ ಹಲವು ಭಾಗಗಳ ರೈತರು ಕಂಗಾಲಾಗಿದ್ದಾರೆ. ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆಗಳಲ್ಲಿ ಕಾಫಿ, ಕಾಳುಮೆಣಸು ಹಾಗೂ ಅಡಿಕೆ ಬೆಳೆಯಲ್ಲಿ ಈಗಾಗಲೇ ಕೊಳೆರೋಗ ಕಾಣಿಸಿಕೊಂಡ ವರದಿಗಳಿವೆ. ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭತ್ತದ ಕಟಾವು ಮಾಡಲು ಮಳೆ ಬಿಡುವನ್ನೇ ನೀಡುತ್ತಿಲ್ಲ. ಕೊಯ್ಲು ಮಾಡಿದ ಭತ್ತವನ್ನು ಸಂಗ್ರಹಿಸಿಡಲು ಸೂಕ್ತ ಸೌಲಭ್ಯಗಳಿಲ್ಲದೆ ಬೆಳೆದ ಬೆಳೆ ಮಳೆಯಲ್ಲಿ ನೆನೆದು ಕಪ್ಪುಬಣ್ಣಕ್ಕೆ ತಿರುಗುತ್ತಿದೆ. ಜತೆಗೆ ಮೊಳಕೆ ಸಹ ಒಡೆಯುತ್ತಿದೆ. ಹೀಗಿದ್ದೂ ಭತ್ತದ ಖರೀದಿ ಕೇಂದ್ರಗಳನ್ನು ಇನ್ನೂ ಆರಂಭಿಸಿಲ್ಲ. ಮುಂಗಾರಿನ ಹಂಗಾಮು ಮುಗಿದ ಮೇಲೆ ಕಾಟಾಚಾರಕ್ಕೆ ಖರೀದಿ ಕೇಂದ್ರಗಳನ್ನು ತೆರೆದರೆ ಏನು ಪ್ರಯೋಜನ ಎನ್ನುವ ರೈತರ ಪ್ರಶ್ನೆಯಲ್ಲಿ ಹುರುಳಿಲ್ಲದೆ ಇಲ್ಲ. ಚಾಮರಾಜನಗರ, ಮಂಡ್ಯ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ ಮತ್ತಿತರ ಜಿಲ್ಲೆಗಳ ಹಲವೆಡೆ ಮಳೆಯಿಂದಾಗಿ ರಾಗಿ ಫಸಲು ಚಾಪೆ ಹಾಸಿದಂತೆ ಸಂಪೂರ್ಣವಾಗಿ ನೆಲಕ್ಕೊರಗಿ ಮಲಗಿದೆ. ಕಲಬುರಗಿ ಪ್ರದೇಶದಲ್ಲಿ ತೊಗರಿ ಬೆಳೆ ಹೂವು ಬಿಡುವ ಸಂದರ್ಭವೂ ಇದಾಗಿದ್ದು, ಮಳೆಯಿಂದ ಹೂವು ಉದುರಿಹೋಗುತ್ತಿದೆ. ಇದರಿಂದ ಇಳುವರಿ ಮೇಲೆ ವ್ಯತಿರಿಕ್ತ ಪರಿಣಾಮ ಆಗಲಿದೆ ಎಂದು ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ. ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಬೆಳೆದು ನಿಂತಿದ್ದ ಈರುಳ್ಳಿ, ತರಕಾರಿ ಬೆಳೆ ಸಹ ಹಾನಿಗೊಳಗಾಗಿದೆ.



ಕೃಷಿ ಚಟುವಟಿಕೆಗಳ ಆರ್ಥಿಕ ಬಂಡಿ ನಿಂತಲ್ಲೇ ನಿಂತಿರುವ ಈ ಹೊತ್ತಿನಲ್ಲಿ ಸರ್ಕಾರ ಮೈಕೊಡವಿ ಎದ್ದು ನಿಲ್ಲಬೇಕು. 'ನಿಮ್ಮೊಂದಿಗೆ ನಾವಿದ್ದೇವೆ' ಎನ್ನುವ ಸಂದೇಶ ರೈತರನ್ನು ಮುಟ್ಟುವಂತೆ ಮಾಡಬೇಕು

ಈ ಅಕಾಲಿಕ ಮಳೆಯಿಂದ ಕೃಷಿ ಚಟುವಟಿಕೆಗಳ ಮೇಲೆ ತೀವ್ರ ತರಹದ ವ್ಯತಿರಿಕ್ತ ಪರಿಣಾಮಗಳು ಉಂಟಾಗಿರುವುದು ಸುಸ್ಪಷ್ಟ. ಮಳೆಚಕ್ರ ಇತ್ತೀಚಿನ ವರ್ಷಗಳಲ್ಲಿ ದಿಕ್ಕು ತಪ್ಪಿದ್ದು, ಹವಾಮಾನ ಬದಲಾವಣೆಯ 'ಬಿಸಿ' ಜೋರಾಗಿಯೇ ತಟ್ಟುತ್ತಿದೆ. ಸ್ಥಳೀಯ ಮಟ್ಟದಲ್ಲಿ ಹವಾಮಾನ ಬದಲಾವಣೆಯ ಪರಿಣಾಮಗಳೇನು ಎನ್ನುವುದನ್ನು ತಿಳಿದುಕೊಳ್ಳುವುದು ಕೂಡ ಈಗ ಮುಖ್ಯವಾಗಿದೆ. ಬೆಳೆ ಪದ್ಧತಿ ಹಾಗೂ ಬಿತ್ತನೆ ಅವಧಿಯಲ್ಲಿ ಬದಲಾವಣೆ ಏನಾದರೂ ಅಗತ್ಯವೇ ಎನ್ನುವ ವಿಷಯವಾಗಿ ತಜ್ಞರು ವಿಶ್ಲೇಷಿಸಿ ಬೆಳಕು ಚೆಲ್ಲಬೇಕಿದೆ. ಆದರೆ, ಇವುಗಳೆಲ್ಲ ದೀರ್ಘಾವಧಿಯಲ್ಲಿ ಪರಿಹಾರವನ್ನು ಒದಗಿಸಬಹುದಾದ ಕ್ರಮಗಳು. ಬೆಳೆ ಹಾನಿಯನ್ನು ಅನುಭವಿಸಿದ ರೈತರಿಗೆ ಪರಿಹಾರ ನೀಡಬೇಕಾಗಿರುವುದು ತಕ್ಷಣಕ್ಕೆ ಆಗಬೇಕಿರುವ ಕೆಲಸ. ರಾಜ್ಯದಲ್ಲಿ ಬಿತ್ತನೆಯಾಗಿರುವ ಬೆಳೆಗಳ ಕುರಿತು ನಿಖರ ಮಾಹಿತಿಯನ್ನು ಕಲೆಹಾಕಲು ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆ ಜಂಟಿಯಾಗಿ ಇತ್ತೀಚೆಗೆ ಆ್ಯಪ್‌ವೊಂದನ್ನು ಅಭಿವೃದ್ಧಿಪಡಿಸಿವೆ. ಆ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೆ ತಂದಿದ್ದರೆ ಕೃಷಿ ಇಲಾಖೆಯ ಬಳಿ ಈಗ ಬಿತ್ತನೆಯಾದ ಪ್ರಮಾಣ ಹಾಗೂ ಮಳೆಯಿಂದ ಹಾನಿಯಾದ ಬೆಳೆಯ ಪ್ರಮಾಣದ ನಿಖರ ಲೆಕ್ಕಾಚಾರ ಇರುತ್ತಿತ್ತು. ಇದರಿಂದ ಪರಿಹಾರ ವಿತರಿಸುವ ಕೆಲಸ ವಿಳಂಬವಿಲ್ಲದೆ ನಡೆಯಲು ಸಾಧ್ಯವಿತ್ತು. ಆದರೆ, ಸರ್ಕಾರದ ಹೊಣೆ ಹೊತ್ತವರಿಗೆ ಚುನಾವಣಾ ಪ್ರಚಾರ ಕಾರ್ಯದಲ್ಲಿ ಪಾಲ್ಗೊಳ್ಳಲು ಇರುವಂತಹ ಉತ್ಸಾಹ, ಆಡಳಿತದಲ್ಲಿ ಸುಧಾರಣೆ ತರುವಲ್ಲಿ ಇದ್ದಂತಿಲ್ಲ. ಹೀಗಾಗಿ ಇಂತಹ ಯೋಜನೆಗಳೆಲ್ಲ ಕುಂಟುತ್ತಾ ಸಾಗುತ್ತವೆ.

ಸಂಕಟದ ಇಂತಹ ಸಮಯದಲ್ಲಿ ಜನರ ನೆರವಿಗೆ ನಿಲ್ಲಬೇಕಿದ್ದ ಆಡಳಿತ ಯಂತ್ರವು ಚುನಾವಣೆ ಮತ್ತು ಬಿಟ್‌ಕಾಯಿನ್ ಜಪದಲ್ಲಿ ಸಂಪೂರ್ಣವಾಗಿ ಮೈಮರೆತಿದೆ. ಕೋವಿಡ್ ಸಮಯದ ಲಾಕ್‌ಡೌನ್‌ನಿಂದ ತೊಂದರೆ ಹಾಗೂ ಅಪಾರ ನಷ್ಟ ಅನುಭವಿಸಿದ್ದ ರೈತವರ್ಗ ಈಗ ಅತಿವೃಷ್ಟಿಯಿಂದ ಕಂಗಾಲಾಗಿ ಕುಳಿತಿದೆ. ಕೃಷಿ ಚಟುವಟಿಕೆಗಳ ಆರ್ಥಿಕ ಬಂಡಿ ನಿಂತಲ್ಲೇ ನಿಂತಿರುವ ಈ ಹೊತ್ತಿನಲ್ಲಿ ಸರ್ಕಾರ ಮೈಕೊಡವಿ ಎದ್ದು ನಿಲ್ಲಬೇಕು. 'ನಿಮ್ಮೊಂದಿಗೆ ನಾವಿದ್ದೇವೆ' ಎನ್ನುವ ಸಂದೇಶ ರೈತರನ್ನು ಮುಟ್ಟುವಂತೆ ಮಾಡಬೇಕು. ವಿಳಂಬವಿಲ್ಲದೆ ಸಮೀಕ್ಷೆ ಕಾರ್ಯ ನಡೆಸಿ, ತ್ವರಿತಗತಿಯಲ್ಲಿ ಪರಿಹಾರದ ವ್ಯವಸ್ಥೆ ಮಾಡಬೇಕು. ಕೊಯ್ಲು ಮಾಡಿದ ಫಸಲು ಖರೀದಿಸಲು ಖರೀದಿ ಕೇಂದ್ರಗಳನ್ನೂ ಆದ್ಯತೆಯ ಮೇಲೆ ತೆರೆಯಬೇಕು. ಬೆಂಗಳೂರು ಸೇರಿದಂತೆ ರಾಜ್ಯದ ನಗರ ಪ್ರದೇಶಗಳಲ್ಲಿ ಮಳೆಯಿಂದ ಬಹುತೇಕ ರಸ್ತೆಗಳು ಓಡಾಡಲು ಆಗದಷ್ಟು ಹಾಳಾಗಿವೆ. ಅದರಲ್ಲೂ ರಾಜಧಾನಿಯಲ್ಲಿ ಸಂಚಾರ ಎನ್ನುವುದು ದುಸ್ತರವಾಗಿದೆ. ರಸ್ತೆಗಳ ಗುಂಡಿ ಮುಚ್ಚುವ ಕಾರ್ಯವನ್ನೂ ಬೇಗ ಮುಗಿಸಿ, ಸಂಚಾರ ದಟ್ಟಣೆಯನ್ನು ಹೋಗಲಾಡಿಸಬೇಕು. ಈ ದಿಸೆಯಲ್ಲಿ ಸಂಬಂಧಪಟ್ಟ ಇಲಾಖೆಗಳು ಚುರುಕಿನಿಂದ ಕಾರ್ಯಪ್ರವೃತ್ತವಾಗುವಂತೆ ಮುಖ್ಯಮಂತ್ರಿ ಚಾಟಿ ಬೀಸಬೇಕು.

ದಿನದ ಟ್ವೀಟ್



ಅಶುಭ ಸೂಚನೆ

ಕಟ್ಟಾ ಎಡ ಮತ್ತು ಬಲ ಪಂಥಗಳು 19ನೇ ಶತಮಾನದ ಸಿದ್ಧಾಂತಗಳಾಗಿವೆ ಮತ್ತು ಎರಡೂ ವಿಫಲವಾಗಿವೆ. ಭಾರತದಲ್ಲಿ ಎಡಪಂಥವು ಬರೀ ಒಂದು ರಾಜ್ಯದಲ್ಲಿ ಉಳಿದುಕೊಂಡಿದೆ. ಆದರೆ, ಬಲಪಂಥವು ತನ್ನನ್ನು ಒಪ್ಪದ ಪ್ರತಿಯೊಬ್ಬರ ಬಗ್ಗೆಯೂ ಅಸಹಿಷ್ಣುವಾಗುತ್ತಾ, 1930 ಮತ್ತು 40ರ ದಶಕಗಳಲ್ಲಿ ಎಡಪಂಥವು ಯುರೋಪ್‌ನಲ್ಲಿ ಮಾಡಿದ ರೀತಿಯಲ್ಲಿಯೇ ಮಾಡುತ್ತಾ ನೆಲೆಯೂರುತ್ತಿರುವಂತೆ ಭಾಸವಾಗುತ್ತಿದೆ. ಅಶುಭ ಸೂಚನೆಗಳು.

ಅನಿಲ್ ಸ್ವರೂಪ್, ನಿವೃತ್ತ ಐಎಎಸ್ ಅಧಿಕಾರಿ, ಲೇಖಕ

ಕಿಡಿನುಡಿ

ವಿವಿಧ ರಾಜ್ಯಗಳು ಜಾರಿಗೆ ತಂದಿರುವ ಮತಾಂತರ ನಿಷೇಧ ಕಾಯ್ದೆಗಳ ಕುರಿತು ಅಧ್ಯಯನ ನಡೆಸಲಾಗುತ್ತಿದೆ. ಧಾರ್ಮಿಕ ಮುಖಂಡರ ಜತೆಗೂ ಸಮಾಲೋಚನೆ ನಡೆಸಲಾಗುವುದು. ಯಾವುದೇ ರೀತಿಯ ಪೂರ್ವಗ್ರಹ ಇಲ್ಲದೆ, ಪ್ರಬಲವಾದ ಕಾಯ್ದೆಯೊಂದನ್ನು ಜಾರಿಗೊಳಿಸಲಾಗುವುದು.



ಆರಗ ಜ್ಞಾನೇಂದ್ರ, ಗೃಹ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 17-11-1996

- **18 ಕಿರಿಯ ಕೃಷಿ ಅಧಿಕಾರಿಗಳ ಸಸ್ಪೆಂಡ್**

ಬೆಂಗಳೂರು, ನ. 16– ರಾಜ್ಯದಲ್ಲಿ ಜಲಾನಯನ ಪ್ರದೇಶ ಅಭಿವೃದ್ಧಿ ವ್ಯಾಪ್ತಿಗೆ ಬರುವ ನಾನಾ ಯೋಜನೆಗಳಿಗೆ 1990-91ರಿಂದ ಇಲ್ಲಿಯವರೆಗೆ ಆಗಿರುವ ಖರ್ಚು-ವೆಚ್ಚ ಮತ್ತು ಪ್ರಗತಿ ಕುರಿತು ನಿಗದಿತ ಅವಧಿಯೊಳಗೆ ವರದಿ ಕಳುಹಿಸಿಕೊಡದ 16 ಮಂದಿ ಸಹಾಯಕ ಕೃಷಿ ನಿರ್ದೇಶಕರು ಹಾಗೂ ಇಬ್ಬರು ಉಪ ನಿರ್ದೇಶಕರನ್ನು ರಾಜ್ಯ ಸರ್ಕಾರ ಅಮಾನತುಗೊಳಿಸಿದೆ.

- **ಸೌಂದರ್ಯ ಸ್ಪರ್ಧೆ: 'ವೃತ್ತಿ ಜೊತೆ ರಾಜಕೀಯ ಬೆರೆಸಲಾರೆ'**

ಬೆಂಗಳೂರು, ನ. 16– ವಿಶ್ವಸುಂದರಿ ಸ್ಪರ್ಧೆಯನ್ನು ಬಲವಾಗಿ ವಿರೋಧಿಸುತ್ತಿರುವ ಸಂಘಟನೆಗಳಲ್ಲಿ ಬಿಜೆಪಿಯ ಮುಂಚೂಣಿ ಘಟಕಗಳಲ್ಲಿ ಒಂದಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸಹ ಒಂದು. ಆದರೆ, ಎಬಿವಿಪಿಯ ಸಕ್ರಿಯ ಸದಸ್ಯರೂ ಆಗಿರುವ ಖ್ಯಾತ ಚಿತ್ರ ನಿರ್ದೇಶಕ ಪ್ರಿಯದರ್ಶನ್ ಅವರೇ ವಿಶ್ವಸುಂದರಿ ಸ್ಪರ್ಧೆಯ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ದೇಶನದ ಹೊಣೆ ಹೊತ್ತಿರುವುದು ಹಲವರಿಗೆ ಹುಬ್ಬೇರಿಸುವಂತೆ ಮಾಡಿದೆ.

ಆದರೆ, ಈ ವಿಷಯದಲ್ಲಿ 'ಕಾಲಾಪಾನಿ' ಖ್ಯಾತಿ ಪ್ರಿಯದರ್ಶನ್ ಅವರಿಗೆ ಮಾತ್ರ ವಿಷಾದವಾಗಲೀ ಗೊಂದಲವಾಗಲೀ ಇಲ್ಲ. 'ನಿರ್ದೇಶನ ನನ್ನ ವೃತ್ತಿ. ರಾಜಕೀಯವಾಗಿ ವೈಯಕ್ತಿಕ ಒಲವು ನಿಲುವುಗಳನ್ನು ವೃತ್ತಿಯ ಜೊತೆ ಬೆರೆಸುವುದಿಲ್ಲ' ಎಂಬುದು ಅವರ ಸ್ಪಷ್ಟ ಉತ್ತರ.

50 ವರ್ಷಗಳ ಹಿಂದೆ

ಬುಧವಾರ, 17-11-1971

- **ಬೆಲೆ ಏರಿಕೆ ತಡೆಯದೆ ವೈಫಲ್ಯ: ವಿರೋಧಿಗಳಿಂದ ಸರ್ಕಾರಕ್ಕೆ ತರಾಟೆ**

ನವದೆಹಲಿ, ನ. 16– ಶ್ರೀಸಾಮಾನ್ಯನಿಗೆ ಹೊರಲಾಗದ ಹೊರೆಯಾಗಿರುವಂತಹ ಅಗತ್ಯ ವಸ್ತುಗಳ ಏರುತ್ತಿರುವ ಬೆಲೆಗಳ ಬಗ್ಗೆ ಲೋಕಸಭೆಯಲ್ಲಿ ಇಂದು ವಿರೋಧ ಪಕ್ಷಗಳು ಸರ್ಕಾರಕ್ಕೆ ಬಹುವಾಗಿ ಪ್ರಶ್ನೆ ಹಾಕಿ ಹಿಂಸೆಗೆ ಗುರಿಪಡಿಸಿದವು.

ಅಟಲ್ ಬಿಹಾರಿ ವಾಜಪೇಯಿ (ಜನಸಂಘ) ಮತ್ತು ಇತರ ನಾಲ್ವರು ಮಂಡಿಸಿದ ಗಮನ ಸೆಳೆಯುವ ಸೂಚನೆಯೊಂದರ ಮೂಲಕ ಸದಸ್ಯರು ವ್ಯಕ್ತಪಡಿಸಿದ ಕಳವಳದಲ್ಲಿ ಸರ್ಕಾರ ಪಾಲ್ಗೊಂಡಿತಲ್ಲದೆ, ಸರ್ಕಾರ ಕೈಗೊಂಡ ಅಲ್ಪಾವಧಿಯ ಹಾಗೂ ದೀರ್ಘಾವಧಿಯ ಕ್ರಮಗಳು ಮುಂಬರುವ ತಿಂಗಳುಗಳಲ್ಲಿ ಬೆಲೆ ಮಟ್ಟದ ಮೇಲೆ ಸ್ಪಷ್ಟವಾಗಿ ಗೋಚರಿಸುವಂತೆ ಪರಿಣಾಮ ಉಂಟುಮಾಡುವುವೆಂದು ಅರ್ಥ ಸಚಿವ ಶ್ರೀ ವೈ.ಬಿ. ಚವಾಣ್ ಅವರು ಆಶಿಸಿದರು.

- **ಸಂವಿಧಾನಕ್ಕೆ ಅಪಮಾನ: ಶಿಕ್ಷಾರ್ಹ ಅಪರಾಧವೆಂದು ಘೋಷಿಸಲು ಶಿಫಾರಸು**

ನವದೆಹಲಿ, ನ. 16– ರಾಷ್ಟ್ರಧ್ವಜ, ಸಂವಿಧಾನ ಗ್ರಂಥ, ರಾಷ್ಟ್ರ ಲಾಂಛನ ಮತ್ತು ರಾಷ್ಟ್ರಗೀತೆ- ಇವುಗಳನ್ನು ದಹನ ಮಾಡುವುದು, ಅಪವಿತ್ರಗೊಳಿಸುವುದು ಅಥವಾ ಯಾವುದೇ ರೀತಿ ಉದ್ದೇಶಪೂರ್ವಕವಾಗಿ ಅಪಮಾನಗೊಳಿಸುವುದನ್ನು ಭಾರತೀಯ ಪೀನಲ್ ಕೋಡಿನ ಅನ್ವಯ ಶಿಕ್ಷಾರ್ಹ ಅಪರಾಧವೆಂದು ಘೋಷಿಸುವಂತೆ ಕಾನೂನು ಆಯೋಗ ಶಿಫಾರಸು ಮಾಡಿದೆ.

ಅಮಲಿನ ಪಿತ್ತ ನೆತ್ತಿಗೇರಿ ಅಪಾಯದ ಬಾಗಿಲು ಬಡಿಯುವ ಮುನ್ನ...

ಮಾದಕ ವ್ಯಸನ: ಗೌರವದ ಅವಸಾನ



ವಿಶ್ಲೇಷಣೆ

ಡಾ. ಶಿವಮೂರ್ತಿ ಮುರುಘಾ ಶರಣರು

ರಾಜಕೀಯ ಕ್ಷೇತ್ರದಲ್ಲಿ ಭ್ರಷ್ಟಾಚಾರ. ಅದರೊಟ್ಟಿಗೆ ಜಾತಿ ರಾಜಕಾರಣ ಮತ್ತು ಸ್ವಜನಪಕ್ಷಪಾತ. ಅದರಿಂದಾಗಿ ಅದು ಮಲಿನಗೊಳ್ಳುತ್ತದೆ. ಹಿಂದಿನ ದಿನಗಳಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಲಂಚಗುಳಿತನ. ಇಂದಿನ ದಿನಗಳಲ್ಲಿ ಅದು ಎಲ್ಲ ಕ್ಷೇತ್ರಗಳನ್ನೂ ಆವರಿಸಿಕೊಳ್ಳುತ್ತಿರುವುದು ಅಪಾಯಕಾರಿ. ಅದರಂತೆ, ಧಾರ್ಮಿಕ ಕ್ಷೇತ್ರದಲ್ಲಿ ಮತಾಂಧತೆ. ಎಷ್ಟೋ ದಾರ್ಶನಿಕರು ಬಂದು, ಅದರ ಬಗೆಗೆ ಜಾಗೃತಿ ಮೂಡಿಸಿದರು. ಆದರೆ ಅದಿನ್ನೂ ಚಾಲ್ತಿಯಲ್ಲಿದೆ.

ಸರ್ವಧರ್ಮ ಮತ್ತು ಸರ್ವದಾರ್ಶನಿಕರ ಹೆಸರಲ್ಲೂ ಮತಾಂಧತೆ. ಮತಾಂಧತೆಯು ಮತಾಂತರದಂತಹ ಸಮಸ್ಯೆಗೆ ಕಾರಣವಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಂತೆ ಬುದ್ಧಿಪೂರ್ವಕವಾಗಿ ಮತಾಂತರಗೊಂಡರೆ ಅಭ್ಯಂತರವಿಲ್ಲ. ಅದು ಬೌದ್ಧಿಕ ಮತಾಂತರ. ಇಂದು ನಡೆಯುತ್ತಿರುವ ಮತಾಂತರವು ಆಮಿಷದಿಂದ ಕೂಡಿದೆ. ಜನಸಾಮಾನ್ಯರಿಗೆ ಅನುಕೂಲಗಳನ್ನು ತೋರಿಸುತ್ತ ಮತಾಂತರ ಮಾಡಲಾಗುತ್ತದೆ.

ಅಸ್ಪೃಶ್ಯತೆ ಆಚರಣೆಯಿಂದಾಗಿ ವಿಶ್ವಮಾನವ ಪರಿಕಲ್ಪನೆ ಸಾಧ್ಯವಾಗುತ್ತಿಲ್ಲ. ಈ ದಿನಗಳಲ್ಲಂತೂ ಜಾತೀಯತೆ ಮಿತಿಮೀರಿದೆ. ಸ್ವಜಾತಿಯೊಂದಿಗೆ ಗುರುತಿಸಿಕೊಳ್ಳಲು ಸರ್ವಕ್ಷೇತ್ರಗಳ ಮುಖಂಡರೂ ಹಾತೊರೆಯುತ್ತಾರೆ. ಸಾಮಾಜಿಕ ಕ್ಷೇತ್ರವು ಅಸ್ಪೃಶ್ಯತೆಯಿಂದಾಗಿ ತನ್ನ ಪಾವಿತ್ರ್ಯವನ್ನು ಕಳೆದುಕೊಳ್ಳುತ್ತಿದೆ. ಉಳಿದಂತೆ ಎಲ್ಲ ಕ್ಷೇತ್ರಗಳನ್ನೂ ಕಾಡುತ್ತಿರುವ ಸಮಸ್ಯೆಯೆಂದರೆ ಮಾದಕವಸ್ತು.

ಬಸವಣ್ಣ, ಬುದ್ಧ, ಗಾಂಧಿ ಮೊದಲಾದ ದಾರ್ಶನಿಕರು ಭೇದಮುಕ್ತ ಸಮಾಜ ರಚನೆಗಾಗಿ ಶ್ರಮಿಸಿದರು. ತನ್ಮೂಲಕ ಸಮಸಮಾಜ. ಈ ನಡುವೆ ಹಸಿವುಮುಕ್ತ ಸಮಾಜಕ್ಕಾಗಿ 'ಅನ್ನಭಾಗ್ಯ'ದಂತಹ ಯೋಜನೆಗಳು ಜಾರಿಗೆ ಬಂದವು. ಕಷ್ಟಪಟ್ಟು ದುಡಿಯುವುದರಿಂದ ಸಾಲಬಾಧೆಯಂತಹ ಶೂಲವನ್ನು ತಪ್ಪಿಸಿಕೊಳ್ಳಬಹುದು. ಅದಕ್ಕಾಗಿ ಸ್ವಾಭಿಮಾನ ಅವಶ್ಯ. ಸ್ವಾಭಿಮಾನವು ಸಾಲಮುಕ್ತ ಸಮಾಜ ರಚನೆಗೆ ಒತ್ತಾಸೆ ಆಗುತ್ತದೆ. ವ್ಯಕ್ತಿಯು ತನ್ನೊಳಗಿನ ಶಕ್ತಿ ಮತ್ತು ಯುಕ್ತಿ ಬಳಸಿಕೊಂಡು, ಜೀವನದ ದಾರಿದ್ರ್ಯ ಹಾಗೂ ಬಡತನ ನಿವಾರಣೆಗೆ ಶ್ರಮಿಸಬೇಕಾಗುತ್ತದೆ.

ಸಂಘ-ಸಂಸ್ಥೆಗಳು ಉದ್ಯೋಗ ಅವಕಾಶವನ್ನು ನಿರ್ಮಿಸುವತ್ತ ಗಮನಹರಿಸುತ್ತ ಬಂದಿವೆ. ಅದನ್ನು ಇನ್ನಷ್ಟು ಸಮರ್ಪಕವಾಗಿ ಸಂಘಟಿಸಬೇಕಾಗುತ್ತದೆ. ಸರ್ಕಾರವು ಹೊಸ ಹೊಸ ಯೋಜನೆಗಳನ್ನು ಸೃಷ್ಟಿಸುತ್ತ, ಸಮೃದ್ಧ ಸಮಾಜದ ರಚನೆಗೆ ಒತ್ತು ಕೊಡಬೇಕು. ವ್ಯಕ್ತಿ, ಸಂಸ್ಥೆ ಮತ್ತು ಸರ್ಕಾರ ಕೂಡಿಕೊಂಡು ಆರೋಗ್ಯಪೂರ್ಣ ಸಮಾಜ ರಚನೆಗೆ ಯತ್ನಿಸಬೇಕು. ಅಂದರೆ ವ್ಯಸನಮುಕ್ತ ಸಮಾಜ ರಚನೆ ಆಗಬೇಕಿದೆ. ಇಂದು ಡ್ರಗ್ಸ್ ಮಾಫಿಯಾ ಕಳವಳಕಾರಿ ವಿದ್ಯಮಾನಕ್ಕೆ ಕಾರಣವಾಗಿದೆ. ವ್ಯಸನಮುಕ್ತ ಸಮಾಜ ರಚನೆಯು ಎಲ್ಲರ ಮುಂದಿರುವ ದೊಡ್ಡ ಸವಾಲು. ಇಂದಿನ ಯುವಜನ ಬುದ್ಧಿವಂತರಿದ್ದಾರೆ, ಪ್ರಾಮಾಣಿಕರೂ ಆಗಿದ್ದಾರೆ, ಏನಾದರೊಂದು ಸಾಧನೆ ಮಾಡಬೇಕೆಂಬ ಛಲವುಳ್ಳವರಾಗಿದ್ದಾರೆ. ಸ್ವತಃ ಇಲ್ಲವೆ ಪರಿಸರದ ಪ್ರಭಾವದಿಂದ ಮೇಧಾವಿತನವನ್ನು ಕಳೆದುಕೊಳ್ಳುತ್ತಿರುವುದು ಆತಂಕಕಾರಿ. ಬಹುತೇಕ ಸಂಗ ದೋಷ. ಶುಭ್ರವಾಗಿರುವ ಬಟ್ಟೆ (ಉಡುಗೆ) ಧರಿಸಿಕೊಳ್ಳುವಂತೆ, ಉತ್ತಮ ಸ್ನೇಹಿತರ ಸಂಗ ಮಾಡಬೇಕಾಗುತ್ತದೆ. ಬಟ್ಟೆ ಶುಭ್ರವಾಗಿರಲಿ; ಸ್ನೇಹಿತರು ಉತ್ತಮರಿರಲಿ. ಕೆಟ್ಟವರ ಸಹವಾಸದಿಂದ ಚಟಾಧೀನರಾಗುವ ಸಂಭವ.

ಮೂಲತಃ ಯುವಜನರು ಉತ್ತಮರಿರುತ್ತಾರೆ. ಅಂಥವರನ್ನು ಕೆಲವರು ದಿಕ್ಕು ತಪ್ಪಿಸುತ್ತಾರೆ. ಈ ದಿಶೆಯಲ್ಲಿ ಪಾರ್ಟಿಯ ಪರಿಕಲ್ಪನೆ. ಮೋಜು- ಮಸ್ತಿಗೆ ಒಳಗಾಗುವುದು, ರೇವ್ ಪಾರ್ಟಿಗಳು. ಕುಡಿತದ ಚಟ ಮಾತ್ರವಲ್ಲ, ಅದರೊಟ್ಟಿಗೆ ಮಾದಕ ದ್ರವ್ಯಗಳನ್ನೂ ಸೇರಿಸಿಕೊಂಡು ಕುಡಿಯುವ ಪ್ರವೃತ್ತಿ. ಮಾದಕ ವ್ಯಸನವು ವ್ಯಕ್ತಿಯ ಗೌರವ ಮತ್ತು ಘನತೆಯನ್ನು ಹಾಳು ಮಾಡುತ್ತದೆ. ಕೆಲ ರಾಜಕಾರಣಿಗಳು ಮತ್ತು ಸೆಲೆಬ್ರಿಟಿಗಳ ಮಕ್ಕಳು ಮತ್ತು ಆ ಕ್ಷೇತ್ರದಲ್ಲಿರುವ ಕೆಲವರು ಮಾದಕ ವ್ಯಸನಕ್ಕೆ ಒಳಗಾಗುತ್ತಿರುವ ಸಂದರ್ಭಗಳು. ಮಾದಕ ವ್ಯಸನವು ಮೆತ್ತಿಕೊಂಡಾಗ ಪ್ರತಿಭೆಯು ಮಂಕಾಗುವುದು. ಮಾದಕ ವ್ಯಸನವು ವ್ಯಕ್ತಿಯಲ್ಲಿ ಕಾರ್ಯಪ್ರವೃತ್ತಿಯನ್ನು ಕುಗ್ಗಿಸುತ್ತದೆ, ಸದಾ ಅಮಲಿನಲ್ಲಿ ಇರುವಂತೆ ನೋಡಿಕೊಳ್ಳುತ್ತದೆ. ಹೀಗಾದಾಗ ವ್ಯಕ್ತಿಯ ಕಾರ್ಯಕ್ಷಮತೆ ಮೇಲೆ ಇನ್ನಿಲ್ಲದ ದುಷ್ಪರಿಣಾಮ ಆಗುತ್ತದೆ.

ಮಾದಕ ವ್ಯಸನವು ಅಪರಾಧ ಆಗಿದ್ದು, ಕಠೋರವಾದ ಕಾನೂನುಗಳಿವೆ. ಅದರಿಂದ ಕಾರಾಗೃಹದಂತಹ ಕಠಿಣ ಶಿಕ್ಷೆಗಳು. ಎಲ್ಲ ತಪ್ಪುಗಳನ್ನು ಮಾಡಿ, ಅನುಭವ ಪಡೆಯುವಷ್ಟು ಆಯುಷ್ಯ ಎಲ್ಲಿದೆ? ಅನ್ಯರ ತಪ್ಪುಗಳನ್ನು ನೋಡಿ ಪಾಠ ಕಲಿಯಬೇಕಾಗುತ್ತದೆ. ವ್ಯಸನಾಧೀನರು ಅರೆಮೂರ್ಛಾವಸ್ಥೆಯಲ್ಲಿ ಇರುತ್ತಾರೆ: ಅರೆಪ್ರಜ್ಞೆ. ತಾನು ಏನು ಮಾಡುತ್ತಿರುವೆನೆಂಬ ಅರಿವು ಮಾಯ ಆಗುತ್ತದೆ. ಅರಿವಿನ ಗೈರುಹಾಜರಿಯಲ್ಲಿ ಏನು ಬೇಕಾದರೂ ಆಗಬಹುದು.

ಮಾದಕ ವ್ಯಸನದಿಂದ ವ್ಯಕ್ತಿಯ ಪ್ರಜ್ಞೆ ಕಳೆದು ಹೋಗುತ್ತದೆ. ಅದರ ಅಮಲಿನಿಂದ ಹೊರಬರಲು ಸಮಯವೇ ಹಿಡಿಯುತ್ತದೆ. ಮಾದಕ ವ್ಯಸನಿಯೆಂಬ ಹಣೆಪಟ್ಟಿ. ಕೀರ್ತಿ, ಹಣ, ಪ್ರತಿಭೆ ಇದ್ದು, ತಲೆತಗ್ಗಿಸುವಂತಹ ಸಂದರ್ಭ ಎದುರಾಗುವುದು ಶೋಚನೀಯ. ಮಕ್ಕಳಿಗೆ ಪಾಲಕರು ಎಲ್ಲವನ್ನೂ ಒದಗಿಸುತ್ತಾರೆ. ಅಷ್ಟಕ್ಕೇ ಅವರ ಜವಾಬ್ದಾರಿ ಮುಗಿಯುವುದಿಲ್ಲ. ಮಕ್ಕಳು ಏನು ಮಾಡುತ್ತಾರೆ? ಹೇಗೆ ಇದ್ದಾರೆ? ಎಂಥವರೊಟ್ಟಿಗೆ ಗೆಳೆತನ ಹೊಂದಿದ್ದಾರೆ ಎಂಬಂತಹ ವಿಚಾರಗಳ ಮೇಲೆ ನಿಗಾ ಇಡಬೇಕಾಗುತ್ತದೆ.



ಇತ್ತೀಚಿನ ದಿನಗಳಲ್ಲಿ ಮಾದಕ ವ್ಯಸನವು ದಂಧೆ ಆಗುತ್ತಿದೆ. ಭೂ ಮಾಫಿಯಾ, ಗಣಿ ಮಾಫಿಯಾ, ಭೂಗತ ಜಗತ್ತಿನ ಮಾಫಿಯಾದಂತೆ ಮಾದಕ ವಸ್ತುಗಳನ್ನು ಮಾರಾಟ ಮಾಡುವ ಜಾಲವು ಜಗತ್ತಿನಾದ್ಯಂತ ಇದೆ. ಇದು ಪೊಲೀಸ್ ವ್ಯವಸ್ಥೆಗೆ ಅಲ್ಲದೆ ಸಮಾಜಕ್ಕೆ ದೊಡ್ಡ ಸವಾಲು.

ಮಿತಿಮೀರಿದ ಮದ್ಯ ಸೇವನೆಯಿಂದ ಮತ್ತು ಕೂಡ ಮಿತಿಮೀರಿ ಏರುತ್ತದೆ. ಮತ್ತೇರಿದವನ ಮಾತು ಮತ್ತು ವರ್ತನೆಯಲ್ಲಿ ವ್ಯತ್ಯಾಸ ಇರುತ್ತದೆ. ಶರೀರವು ನಿಯಂತ್ರಣ ಕಳೆದುಕೊಳ್ಳುತ್ತದೆ. ಮಾದಕವಸ್ತು ಸೇವನೆಯು ಅದಕ್ಕಿಂತಲೂ ಅಪಾಯಕಾರಿ.

ಕೆಲವರ ಬಳಿ ಹೇರಳವಾದ ಹಣ. ಅವರಿಗೆ ಏನೆಲ್ಲ ಖರೀದಿಸಲು ಅವಕಾಶ. ಅದರಂತೆ ಏನೆಲ್ಲ ಉಣ್ಣಬಹುದು, ಕುಡಿಯಬಹುದು. ಕಾನೂನುಬಾಹಿರವಾದುದನ್ನು ಸೇವಿಸಿದರೆ ಅಂಥವರನ್ನು ಕಾನೂನು ಬಂಧಿಸುತ್ತದೆಂಬ ಅರಿವು ಇರಬೇಕಾಗುತ್ತದೆ.

ಜನಸಾಮಾನ್ಯರು ಪ್ರಾಥಮಿಕ ಅಗತ್ಯಗಳಾದ ಅನ್ನ, ಅರಿವೆ ಹಾಗೂ ಆಶ್ರಯಕ್ಕಾಗಿ ಪರಿತಪಿಸುತ್ತಾರೆ. ಶ್ರಮ ಮತ್ತು ಸಾಧನೆಯಿಂದ ಅವುಗಳನ್ನು ತಮ್ಮದಾಗಿಸಿಕೊಂಡವರು ಉಳಿದವುಗಳತ್ತ ಗಮನಹರಿಸುತ್ತಾರೆ. ಎಲ್ಲ ಇದ್ದವರು ಧರ್ಮ, ದೇವರು, ಧ್ಯಾನ ಮುಂತಾದವುಗಳತ್ತ ತುಡಿಯುತ್ತಾರೆ. ಇವುಗಳತ್ತ ಸುಳಿಯದವರು ಸುಖದ ಹುಡುಕಾಟಕ್ಕೆ ಮುಂದಾಗುತ್ತಾರೆ. ಸುಖದ ಬೆನ್ನು ಹತ್ತಿದವರು ಹೆಚ್ಚಿನ ಸುಖಕ್ಕಾಗಿ ಹಾತೊರೆಯುತ್ತಾರೆ. ಗಾಳಿಯಲ್ಲಿ ತೇಲಾಡಬೇಕು, ಸುಖದಲ್ಲಿ ಓಲಾಡಬೇಕು ಎನ್ನುವವರು ಮಾದಕ ವ್ಯಸನದಂತಹ ಅನಾರೋಗ್ಯಕರವಾದ ಹಾದಿ ಹಿಡಿಯುತ್ತಾರೆ, ತೊಂದರೆ ತಂದುಕೊಳ್ಳುತ್ತಾರೆ. ಅದರಿಂದ ಮರ್ಯಾದೆ ಹೋಗುವ ಸಂದರ್ಭ ಎದುರಾದರೆ, ಖಿನ್ನತೆ ಅನುಭವಿಸುತ್ತಾರೆ. ಖಿನ್ನತೆಗೆ ಸರಿದವರು ಮುಂದೆ ಜೀವಕ್ಕೆ ಅಪಾಯ ತಂದುಕೊಳ್ಳುವ ಸಾಧ್ಯತೆಯೂ ಇಲ್ಲದಿಲ್ಲ.

ಜಾಗತಿಕ ಮಟ್ಟದಲ್ಲಿ ಮಾದಕ ವಸ್ತುಗಳ ದಂಧೆಯು ವ್ಯಾಪಕವಾಗಿ ಹರಡುತ್ತಿದೆ. ಜಗತ್ತಿನಾದ್ಯಂತ ಹೆರಾಯಿನ್, ಬ್ರೌನ್ ಶುಗರ್, ಗಾಂಜಾ ಮುಂತಾದ ಮಾದಕ ವಸ್ತುಗಳು ಮಾಫಿಯಾ ಜಗತ್ತಿಗೆ ಕೊಂಡೊಯ್ಯುತ್ತವೆ. ಮಾಫಿಯಾ ಲೋಕವು ಮಾಯಾಲೋಕವೂ ಅಹುದು, ಅಪರಾಧ ಪ್ರಪಂಚವೂ ಅಹುದು. ಇವೆಲ್ಲ ಮಾನವ ನೆತ್ತಿಯ ಶಕ್ತಿಯನ್ನು ಕಸಿಯುವ ಅಥವಾ ಕದಿಯುವ ದಂಧೆಗಳು. ಮಾದಕ ಪ್ರಪಂಚವು ಮಾಯಾತ್ಮಕ ಪ್ರಪಂಚವಾಗಿದ್ದು, ಮೆದುಳಿನ ಶಕ್ತಿಯನ್ನು ಕುಂದಿಸುವಲ್ಲಿ ಅನಾರೋಗ್ಯಕರವಾದ ಹಾಗೂ ಅಪಾಯಕಾರಿಯಾದ ವ್ಯವಹಾರ ಆಗಿರುತ್ತದೆ. ಮಾದಕವಸ್ತು ವ್ಯಸನಕ್ಕೆ ಒಳಗಾಗುವವರು ದಡ್ಡರಲ್ಲ; ಸುಶಿಕ್ಷಿತರು. ಮದ್ಯಪಾನದ ಆಚೆಗಿನ ಹಾಗೂ ಹೆಚ್ಚಿನ ಸಂತೋಷವನ್ನು ಹುಡುಕುವವರು.

ಈ ವ್ಯಸನವು ಮರಣದೆಡೆಗೆ ಕರೆದೊಯ್ಯಬಹುದು. ಅಮಲಿನ ಪಿತ್ತ ನೆತ್ತಿಗೇರುವ ಮುನ್ನ ವ್ಯಸನಿಗಳೇ, ಒಂದು ಕ್ಷಣ ಗಂಭೀರವಾಗಿ ಯೋಚಿಸಿರಿ. ಅದರಿಂದ ಆದಷ್ಟು ಬೇಗ ಹೊರಬನ್ನಿರಿ.

ಚುರುಮುರಿ



ಕ್ಲ್ಯಾರಿಟಿ ಸಿಗ್ತಿಲ್ಲ!

• ಗುರು ಪಿ.ಎಸ್.

'ಕ್ಲ್ಯಾರಿಟಿ ಸಿಗ್ತಿಲ್ಲ ಸಾರ್, ಕ್ಲ್ಯಾರಿಟಿ ಸಿಗ್ತಿಲ್ಲ...' ಕೈ ಕೈ ಹಿಸುಕಿಕೊಳ್ಳುತ್ತಾ ಅತ್ತಿಂದಿತ್ತ ಓಡಾಡುತ್ತಿದ್ದ ಮುದ್ದಣ್ಣ.

'ಹೀಗ್ಯಾಕೆ ಒದ್ದಾಡ್ತಿದಿಯಾ ಮುದ್ದಣ್ಣ, ಬಿಟ್‌ಕಾಯಿನ್ ಹಗರಣದಲ್ಲಿ ನಿನ್ನ ಹೆಸರೇನಾದರೂ ಐತಾ...' ಕಾಲೆಳೆದ ವಿಜಿ.

'ಬಿಟ್‌ಕಾಯಿನ್ ಬಿಟ್‌ಹಾಕು ಅಂತಾ ಪಿಎಂ ಸಾಹೇಬ್ರೆ ಹೇಳಿದ್ಮೇಲೆ ಅದ್ರ ಬಗ್ಗೆ ಯಾಕ್ ತಲೆ ಕೆಡಿಸಿಕೊಳ್ಳಲಿ ಸಾರ್... ಆದ್ರೆ, ನಮಗೆ ಇಂಡಿಪೆಂಡೆನ್ಸ್ ಸಿಕ್ಕಿದ್ದು 1947ರಲ್ಲಾ 2014ರಲ್ಲಾ ಅನ್ನೋ ಬಗ್ಗೆ ಕ್ಲ್ಯಾರಿಟಿ ಸಿಗ್ತಿಲ್ಲ ಸಾರ್...' ತಲೆ ಕೆರೆದುಕೊಂಡ ಮುದ್ದಣ್ಣ.

'ಕಂಗಾಲ್' ಥರಾ ನೀನೂ ಮಾತಾಡಿದ್ರೆ ಯಾರೂ ಅವಾರ್ಡ್ ಕೊಡಲ್ಲ ಮುದ್ದಣ್ಣ ನಿಂಗೆ, ಬೇರೆಯವ್ರ ಕಾಪಿ ಮಾಡಬೇಡ' ಎಂದು ನಕ್ಕ ವಿಜಿ, 'ನಿಂಗೆ ಯಾವುದೇ ವಿಷಯದ ಬಗ್ಗೆ ಕ್ಲ್ಯಾರಿಟಿ ಬೇಕಿದ್ರೆ ಮೈಸೂರ್ ಪಿಎಂಗೆ ಕೇಳು, ಅವರು ಕೊಡ್ತಾರೆ...' ಎಂದು ಅಮೂಲ್ಯ ಸಲಹೆ ಕೊಟ್ಟ.

'ಸ್ವಾತಂತ್ರ್ಯದ ವರ್ಷ ಪತ್ತೆ ಮಾಡಿಕೊಡಿ ಅಂದ್ರೆ, ಅವರು ಲಿಂಗಪತ್ತೆ ಮಾಡೋಕೆ ಹೊರಟುಬಿಡ್ತಾರೆ ಸಾರ್, ಅವ್ರ ಸಾವಾಸ ಬೇಡ...' ಎರಡು ಹೆಜ್ಜೆ ಹಿಂದಕ್ಕೆ ಹೋದ ಮುದ್ದಣ್ಣ.

'ಹೋಗ್ಲಿ ಬಿಡಪ್ಪ, ಟೆನ್ಷನ್ ಮಾಡ್ಕೊಬೇಡ.. ಸ್ವಾತಂತ್ರ್ಯದ ಚಿಂತೆ ಬಿಡು... ನಾನೇ ನಿನಗೆ ಕುರಿ ರಕ್ತದ ಫ್ರೈ, ಚಿಕನ್ ಬಿರಿಯಾನಿ ಕೊಡಿಸ್ತೀನಿ ಬಾ, ಪಾರ್ಟಿ ಮಾಡಣ...'

'ಅಯ್ಯಯ್ಯಯ್ಯಯ್ಯೋ, ಏನ್ ಸಾರ್ ನೀವೂ ಹೀಗೆ ಓಪನ್ ಆಗಿ ನಾನ್‌ವೆಜ್ ಬಗ್ಗೆ ಮಾತಾಡ್ತೀರಾ...! ಶಾಂತಂ ಪಾಪಂ, ಶಾಂತಂ ಪಾಪಂ...' ಕೆನ್ನೆ ಕೆನ್ನೆ ಬಡ್ಕೊಂಡ ಮುದ್ದಣ್ಣ.

'ಮುದ್ದಣ್ಣ, ಈಗ ನನಗೆ ಕ್ಲ್ಯಾರಿಟಿ ಸಿಕ್ತು... ನಿನಗೆ ಮಾತ್ರ ಸ್ವಾತಂತ್ರ್ಯ ಸಿಕ್ಕಿದ್ದು 2014ರ ನಂತರವೇ ಬಿಡು' ಉತ್ತರಿಸಿದ ವಿಜಿ.

'ಅದ್ಹೆಂಗೆ ಸಾರ್...'

'ಕಾಮನ್‌ಸೆನ್ಸ್ ಎಂಬ ಭವಬಂಧನದಿಂದ ನೀನು ಸ್ವತಂತ್ರನಾಗಿದ್ದೀಯಲ್ಲ...!'

'ಹ್ಞಾಂ...!?'

'ಹ್ಞೂಂ...'

ಸಂಗತ

ಉಳಿಯಲಿ ಪ್ರಶಸ್ತಿಯ ಗೌರವ!

ಪ್ರಶಸ್ತಿಗಳನ್ನು ಮೀರಿ ಬೆಳೆದ ಹಲವು ವ್ಯಕ್ತಿತ್ವಗಳು ನಮಗೆ ಮಾದರಿಯಾಗಿವೆ

• ಮಲ್ಲಿಕಾರ್ಜುನ ಹೆಗ್ಗಳಗಿ

ನವೆಂಬರ್ ಪ್ರಶಸ್ತಿ, ಪುರಸ್ಕಾರಗಳ ತಿಂಗಳು. ಪ್ರಶಸ್ತಿಗಳು ಅರ್ಹತೆಯ ಮಾನದಂಡವಲ್ಲ ಎನ್ನುತ್ತಿದ್ದರು ಸಾಹಿತಿ ಸತ್ಯಕಾಮ.

ಹಂಪಿ ಕನ್ನಡ ವಿಶ್ವವಿದ್ಯಾಲಯವು ಬಾಗಲಕೋಟೆ ಜಿಲ್ಲೆಯ ಲೋಕಾಪುರ ಗ್ರಾಮದ 'ಶ್ರೀಕೃಷ್ಣ ಪಾರಿಜಾತ'ದ ಹಿರಿಯ ಕಲಾವಿದೆ ಯಲ್ಲವ್ವ ರೊಡ್ಡನವರ ಅವರನ್ನು 'ನಾಡೋಜ' ಪ್ರಶಸ್ತಿಗೆ ಆಯ್ಕೆ ಮಾಡಿತ್ತು. ವಿಶ್ವವಿದ್ಯಾಲಯದ ಅಧಿಕಾರಿಯು ಫೋನಿನಲ್ಲಿ ಯಲ್ಲವ್ವ ಅವರಿಗೆ ವಿಷಯ ತಿಳಿಸಿ ಅಭಿನಂದನೆ ಹೇಳಿದರು. ಘಟಿಕೋತ್ಸವಕ್ಕೆ ಆಗಮಿಸಿ ಪ್ರಶಸ್ತಿ ಸ್ವೀಕರಿಸಲು ಮನವಿ ಮಾಡಿದರು.

'ಪ್ರಶಸ್ತಿಯೊಂದಿಗೆ ಎಷ್ಟು ಹಣ ಕೊಡುತ್ತೀರಿ' ಎಂದು ಯಲ್ಲವ್ವ ನೇರವಾಗಿ ಪ್ರಶ್ನಿಸಿದರು. ಅಧಿಕಾರಿ ಬಹುಶಃ ಇಂಥ ಪ್ರಶ್ನೆ ನಿರೀಕ್ಷಿಸಿರಲಿಕ್ಕಿಲ್ಲ. ಅವರು ಸಾವರಿಸಿಕೊಂಡು 'ಇದು ಗೌರವ ಪದವಿ. ಹಣ ಕೊಡುವುದಕ್ಕೆ ನಿಯಮದಲ್ಲಿ ಅವಕಾಶವಿಲ್ಲ' ಎಂದರು. 'ನಾನು ಬಡವಿ. ನನ್ನ ಹೊಟ್ಟೆ ತುಂಬಿಸದ ಈ ಪ್ರಶಸ್ತಿ ನನಗೆ ಬೇಡ. ಮತ್ತಾರಿಗಾದರೂ ಕೊಡಿ' ಎಂದು ಹೇಳಿ ಫೋನ್ ಇಟ್ಟರು.

ಈ ಸಂಗತಿ ಲೋಕಾಪುರದ ಹಿರಿಯರಿಗೆ ಗೊತ್ತಾಗಿ, ಅವರು ಚಂದಾ ಹಣ ಕೂಡಿಸಿ ಯಲ್ಲವ್ವ ಅವರನ್ನು ಹಂಪಿಗೆ ಕಳಿಸಿ ಪ್ರಶಸ್ತಿ ಸ್ವೀಕರಿಸುವುದಕ್ಕೆ ನೆರವಾದರು. ಯಲ್ಲವ್ವ ತಾನು 'ನಾಡೋಜ ಯಲ್ಲವ್ವ' ಎಂದು ಎಲ್ಲಿಯೂ ಹೇಳಿಕೊಳ್ಳುವುದಿಲ್ಲ ಮತ್ತು ಬರೆದುಕೊಳ್ಳುವುದಿಲ್ಲ.

ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಶ್ರೀಗಳಿಗೆ ಪದ್ಮಶ್ರೀ ಪ್ರಶಸ್ತಿ ಪ್ರಕಟವಾಗಿತ್ತು. ಶ್ರೀಗಳು ಆತ್ಮಸಾಕ್ಷಿಗೆ ಬದ್ಧರಾಗಿರುವ ಸರಳ ಸಂತರು. 'ನಾವು ಸನ್ಯಾಸಿಗಳು, ನಮಗೆ ಪದವಿ- ಬಿರುದುಗಳು ಬೇಡ' ಎಂದು ವಿನಯದಿಂದ ಪ್ರಶಸ್ತಿ ನಿರಾಕರಿಸಿದರು.

ಕೆಲವು ವರ್ಷಗಳ ಹಿಂದೆ ಗುಲಬರ್ಗಾ ವಿಶ್ವವಿದ್ಯಾಲಯವು ಶ್ರೀಮಂತ ಮಠವೊಂದರ 24ರ ಹರೆಯದ ಸ್ವಾಮೀಜಿಗೆ ಗೌರವ ಡಾಕ್ಟರೇಟ್ ನೀಡಿತ್ತು. ಮಠಾಧಿಪತಿಯಾಗಿ ಎರಡು ವರ್ಷ ಕೂಡ ಆಗಿರದ ಅವರನ್ನು ಆಯ್ಕೆ ಮಾಡಿದ್ದಕ್ಕೆ ಬಹಳಷ್ಟು ಅನುಮಾನಗಳು ಸೃಷ್ಟಿಯಾಗಿದ್ದವು. ಅವರ ಸಾಧನೆಯ ಬಗ್ಗೆ ಪತ್ರಕರ್ತರು ಮತ್ತೆ ಮತ್ತೆ ಕೆಣಕಿದಾಗ ಕುಲಪತಿಯವರು ಪತ್ರಿಕಾಗೋಷ್ಠಿ ಅರ್ಧಕ್ಕೇ ನಿಲ್ಲಿಸಿ ಹೊರಟುಹೋದ ವಿಷಾದಕರ ಘಟನೆಯೂ ನಡೆಯಿತು.

ಇದು ಇಲ್ಲಿಗೇ ನಿಲ್ಲಲಿಲ್ಲ. ಘಟಿಕೋತ್ಸವದಲ್ಲಿ ಯುವ ಸ್ವಾಮೀಜಿ ಗೌರವ ಡಾಕ್ಟರೇಟ್ ಸ್ವೀಕರಿಸುವಾಗ ಅವರ ಬೆಂಬಲಿಗರು ಕುಣಿದು, ಜೈಕಾರ, ಕೇಕೆಹಾಕಿದ್ದು ಇನ್ನೊಂದು ವಿಷಾದದ ಸಂಗತಿಯಾಗಿ ದಾಖಲಾಗಿದೆ.

ಗದಗದ ಪುಣ್ಯಾಶ್ರಮದ ಡಾ. ಪುಟ್ಟರಾಜ ಗವಾಯಿಗಳಿಗೆ ಪದ್ಮಶ್ರೀ ಪ್ರಶಸ್ತಿ ಕೊಡಬೇಕೆಂದು ಭಕ್ತರು ಹೋರಾಟ ಆರಂಭಿಸಿದ್ದರು. ಹೋರಾಟ ಉಗ್ರರೂಪ ತಾಳಿತು. ಕೆಲವರು ವಾಹನಗಳನ್ನು ತಡೆದು ರಸ್ತೆ ರೋಖೊ ಚಳವಳಿ ಕೂಡ ಮಾಡಿದರು. ಗವಾಯಿಗಳಿಗೆ ಈ ಎಲ್ಲ ಸಂಗತಿ ಗೊತ್ತಾಗಿ ಅವರು 'ಇದರಿಂದ ಜನರಿಗೆ ಅನವಶ್ಯಕ ಹಿಂಸೆಯಾಗುತ್ತದೆ. ಅತ್ತೂ ಕರೆದು ಪ್ರಶಸ್ತಿ ಕೇಳುವುದು ಬೇಡ. ನನಗೆ ಬಹಳ ಅಪಮಾನವಾಗುತ್ತದೆ' ಎಂದು ತಿಳಿಹೇಳಿ ಹೋರಾಟ ನಿಲ್ಲಿಸಿದರು.

ಕಾದಂಬರಿಕಾರ ಅರ್ನೆಸ್ಟ್ ಹೆಮಿಂಗ್ವೇ ನೊಬೆಲ್ ಪ್ರಶಸ್ತಿ ಸ್ವೀಕರಿಸಲು ಹೋಗಲಿಲ್ಲ. ಆಫ್ರಿಕಾದ ದಟ್ಟ ಅರಣ್ಯದ ಏಕಾಂತ ತೊರೆದು ಹೋಗುವುದು ತಮಗೆ ಇಷ್ಟವಿಲ್ಲ ಎಂದು ಹೇಳಿ ದೂರ ಉಳಿದರು. ನೊಬೆಲ್ ಸಮಿತಿಯವರೇ ಹುಡುಕಿಕೊಂಡು ಹೋಗಿ ಪ್ರಶಸ್ತಿ ನೀಡಿ ಗೌರವಿಸಿದರು.



ಚಿಲಿ ಕವಿ ಪಾಬ್ಲೊ ನೆರೂಡ ಅವರು ನೊಬೆಲ್ ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಮಾಡಿದ ಭಾಷಣ ಎಲ್ಲ ಪ್ರಶಸ್ತಿಗಳ ಬಗೆಗಿನ ಮುನ್ನುಡಿಯಂತಿದೆ: 'ನಮ್ಮ ಮನೆಯಲ್ಲಿ ದಿನನಿತ್ಯದ ಬ್ರೆಡ್ ಸಿದ್ಧಗೊಳಿಸುವ ಬೇಕರ್‌ನೇ ಅತ್ಯುತ್ತಮ ಕವಿಯಾಗಿದ್ದಾನೆ. ನೆರೆಮನೆಯಲ್ಲಿ ಹಿಟ್ಟು ಕಲೆಸುವ ಅಡುಗೆಯವನು ಕೂಡ ಉತ್ತಮ ಕವಿ. ಆದರೆ ನೊಬೆಲ್ ನನಗೆ ಬಂದುಬಿಟ್ಟಿದೆ'.

ರಾಷ್ಟ್ರಪತಿಯಾಗಿದ್ದ ಆರ್.ವೆಂಕಟರಾಮನ್ ಅವರು ಮುಂಬೈಯಲ್ಲಿ ವಾಸವಾಗಿದ್ದ ನರ್ಸ್ ಒಬ್ಬರ ಹೆಸರನ್ನು ಪದ್ಮಶ್ರೀ ಪ್ರಶಸ್ತಿ ಆಯ್ಕೆ ಪಟ್ಟಿಯಲ್ಲಿ ಸೇರಿಸಲು ಸೂಚಿಸಿದ್ದರು. ಆ ಮಹಿಳೆಯನ್ನು ಪತ್ತೆ ಹಚ್ಚಲು ಸರ್ಕಾರಿ ಸಿಬ್ಬಂದಿ ಪರದಾಡಬೇಕಾಯಿತು. ಕೊನೆಗೆ ರಾಷ್ಟ್ರಪತಿಯವರ ಕುಟುಂಬಕ್ಕೆ ಹತ್ತಿರವಾಗಿದ್ದ ನರ್ಸ್ ಒಬ್ಬರ ಹೆಸರನ್ನು ಸೇರಿಸಲಾಯಿತು. ಆದರೆ ಆ ಪ್ರಶಸ್ತಿಯು ರಾಷ್ಟ್ರಪತಿಯವರ ಮನಸ್ಸಿನಲ್ಲಿದ್ದವರ ಬದಲಾಗಿ ಬೇರೆ ಮಹಿಳೆಯ ಪಾಲಾಗಿದ್ದುದು ತಡವಾಗಿ ಬೆಳಕಿಗೆ ಬಂದಿತು.

ನಾರ್ವೆಯ ಖ್ಯಾತ ಕವಯತ್ರಿ ಸಿಗ್ರಿಡ್ ಅನ್‌ಸೆಟ್ ಅವರಿಗೆ ಆ ದೇಶದ ಅತ್ಯುನ್ನತ ಪ್ರಶಸ್ತಿ ಪ್ರಕಟವಾಗುತ್ತಲೇ ಪತ್ರಕರ್ತರು ಸಂದರ್ಶನಕ್ಕೆ ಅವರ ಮನೆಗೆ ತೆರಳಿದಾಗ ಸಿಗ್ರಿಡ್ ಹೇಳಿದರು: 'ಕ್ಷಮಿಸಿ, ನನಗೀಗ ಮಾತನಾಡಲು ಸಮಯವಿಲ್ಲ. ಏಕೆಂದರೆ ನಾನೀಗ ನನ್ನ ಮಗುವನ್ನು ಮಲಗಿಸುತ್ತಿದ್ದೇನೆ. ನಾನು ಲಾಲಿ ಹಾಡಿದಾಗಲೇ ಅದು ಮಲಗುತ್ತದೆ. ಪ್ರಶಸ್ತಿ ಪಡೆದ ಸಂತೋಷ ನನಗಿದೆ. ಆದರೆ ಅದಕ್ಕಿಂತ ಹೆಚ್ಚಿನ ಸಂತೋಷ ನನ್ನ ಮಗುವಿನ ಪಾಲನೆ, ಪೋಷಣೆಯಲ್ಲಿ ಸಿಗುತ್ತದೆ'. ಈ ತಾಯಿಯ ವಾತ್ಸಲ್ಯ ಕಂಡು ನಿಬ್ಬೆರಗಾದ ಪತ್ರಕರ್ತರು ತುಟಿಪಿಟಿಕ್ಕೆನ್ನದೆ ಅಲ್ಲಿಂದ ತೆರಳಿದರು.

'ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ?' ಎಂಬ ಕವಿವಾಣಿ ಈ ಸಂದರ್ಭದಲ್ಲಿ ನೆನಪಾಗುತ್ತದೆ.

ವಾಚಕರ ವಾಣಿ



ಮರನೆಲ್ಲಿಗೆ ಕುತ್ತು ತರವೇ?

ಬೇರೇನೋ ಕೆಲಸಕ್ಕಾಗಿ ಇತ್ತೀಚೆಗೆ ಬೆಂಗಳೂರಿನ ಕೆ.ಆರ್. ಮಾರುಕಟ್ಟೆ ಸುತ್ತಾ ತಿರುಗಾಡಬೇಕಾಯಿತು. ಅಲ್ಲಿ ನಾನು ಕಂಡ ದೃಶ್ಯ ಕರುಣಾಜನಕವಾಗಿತ್ತು. ನೂರಾರು ನೆಲ್ಲಿ ಮರಗಳ ಕೊಂಬೆ-ರೆಂಬೆಗಳನ್ನು ಕಡಿದು ಮಾರಾಟಕ್ಕಾಗಿ ಲಾರಿಗಟ್ಟಲೆ ತಂದು ಮಾರುಕಟ್ಟೆ ತುಂಬೆಲ್ಲ ಹರಡಿದ್ದುದನ್ನು ನೋಡಿದೆ. ಇದು ರಾಜ್ಯದ ನೂರಾರು ಪಟ್ಟಣ- ನಗರಗಳಲ್ಲಿ ನಡೆದಿರಬೇಕು. ಹತ್ತಾರು ಹಳ್ಳಿಗಳಿಂದ ನಮ್ಮ ಶ್ರಮಿಕ ಬಂಧುಗಳು ತ್ರೈವರ್ಣೀಕರ ತುಳಸಿ ಮದುವೆ ಹಬ್ಬದಲ್ಲಿ ನಾಕು ದುಡ್ಡು ಮಾಡಿಕೊಳ್ಳುವ ಆಸೆಯಿಂದ ಇದರ ಮಾರಾಟಕ್ಕೆ ಎಲ್ಲೆಂದರಲ್ಲಿ ನೆಲ್ಲಿಕಾಯಿಯ ಕೊಂಬೆ-ರೆಂಬೆಗಳನ್ನು ಹರಡಿಕೊಂಡಿದ್ದರು ಮತ್ತು ರಾತ್ರಿಯೆಲ್ಲ ಪ್ರಯಾಣ ಮಾಡಿ ಆಯಾಸಗೊಂಡಿದ್ದ ಅವರು ಅದರ ಹೊರೆಯ ಮೇಲೇ ಮಲಗಿಕೊಂಡಿದ್ದರು. ತ್ರೈವರ್ಣೀಕರ ಧಾರ್ಮಿಕ ತೃಷೆಯನ್ನು ತಣಿಸುವುದಕ್ಕೆ ನೂರಾರು ಮರನೆಲ್ಲಿಯ ಹರಣ ನಡೆದಿರುವುದು ಕಂಡುಬಂತು.

ನಮ್ಮ ಪರಂಪರೆಯ ವಿನಾಶಕ ಆಯಾಮಗಳನ್ನು ತೊರೆದು ಅದರ ವಿಧಾಯಕ ಗುಣಗಳನ್ನು ರೂಢಿಸಿಕೊಳ್ಳುವ ಕ್ರಮದ ಬಗ್ಗೆ ತ್ರೈವರ್ಣೀಕರು ಯೋಚಿಸಬೇಕು. ಹತ್ತಾರು ಹಳ್ಳಿಗಳಿಂದ ನೂರಾರು ಶ್ರಮಿಕ ಬಂಧುಗಳು ಲಾರಿಗಟ್ಟಲೆ ಮರನೆಲ್ಲಿ ಕೊಂಬೆ-ರೆಂಬೆ-ಶಾಖೆಗಳನ್ನು ಕಡಿದು ಮಾರಾಟಕ್ಕೆ ತಂದಿದ್ದುದನ್ನು ಟೀಕಿಸುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಅವರಿಗೆ ಇದು ಜೀವನೋಪಾಯದ ಸಾಧನ. ಆದರೆ ಶಿಕ್ಷಿತ, ಉನ್ನತ ವರ್ಗದ ಜನರು ಹವಾಮಾನ ಬದಲಾವಣೆಯ ಭಯಾನಕ ಪರಿಣಾಮಗಳ ಪರಿವೆಯಿಲ್ಲದೆ ನೆಲ್ಲಿಗೆ ಹಾತೊರೆಯುವುದನ್ನು ಏಕೆ ಬಿಡಬಾರದು? ನಮ್ಮ ಧಾರ್ಮಿಕ ಆಚರಣೆಗೆ ಮರಗಿಡಗಳ ಹನನ ನಿಲ್ಲಬೇಕು.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಈಗಿನ ಧಾರಣೆ...

ಇಷ್ಟು ವರ್ಷಗಳ ಕಾಲ ಅಂದಿನ ಚಿನ್ನ, ಬೆಳ್ಳಿಯ ಧಾರಣೆ ಕುರಿತು ದಿನಪತ್ರಿಕೆಯಲ್ಲಿ ಓದುತ್ತಿದ್ದೆವು. ಈಗ, ಇಂದಿನ ಪೆಟ್ರೋಲ್, ಡೀಸೆಲ್ ಬೆಲೆ ನೋಡುವ ಕಾಲ ಬಂದಿದೆ! ಕಾಲಾಯ ತಸ್ಮೈ ನಮಃ.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

ಕಸಾಪ: ಹಂಗಿಗೆ ಒಳಗಾಗುವುದು ಬೇಡ

ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯು ಪಕ್ಷ ರಾಜಕಾರಣದಿಂದ ಹೊರತಾಗಿರಲಿ ಎಂಬುದು ಪರಿಷತ್ತನ್ನು ಕಟ್ಟಿದವರ ಆಶಯ. ಇಂದು ಪರಿಷತ್ತಿನ ಸದಸ್ಯರನ್ನು ಓಲೈಸಲು ರಾಜಕಿಯ ಪಕ್ಷದವರನ್ನು ಸೇರಿಸಿಕೊಳ್ಳುವ ದುರಂತ ವ್ಯವಸ್ಥೆ ನಿರ್ಮಾಣವಾಗಿದೆ. ಮತ್ತೊಂದು ಕಡೆ, ಮತ ಚಲಾಯಿಸುವ ದಿನದಂದು, ಕ್ರಮಸಂಖ್ಯೆ ನೀಡುವ ನೆಪದಲ್ಲಿ ಶಾಮಿಯಾನ ಹಾಕಿ ಊಟ, ತಿಂಡಿ ನೀಡುವ ವ್ಯವಸ್ಥೆ ಮಾಡಲಾಗುತ್ತದೆ. ಇದರಿಂದ ಸದಸ್ಯರಿಗೆ ಯಾವ ಶಾಮಿಯಾನದ ಬಳಿ ಹೋದರೂ ಮತ್ತೊಬ್ಬನಿಗೆ ನಿಷ್ಠುರ, ಮತ ಹಾಕಿ ಬಂದ ಮೇಲೆ ಮುಜುಗರ, ದ್ವೇಷವೂ ಬೆಳೆದು ಬಿಡುತ್ತದೆ.

ಪ್ರಬುದ್ಧರಪರಿಷತ್‌ಪ್ರಬುದ್ಧವಾಗಿಯೇಇರಲಿ.ಕಾಲಬದಲಾಗಿದೆ.ಮೊಬೈಲ್‌ನಲ್ಲಿಕ್ರಮಸಂಖ್ಯೆಕಳುಹಿಸಿದರೆಸಾಕು, ಗುರುತಿನ ಚೀಟಿಯೊಂದಿಗೆ ಗುಪ್ತ ಮತದಾನ ಮಾಡಬಹುದು. ಹಾಗಾಗಿ ದಯಮಾಡಿ ಸಂಬಂಧಪಟ್ಟ ಚುನಾವಣಾ ಅಧಿಕಾರಿಗಳು ಇತ್ತ ಗಮನಹರಿಸಬೇಕು. ಪ್ರಸ್ತುತ ಕೋವಿಡ್ ನಿಯಮವನ್ನು ಪಾಲಿಸಬೇಕಾಗಿರುವುದರಿಂದ ಶಾಮಿಯಾನ ಹಾಕಿ ಮತ್ತೊಬ್ಬನ ಕೈಯಿಂದ ಚೀಟಿ, ಊಟ, ತಿಂಡಿ, ಕೊಡುವ ವ್ಯವಸ್ಥೆಯನ್ನು ರದ್ದುಪಡಿಸಬೇಕು.

ಜಿ.ಪಳನಿಸ್ವಾಮಿ ಜಾಗೇರಿ, ಕೊಳ್ಳೇಗಾಲ

ಹೆಸರಿನಿಂದ ರಾಜಕೀಯವೇಕೆ?

'ಹೆಸರಿನಿಂದ ಪ್ರಿಯಾಂಕ್ ಖರ್ಗೆ ಹೆಣ್ಣೋ ಗಂಡೋ ತಿಳಿಯುವುದಿಲ್ಲ' ಎಂದು ಸಂಸದ ಪ್ರತಾಪ ಸಿಂಹ ಲೇವಡಿ ಮಾಡಿರುವುದು ದಿನವಿಡೀ ದೃಶ್ಯಮಾಧ್ಯಮದಲ್ಲಿ ಪ್ರಸಾರಗೊಂಡಿತು. ಈ ಬಗೆಯ ಹೆಸರುಗಳು ಅಸಂಖ್ಯ ಇವೆ. ವಿಜಯಾ ಎಂದರೆ ಸ್ತ್ರೀಲಿಂಗ, ವಿಜಯ್ ಎಂದರೆ ಪುಲ್ಲಿಂಗ. ಪ್ರಿಯಾಂಕಾ ಹೆಣ್ಣು, ಪ್ರಿಯಾಂಕ್ ಗಂಡು, ಮನೀಷಾ ಹೆಣ್ಣಾದರೆ, ಮನೀಷ್ ಗಂಡು...

ಇನ್ನು ಕೆಲ ಹೆಸರುಗಳು ಉಭಯ ಲಿಂಗಕ್ಕೂ ಸೈ. ಉದಾಹರಣೆಗೆ: ಕಿರಣ, ಕೀರ್ತಿ ಇತ್ಯಾದಿ. ದಶಕಗಟ್ಟಲೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದ ಜ್ಯೋತಿ ಬಸು ಅವರ ಸಾಧನೆಗೆ ಹೆಸರು ಅಡ್ಡಿಯಾಗಿತ್ತೇ? ಹತಾಶೆ, ಅಸಹನೆ, ಕಸಿವಿಸಿ ನಮ್ಮ ಸಂಯಮವನ್ನು ಕಸಿಯಬಾರದು. ಘನತೆಯುಳ್ಳ ಸ್ಥಾನದಿಂದ ಘನತೆಯುಳ್ಳ ಮಾತುಗಳಿರಲಿ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಬಿಟ್‌ಕಾಯಿನ್ ಹಗರಣ: ನಾಯಕರು ಹೊಣೆಯರಿಯಲಿ

ರಾಜ್ಯದಲ್ಲಿ ಪ್ರಸ್ತುತ ಬೆಳಕಿಗೆ ಬಂದಿರುವ ಬಿಟ್‌ಕಾಯಿನ್ ಹ್ಯಾಕಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಆಡಳಿತಾರೂಢ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ಮುಖಂಡರ ನಡುವೆ ದಿನೇ ದಿನೇ ನಡೆಯುತ್ತಿರುವ ವಾಕ್ಸಮರವು ರಾಜ್ಯದ ಜನರ ಗಮನ ಸೆಳೆಯುತ್ತಿದೆ.

ಚಿಕ್ಕ ವಯಸ್ಸಿನ ವಂಚಕ ಶ್ರೀಕೃಷ್ಣ ಸರ್ಕಾರಿ ಸಂಸ್ಥೆಗಳ ವೆಬ್‌ಸೈಟ್‌ಗಳಿಗೆ ಕನ್ನ ಹಾಕಿ ಸಾವಿರಾರು ಕೋಟಿ ರೂಪಾಯಿ ವಂಚನೆ ಮಾಡಿರುವುದು ಆಶ್ಚರ್ಯದ ಸಂಗತಿ. ಆದರೆ ಸರ್ಕಾರ ಹಾಗೂ ಆಡಳಿತಾರೂಢ ಬಿಜೆಪಿ ನಾಯಕರು ಹ್ಯಾಕರ್‌ನಿಂದ ಸರ್ಕಾರ ಮತ್ತು ಸಾರ್ವಜನಿಕರಿಗೆ ಆದ ನಷ್ಟಕ್ಕೆ ನ್ಯಾಯ ಒದಗಿಸುವ ಪ್ರಯತ್ನ ಮಾಡುವ ಬದಲು, ಸರ್ಕಾರದ ಮೇಲೆ ಗಂಭೀರ ಆರೋಪ ಮಾಡುತ್ತಿರುವ ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರ ಮೇಲೆ ತಿರುಗಿ ಬೀಳುತ್ತಿರುವುದು ಹಾಸ್ಯಾಸ್ಪದ ಸಂಗತಿ.

ಮತ್ತೊಂದೆಡೆ, ಆರೋಪಿ ಶ್ರೀಕೃಷ್ಣನನ್ನು ರಕ್ಷಿಸುವ ಕೆಲಸ ನಡೆಯುತ್ತಿದೆ. ಇದರಿಂದ ರಾಜ್ಯದ ರಾಜಕೀಯ ವ್ಯವಸ್ಥೆ ಎಷ್ಟು ಅಧೋಗತಿಗೆ ಇಳಿದಿದೆ ಎಂದು ತಿಳಿಯುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆಡಳಿತ ಹಾಗೂ ವಿರೋಧ ಪಕ್ಷಗಳ ನಾಯಕರು ಜವಾಬ್ದಾರಿ ಮೆರೆಯಲಿ.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದ್ರಾವಿಡ್ ಮುಂದೆ ಸವಾಲುಗಳ ಸಾಲು

ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ಇಂದಿನಿಂದ ಹೊಸ ಇನಿಂಗ್ಸ್



ರಾಹುಲ್ ದ್ರಾವಿಡ್

• ಗಿರೀಶ ದೊಡ್ಡಮನಿ

ಮಾಜಿ ಕ್ರಿಕೆಟಿಗ ರಾಹುಲ್ ಶರದ್ ದ್ರಾವಿಡ್ ಈಗ ಹೊಸ ಅವತಾರದೊಂದಿಗೆ ಕಣಕ್ಕಿಳಿಯುತ್ತಿದ್ದಾರೆ.


ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿರುವ ಬೆಂಗಳೂರಿನ ದ್ರಾವಿಡ್ ಬುಧವಾರದಿಂದ ಆರಂಭವಾಗಲಿರುವ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟಿ20 ಸರಣಿಯೊಂದಿಗೆ ಕಾರ್ಯಾರಂಭ ಮಾಡಲಿದ್ದಾರೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ (ಯುಎಇ) ನಡೆದ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಭಾರತವು ಸೆಮಿಫೈನಲ್ ಕೂಡ ಪ್ರವೇಶಿಸಲಾಗದೇ ನಿರ್ಗಮಿಸಿತ್ತು. ತಾರಾವರ್ಚಸ್ಸಿನ ಹಿರಿಯ ಆಟಗಾರರು ಮತ್ತು ಪ್ರತಿಭಾನ್ವಿತ ಯುವ ಆಟಗಾರರು ಇದ್ದ ತಂಡವೇ ಹೀನಾಯ ಸೋಲು ಅನುಭವಿಸಿದ್ದು ವಿಪರ್ಯಾಸ.

ಕಳೆದ ನಾಲ್ಕು ವರ್ಷ ಮುಖ್ಯ ಕೋಚ್ ಆಗಿದ್ದ ರವಿಶಾಸ್ತ್ರಿಯ ಅವಧಿಯಲ್ಲಿ ತಂಡವು ಮಾಡಿರುವ ಸಾಧನೆಗಳನ್ನು ಮೀರಿ ನಿಲ್ಲುವ ಪ್ರಮುಖ ಸವಾಲು ದ್ರಾವಿಡ್ ಮುಂದಿದೆ. ಈ ಹೊತ್ತಿನಲ್ಲಿಯೇ ವಿರಾಟ್ ಕೊಹ್ಲಿ ಟಿ20 ತಂಡದ ನಾಯಕತ್ವವನ್ನು ಬಿಟ್ಟುಕೊಟ್ಟಿದ್ದಾರೆ. ಹೊಸ ನಾಯಕನಾಗಿ ರೋಹಿತ್ ಶರ್ಮಾ ನೇಮಕವಾಗಿದ್ದಾರೆ. ಭಾರತ ತಂಡದ ಕೋಚ್ ಹುದ್ದೆಯಲ್ಲಿ ಅಪಾರ ಖ್ಯಾತಿ ಮತ್ತು ಹಣ ಇದೆ. ಜತೆಗೆ, ಬಹುದೊಡ್ಡ ಹೊಣೆಗಾರಿಕೆ, ಸವಾಲುಗಳೂ ಇವೆ. ಈ ಹಾದಿಯಲ್ಲಿ ದ್ರಾವಿಡ್ ಅವರು ಹೇಗೆ ಸಾಗಲಿದ್ದಾರೆ ಎಂಬುದು ಈಗ ಕುತೂಹಲ ಮೂಡಿಸಿದೆ.

• ಇಬ್ಬರು ನಾಯಕರೊಂದಿಗೆ ಸಮನ್ವಯ

ಸೌರವ್ ಗಂಗೂಲಿ ನಾಯಕರಾಗಿದ್ದಾಗ ಆಗಿನ ಕೋಚ್ ಗ್ರೆಗ್ ಚಾಪೆಲ್ ನಡುವೆ ನಡೆದಿದ್ದ ಜಟಾಪಟಿಯು ಕ್ರಿಕೆಟ್ ಕ್ಷೇತ್ರದಲ್ಲಿ ಇಂದಿಗೂ ಚರ್ಚೆಗೆ ಗ್ರಾಸವಾಗುತ್ತಿದೆ. ಅದನ್ನು ಬಿಟ್ಟರೆ, ವಿರಾಟ್ ಕೊಹ್ಲಿ ಮತ್ತು ಅನಿಲ್ ಕುಂಬ್ಳೆ ನಡುವಣ ವಿವಾದ ಕೂಡ ಕ್ರಿಕೆಟ್ ವಲಯದಲ್ಲಿ ಬೇಸರ ಮೂಡಿಸಿದ್ದು ನಿಜ. ಆದರೆ, ಇಲ್ಲಿಯವರೆಗೆ ಭಾರತ ತಂಡಕ್ಕೆ ಕೋಚ್ ಆಗಿ ಬಂದವರಿಗೆಲ್ಲರಿಗೂ ಒಬ್ಬ ನಾಯಕನೊಂದಿಗೆ ಕಾರ್ಯನಿರ್ವಹಿಸುವ ಸವಾಲಿತ್ತು. ಆದರೆ, ದ್ರಾವಿಡ್ ಮುಂದೆ ಇಬ್ಬರು ನಾಯಕರಿದ್ದಾರೆ.

ಟೆಸ್ಟ್ ಮತ್ತು ಏಕದಿನ ತಂಡಗಳಿಗೆ ವಿರಾಟ್ ಕೊಹ್ಲಿ ಮತ್ತು ಟಿ20 ತಂಡಕ್ಕೆ ರೋಹಿತ್ ಶರ್ಮಾ ನಾಯಕರಾಗಿದ್ದಾರೆ. ನ್ಯೂಜಿಲೆಂಡ್ ಎದುರಿನ ಚುಟುಕು ಸರಣಿಯಲ್ಲಿ ವಿರಾಟ್ ಆಡುತ್ತಿಲ್ಲ. ರೋಹಿತ್ ಮೊದಲ ಟೆಸ್ಟ್‌ನಲ್ಲಿ ಆಡುತ್ತಿಲ್ಲ. ಆದ್ದರಿಂದ ಮೊದಲ ಸರಣಿಯಲ್ಲಿ ದ್ರಾವಿಡ್‌ಗೆ ಹೆಚ್ಚು ಕಷ್ಟವಾಗಲಿಕ್ಕಿಲ್ಲ. ಆದರೆ, ಮುಂದಿನ ತಿಂಗಳು ವಿದೇಶಕ್ಕೆ



ರವಿಶಾಸ್ತ್ರಿ

ತಂಡವು ತೆರಳಲಿದ್ದು ಅಲ್ಲಿ ನಿಜವಾದ ಸವಾಲು ಎದುರಾಗಬಹುದು. ಅವರಿಬ್ಬರ ಅನುಭವ ಮತ್ತು ಕೌಶಲಗಳನ್ನು ಸಮರ್ಥವಾಗಿ ಬಳಸಿಕೊಳ್ಳುವತ್ತ ದ್ರಾವಿಡ್ ಚಿತ್ತ ಹರಿಸುವ ಸಾಧ್ಯತೆಯೇ ಹೆಚ್ಚು. ಇದರಿಂದ ತಂಡಕ್ಕೂ ಹೆಚ್ಚಿನ ಲಾಭ ಸಿಗಲಿದೆ. ತಂಡವು ಗೆಲುವಿನ ಹಾದಿಯಲ್ಲಿ ಸಾಗುತ್ತಿರುವಷ್ಟೂ ದಿನ ಟೀಕೆಗಳು ಸಮೀಪ ಸುಳಿಯುವುದಿಲ್ಲ. ತಂಡವು ಗೆಲ್ಲುತ್ತಲೇ ಇದ್ದರೆ, ಡ್ರೆಸ್ಸಿಂಗ್ ಕೋಣೆಯಲ್ಲಿ 'ಶಾಂತ ವಾತಾವರಣ' ನಿರ್ಮಿಸಲು ದ್ರಾವಿಡ್ ಸಫಲರಾಗುವುದು ಖಚಿತ.

• ನವನಾಯಕರನ್ನು ರೂಪಿಸುವ ಹೊಣೆ

ಭಾರತ ತಂಡದ ಭವಿಷ್ಯದ ನಾಯಕರನ್ನು ರೂಪಿಸುವ ಪ್ರಮುಖ ಸವಾಲು ಕೂಡ ದ್ರಾವಿಡ್ ಮುಂದೆ ಇದೆ. ಏಕೆಂದರೆ ಕೊಹ್ಲಿಗೆ 33 ವರ್ಷ ಮತ್ತು ಶರ್ಮಾಗೆ 34 ವರ್ಷ ವಯಸ್ಸಾಗಿದೆ. ಇನ್ನು ಕೆಲವು ವರ್ಷಗಳಲ್ಲಿ ಅವರು ನಿವೃತ್ತಿಯತ್ತ ವಾಲಬಹುದು. ಆದ್ದರಿಂದ ಯುವ ಆಟಗಾರರಲ್ಲಿಯೇ ನಾಯಕತ್ವದ ಪ್ರತಿಭೆ ಇರುವವರನ್ನು ಬೆಳೆಸುವ ಹೊಣೆ ಕೋಚ್ ಮೇಲೆ ಬೀಳಲಿದೆ. 30 ವರ್ಷದ ಕೆ.ಎಲ್. ರಾಹುಲ್, 24 ವರ್ಷದ ರಿಷಭ್ ಪಂತ್ ಮತ್ತು 26 ವರ್ಷದ ಶ್ರೇಯಸ್ ಅಯ್ಯರ್ ಅವರು ಎರಡನೇ ಸಾಲಿನಲ್ಲಿರುವ 'ನಾಯಕ'ರೆಂದು ಹೇಳಲಾಗುತ್ತಿದೆ. 2018ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ಭಾರತ ತಂಡಕ್ಕೆ ಪೃಥ್ವಿ ಶಾ ಮತ್ತು 2016ರಲ್ಲಿ ಇಶಾನ್ ಕಿಶನ್ ಅವರನ್ನು ನಾಯಕರನ್ನಾಗಿ ನೇಮಕ ಮಾಡುವಲ್ಲಿ ದ್ರಾವಿಡ್ ಪಾತ್ರವಿತ್ತು. ಈಗಲೂ ಅವರ ಮೇಲೆ ಅಂತಹದ್ದೇ ನಿರೀಕ್ಷೆ ಇರುವುದು ಸಹಜ.

ಆದರೆ ಈಗಿನ ಬಹಳಷ್ಟು ಆಟಗಾರರು ಸೀನಿಯರ್ ತಂಡಕ್ಕೆ ಕಾಲಿಡುವ ಮೊದಲೇ ಇಂಡಿಯನ್ ಪ್ರೀಮಿಯರ್ ಲೀಗ್ ಸೇರಿದಂತೆ ಹಲವು ಪ್ರಮುಖ ಟೂರ್ನಿಗಳಲ್ಲಿ ಆಡಿರುತ್ತಾರೆ. ಹಣ ಮತ್ತು ಖ್ಯಾತಿಯನ್ನು ಹೊತ್ತು ತಂದಿರುತ್ತಾರೆ. ಅವರೆಲ್ಲರನ್ನೂ ಒಂದೇ ಸೂರಿನಡಿಯಲ್ಲಿ ಸಮಚಿತ್ತದಿಂದ ದುಡಿಸಿಕೊಳ್ಳುವ ಮನೋದಾರ್ಢ್ಯ ದ್ರಾವಿಡ್‌ಗೆ ಇದೆ ಎಂಬ ವಿಶ್ವಾಸದಿಂದಲೇ ಬಿಸಿಸಿಐ ಅವರಿಗೆ ಹೊಣೆ ನೀಡಿದೆ.



ವಿರಾಟ್ ಕೊಹ್ಲಿ ಮತ್ತು ಅನಿಲ್ ಕುಂಬ್ಳೆ –ಪಿಟಿಐ ಚಿತ್ರ

ವಿದೇಶಿಗರಿಗಿಲ್ಲ ಮಣೆ

ಭಾರತ ತಂಡಕ್ಕೆ ವಿದೇಶಿ ಕೋಚ್‌ಗಳನ್ನು ನೇಮಕ ಮಾಡುವ ಪರಿಪಾಟಕ್ಕೆ ಪೂರ್ಣವಿರಾಮ ಬಿದ್ದಂತಾಗಿದೆ.

2015ರ ವಿಶ್ವಕಪ್ ಟೂರ್ನಿಯ ನಂತರ ತಂಡದ ಕೋಚ್ ಆಗಿದ್ದ ಡಂಕನ್ ಫ್ಲೆಚರ್ ನಿರ್ಗಮಿಸುವುದರೊಂದಿಗೆ ಭಾರತೀಯ ಕೋಚ್‌ಗಳ ನೇಮಕಕ್ಕೆ ಆದ್ಯತೆ ನೀಡಲಾಗುತ್ತಿದೆ. ಫ್ಲೆಚರ್ ನಂತರ ಸ್ವಲ್ಪ ಅವಧಿಗೆ ರವಿಶಾಸ್ತ್ರಿ ನೇಮಕವಾಗಿದ್ದರು. ಅವರ ನಂತರ ಕುಂಬ್ಳೆ ಆದರು. ನಂತರ 2017ರಲ್ಲಿ ಮತ್ತೆ ಶಾಸ್ತ್ರಿ ಮರಳಿದ್ದರು. ಇದೀಗ ರಾಹುಲ್ ನೇಮಕವಾಗಿವೆ.

ಕೋಚ್	ಅವಧಿ	ತವರು ದೇಶ
ಜಾನ್ ರೈಟ್	2000–05	ನ್ಯೂಜಿಲೆಂಡ್
ಗ್ರೆಗ್ ಚಾಪೆಲ್	2005–07	ಆಸ್ಟ್ರೇಲಿಯಾ
ಲಾಲ್‌ಚಂದ್ ರಜಪೂತ್	2007–08	ಭಾರತ
ಗ್ಯಾರಿ ಕರ್ಸ್ಟನ್	2008–11	ದಕ್ಷಿಣ ಆಫ್ರಿಕಾ
ಡಂಕನ್ ಫ್ಲೆಚರ್	2011–15	ಜಿಂಬಾಬ್ವೆ
ರವಿಶಾಸ್ತ್ರಿ	2015–16	ಭಾರತ
ಸಂಜಯ್ ಬಾಂಗರ್	2016	ಭಾರತ
ಅನಿಲ್ ಕುಂಬ್ಳೆ	2016–17	ಭಾರತ
ರವಿಶಾಸ್ತ್ರಿ	2017–21	ಭಾರತ
ರಾಹುಲ್ ದ್ರಾವಿಡ್	2021ರಿಂದ	ಭಾರತ

• ಮಾದರಿ ಕೇಂದ್ರಿತ ತಂಡ ರಚನೆ

ವರ್ಷದಿಂದ ವರ್ಷಕ್ಕೆ ಕ್ರಿಕೆಟ್‌ನ ಮೂರು ಮಾದರಿಗಳಲ್ಲಿಯೂ ಪಂದ್ಯಗಳ ಸಂಖ್ಯೆ ಹೆಚ್ಚುತ್ತಿದೆ. ಐಸಿಸಿ ವಿಶ್ವಕಪ್ ಟೂರ್ನಿಗಳು ಎಲ್ಲ ಮಾದರಿಗಳಲ್ಲಿಯೂ ನಡೆಯುತ್ತಿವೆ. ಆದ್ದರಿಂದ ಪ್ರತಿಯೊಂದು ಮಾದರಿಗೂ ಪರಿಣತರನ್ನು ರೂಪಿಸುವ ಒತ್ತಡ ಇದೆ. ಎಲ್ಲ ಮಾದರಿಗಳಲ್ಲಿಯೂ ಒಂದೇ ರೀತಿಯ ಸಾಮರ್ಥ್ಯ ತೋರುವುದು ಎಲ್ಲರಿಗೂ ಸಾಧ್ಯವಿಲ್ಲ. ಆದ್ದರಿಂದ ಆಟಗಾರರಲ್ಲಿರುವ ವೈಶಿಷ್ಟ್ಯವನ್ನು ಗುರುತಿಸಿ ಅವರಿಗೆ ಯಾವ ಮಾದರಿಯಲ್ಲಿ ಅವಕಾಶ ನೀಡಿದರೆ ಒಳಿತು ಎಂಬ ನಿರ್ಧಾರ ಕೈಗೊಳ್ಳುವುದು ಕೂಡ ಕೋಚ್ ಮುಂದಿರುವ ಸವಾಲು. ಇದರ ಜೊತೆಗೆ ಮೂರು ಮಾದರಿಗಳಲ್ಲಿಯೂ ತಂಡವನ್ನು ಸದೃಢಗೊಳಿಸುವುದು ಪ್ರಮುಖ ಉದ್ದೇಶವಾಗಲಿದೆ.

• ಐಸಿಸಿ ಪ್ರಶಸ್ತಿ ಬರ ನೀಗಿಸುವುದು

ಮಹೇಂದ್ರಸಿಂಗ್ ಧೋನಿ ನಾಯಕತ್ವದ ಭಾರತ ತಂಡವು 2011ರಲ್ಲಿ ಏಕದಿನ ವಿಶ್ವಕಪ್ ಗೆದ್ದ ನಂತರ ಬೇರೆ ಯಾವ ಐಸಿಸಿ ಟ್ರೋಫಿಯನ್ನೂ ಜಯಿಸಲು ಸಾಧ್ಯವಾಗಿಲ್ಲ. ಟಿ20, ಏಕದಿನ ಮತ್ತು ಟೆಸ್ಟ್ ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಫೈನಲ್, ಸೆಮಿಫೈನಲ್ ಹಂತಕ್ಕೆ ಹೋಗಿದ್ದರೂ ಪ್ರಶಸ್ತಿ ಕನಸು ಕೈಗೂಡಿರಲಿಲ್ಲ. ಅನಿಲ್ ಕುಂಬ್ಳೆ, ರವಿಶಾಸ್ತ್ರಿ ಅವರ ಮಾರ್ಗದರ್ಶನದಲ್ಲಿ ತಂಡವು ಪ್ರಶಸ್ತಿ ಸನಿಹ ಹೋಗಿತ್ತು. ಆದರೆ, ಟ್ರೋಫಿಗೆ ಮುತ್ತಿಕ್ಕುವ ಮಟ್ಟಕ್ಕೆ ತಂಡವನ್ನು ಬೆಳೆಸುವ ಹೊಣೆಯನ್ನು ದ್ರಾವಿಡ್ ನಿರ್ವಹಿಸಬೇಕಿದೆ. ಅವರು ಮುಂಬರುವ ಒಂದು ವರ್ಷದಲ್ಲಿ ಮಾಡಲಿರುವ ಯೋಜನೆಗಳು ಮತ್ತು ಕೆಲಸಗಳ ಫಲಿತಾಂಶವು ಮುಂದಿನ ಅಕ್ಟೋಬರ್–ನವೆಂಬರ್‌ನಲ್ಲಿ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ವೇದಿಕೆಯಲ್ಲಿ ಮತ್ತು 2023ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಕಾಣಿಸಬಹುದು.

ವಿವಾದದ ಪಿಚ್‌ನಲ್ಲಿ ಕೋಚ್‌ಗಳು ಔಟಾದಾಗ...

• ವಿಕ್ರಂ ಕಾಂತಿಕೆರೆ

'ಬಂಗಾಳ' ಹುಲಿ ಸೌರವ್ ಗಂಗೂಲಿ–ಆಸ್ಟ್ರೇಲಿಯಾದ ಗ್ರೆಗ್ ಚಾಪೆಲ್, ಲೆಗ್ ಸ್ಪಿನ್ ಮಾಂತ್ರಿಕ ಅನಿಲ್ ಕುಂಬ್ಳೆ–ಕೆಚ್ಚೆದೆಯ ವಿರಾಟ್ ಕೊಹ್ಲಿ, 'ಮಾಸ್ಟರ್ ಬ್ಲಾಸ್ಟರ್' ಸಚಿನ್ ತೆಂಡೂಲ್ಕರ್–'ಡೆವಿಲ್ಸ್' ನಾಯಕ ಕಪಿಲ್ ದೇವ್... ಭಾರತ ಕ್ರಿಕೆಟ್ ತಂಡದ ಕೋಚ್ ವಿಷಯ ಚರ್ಚೆಗೆ ಬಂದಾಗಲೆಲ್ಲ ವಿವಾದದ ಕಾರಣಕ್ಕೆ ಇವರು ನೆನಪಾಗುತ್ತಾರೆ. ಆಟಗಾರರ ನಿವೃತ್ತಿ ಮತ್ತು ಕೋಚ್ ಆಗಿದ್ದವರು ಹುದ್ದೆಯಿಂದ ನಿರ್ಗಮಿಸಿದ ನಂತರ ಕೆಲವು ವಿವಾದಗಳು 'ಸುದ್ದಿ'ಯಾದದ್ದೂ ಉಂಟು.

ಕೋಚ್‌ಗೆ ಸಂಬಂಧಿಸಿದ ವಿವಾದಗಳ ಪೈಕಿ ಹೆಚ್ಚು ಗಮನ ಸೆಳೆದದ್ದು ಗ್ರೆಗ್ ಚಾಪೆಲ್ ಮತ್ತು ಗಂಗೂಲಿ ನಡುವಿನದು. ಆಟಗಾರರ ಆಯ್ಕೆ ವಿಷಯದಲ್ಲಿ ಉಂಟಾದ ಹಗ್ಗ–ಜಗ್ಗಾಟವು ಗಂಗೂಲಿ ನಾಯಕತ್ವಕ್ಕೆ ಕುತ್ತು ತಂದಿತ್ತು. ಪ್ರತಿಭಟನೆಗಳು ನಡೆದವು. ವಿವಾದವು ಸಂಸತ್ತಿನವರೆಗೂ ತಲುಪಿತು. ಸಂಸದರ ವಿರುದ್ಧವೂ ಚಾಪೆಲ್ ಹರಿಹಾಯ್ದರು. ಕೊನೆಗೆ ಹುದ್ದೆ ಕಳೆದುಕೊಂಡರು.

ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಎದುರು ಮೇಲುಗೈ ಸಾಧಿಸಿದ್ದೂ ಸೇರಿದಂತೆ ಕುಂಬ್ಳೆ ಅವಧಿಯಲ್ಲಿ ತಂಡ ಮೈಲುಗಲ್ಲುಗಳನ್ನು ಸ್ಥಾಪಿಸಿತು. ಆದರೆ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಪಾಕಿಸ್ತಾನ ಎದುರಿನ ಸೋಲು ತಂಡಕ್ಕೆ ಮಾರಕವಾಯಿತು. ನಾಯಕನೊಂದಿಗೆ ಹೊಂದಾಣಿಕೆ ಸಾಧ್ಯವಾಗುತ್ತಿಲ್ಲ ಎಂದು ಹೇಳಿ ಕುಂಬ್ಳೆ ರಾಜೀನಾಮೆ ನೀಡಿದರು.

ರವಿಶಾಸ್ತ್ರಿ ಅವರ ಆಯ್ಕೆಯೇ ವಿವಾದವಾಯಿತು. ನಿಯಮ ಗಾಳಿಗೆ ತೂರಿ ಅವರನ್ನು ನೇಮಕ ಮಾಡಲಾಗಿದೆ ಎಂಬ ದೂರುಗಳು ಕೇಳಿಬಂದವು. ಶಾಸ್ತ್ರಿ ಅವರು ವಿರಾಟ್ ಕೊಹ್ಲಿ ಹೇಳಿದಂತೆ ಕೇಳುವವರಾದ್ದರಿಂದ 'ಅಡ್ಡದಾರಿ' ಮೂಲಕ ನೇಮಕ ಮಾಡಿಕೊಳ್ಳಲಾಗಿದೆ ಎಂಬ ಆರೋಪಗಳು ಎದ್ದವು. ಕಪಿಲ್ ದೇವ್ ಮತ್ತು ಸಚಿನ್ ನಡುವೆಯೂ ವಿವಾದ ಉಂಟಾಗಿತ್ತು. ಅದು ಬೆಳಕಿಗೆ ಬಂದದ್ದು ವರ್ಷಗಳ ನಂತರ. ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ ತಂಡವು ಉತ್ತಮ ಆರಂಭ ಕಂಡಿದ್ದರೂ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಎದುರಿನ ಸರಣಿಗಳಲ್ಲಿನ ಹೀನಾಯ ಸೋಲು ಕಪಿಲ್‌ಗೆ ಮುಳುವಾಯಿತು. ಅವರು ಮ್ಯಾಚ್ ಫಿಕ್ಸಿಂಗ್ ಮಾಡಿದ್ದಾರೆ ಎಂದು ಮಾಜಿ ಆಟಗಾರ ಮನೋಜ್ ಪ್ರಭಾಕರ್ ದೂರಿದರು. ಕಪಿಲ್ ರಾಜೀನಾಮೆ ನೀಡಿದರು. ಕಪಿಲ್ ಎಲ್ಲ ಜವಾಬ್ದಾರಿಯನ್ನು ನಾಯಕನ ಹೆಗಲ ಮೇಲೆ ಹೊರಿಸಿ ಸುಮ್ಮನಾಗುತ್ತಿದ್ದರು ಎಂದು ಸಚಿನ್ ಆತ್ಮಚರಿತ್ರೆಯಲ್ಲಿ ಆರೋಪ ಮಾಡಿದರು.

ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 8

ವೀರಭದ್ರ ತಾರಕ ಯುದ್ಧ

ತಾರಕಾಸುರನ ಮೇಲೆ ದೇವೇಂದ್ರನು ಶ್ರೇಷ್ಠವಾದ ತನ್ನ ಶಕ್ತ್ಯಾಯುಧ ದಿಂದ ಯುದ್ಧ ಮಾಡಿದರೂ, ತಾರಕಾಸುರನ ಹೊಡೆತಕ್ಕೆ ತನ್ನ ಆನೆಯಿಂದ ಕೆಳಗೆ ಬಿದ್ದು ಮೂರ್ಛಿತನಾದ. ಇತ್ತ ಲೋಕಪಾಲಕರೆಲ್ಲರೂ ಮಹಾಯುದ್ಧವಿಶಾರದರಾದ ದಾನವರೊಡನೆ ಯುದ್ಧಮಾಡಿ ಸೋತರು. ಇನ್ನೂ ಕೆಲ ದೇವತೆಗಳೂ ದೈತ್ಯರೊಡನೆ ಯುದ್ಧಮಾಡಲಾಗದೆ ರಣರಂಗದಿಂದ ಓಡಿದರು. ಇದರಿಂದ ಅಸುರರು ಜಯೋತ್ಸಾಹದಿಂದ ಸಿಂಹನಾದವನ್ನು ಮಾಡುತ್ತಾ ಕೋಲಾಹಲವನ್ನೆಬ್ಬಿಸಿದರು. ಇದನ್ನೆಲ್ಲಾ ನೋಡುತ್ತಿದ್ದ ವೀರಭದ್ರನು ಅತ್ಯಂತ ಕೋಪದಿಂದ ವೀರರಾದ ತನ್ನ ಸೈನಿಕರೊಂದಿಗೆ ಬಂದು ತಾರಕಾಸುರನನ್ನು ಎದುರಿಸಿದನು. ಶಿವನ ಕೋಪದಿಂದ ಹುಟ್ಟಿದ ಆ ವೀರಭದ್ರನು ದೇವತೆಗಳನ್ನು ಹಿಂದಿರಿಸಿಕೊಂಡು ತಾರಕನೊಡನೆ ಭಯಂಕರ ದ್ವಂದ್ವ ಯುದ್ಧ ಮಾಡಿದ. ಆಗ ಪ್ರಮಥಗಣಗಳು ಮತ್ತು ದೈತ್ಯರ ನಡುವೆ ಭೀಕರ ಯುದ್ಧವಾಯಿತು. ರಣವಿಶಾರದ-ರಾದ ಉಭಯತರು ತ್ರಿಶೂಲ, ಖುಷ್ಟ್ಯಾಯುಧ, ಪಾಶಾಯುಧ, ಖಡ್ಗಾಯುಧ, ಪರಶು, ಪಟ್ಟಿಶ ಮುಂತಾದ ಆಯುಧಗಳಿಂದ ಹೊಡೆದಾಡಿದರು.

ವೀರಭದ್ರನು ತ್ರಿಶೂಲಾಯುಧವನ್ನು ತಾರಕಾಸುರನ ಮೇಲೆ ಪ್ರಯೋಗಿಸಿದಾಗ ಆತ ನೆಲಕ್ಕೆ ಬಿದ್ದು ಮೂರ್ಛೆ ಹೋದ. ಸ್ವಲ್ಪ-ಹೊತ್ತಾದ ನಂತರ ಚೇತರಿಸಿಕೊಂಡು ಮತ್ತೆ ವೀರಭದ್ರನೊಂದಿಗೆ ಕಾದಾಡುತ್ತಾ ಅತ್ಯಂತ ಶಕ್ತ್ಯಾಯುಧವನ್ನು ಪ್ರಯೋಗಿಸಿದ. ಮಹಾ-ತೇಜಸ್ವಿಯಾದ ವೀರಭದ್ರ ಸಹ ಭಯಂಕರವೂ ಹರಿತವೂ ಆಗಿರುವ ತನ್ನ ತ್ರಿಶೂಲದಿಂದ ತಾರಕಾಸುರನಿಗೆ ಹೊಡೆದ. ಹೀಗೆ ವೀರಭದ್ರ ಮತ್ತು ತಾರಕಾಸುರ ಪರಸ್ಪರ ಮಾಡುತ್ತಿದ್ದ ದ್ವಂದ್ವ-ತುಮುಲಯು-ದ್ಧವು ನೋಡುವವರಿಗೆ ರೋಮಾಂಚನವನ್ನುಂಟುಮಾಡುತ್ತಿತ್ತು. ಇದರ ಮಧ್ಯೆ ಯುದ್ಧರಂಗದಲ್ಲಿ ಭೇರಿ, ಮೃದಂಗ, ಪಟಹ, (ತಮಟೆ) ಗೋಮುಖ ಮುಂತಾದ ವಾದ್ಯಗಳು ಭಯಂಕರವಾಗಿ ಮೊಳಗುತ್ತಿತ್ತು. ಬುಧ ಮತ್ತು ಅಂಗಾರಕರಂತೆ ಯುದ್ಧ ಮಾಡುತ್ತಿದ್ದ ವೀರಭದ್ರ ಮತ್ತು ತಾರಕಾಸುರನನ್ನು ನೋಡಿ, ನಾರದನು ಮಧ್ಯ ಪ್ರವೇಶಿಸಿ ವೀರಭದ್ರನನ್ನು ಸಮಾಧಾನಿಸಿದ. ತಾರಕನ ವಧೆಯು ಶಿವಪುತ್ರ ಕಾರ್ತಿಕೇಯನಿಂದ ಮಾತ್ರ ಸಾಧ್ಯ. ಆದುದರಿಂದ ನೀನು ಯುದ್ಧವನ್ನು ನಿಲ್ಲಿಸಿ ಹೊರಟುಹೋಗು ಎಂದು ಸಲಹೆ ನೀಡಿದ.

ನಾರದನ ಮಾತಿನಿಂದ ಕೆರಳಿದ ವೀರಭದ್ರ 'ನೋಡೀಗ ನನ್ನ ಪರಾಕ್ರಮ. ಈಗಲೇ ತಾರಕಾಸುರನನ್ನು ಕೊಲ್ಲುವೆ' ಅಂತ ಶೂಲವನ್ನು ಹಿಡಿದು ಪ್ರಮಥ ಗಣಗಳೊಡನೆ ತಾರಕಾಸುರನ ಮೇಲೆ ಯುದ್ಧ ಮುಂದುವರೆಸಿದ. ವೀರಭದ್ರನ ಪರಾಕ್ರಮ ಮತ್ತು ಉತ್ತೇಜನದಿಂದ ದೇವತೆಗಳು ದಾನವರನ್ನು ಸೋಲಿಸಿ, ರಣರಂಗದಿಂದ ಹಿಮ್ಮೆಟ್ಟಿದರು.

ದಾನವಸೈನ್ಯ ಯುದ್ಧರಂಗದಿಂದ ಹಿಮ್ಮೆಟ್ಟುತ್ತಿರುವುದ-ನ್ನು ನೋಡಿದ ತಾರಕಾಸುರನು ಉಗ್ರಕೋಪದಿಂದ ಸಿಂಹದ ಮೇಲೆ ಕುಳಿತು ಹತ್ತುಸಾವಿರ ಕೈಗಳಿಂದ ಅನೇಕ ದೇವತೆಗಳನ್ನು ಕೊಂದ. ತಾರಕನು ದೇವತೆಗಳನ್ನು ಕೊಲ್ಲುತ್ತಿರುವುದನ್ನು ನೋಡಿ ಗಣಾಧಿಪತಿಯಾದ ವೀರಭದ್ರನು ಅತ್ಯಂತ ಕೋಪದಿಂದ ತಾರಕಾ-ಸುರನನ್ನು ಕೊಲ್ಲಬೇಕೆಂದು ಈಶ್ವರನನ್ನು ಧ್ಯಾನಿಸಿ, ತ್ರಿಶೂಲವನ್ನು ಕೈಯಲ್ಲಿ ಹಿಡಿದುಕೊಂಡ. ಆಗ ಅವನ ತೇಜಸ್ಸಿನಿಂದ ದಶದಿಕ್ಕು ಗಳೂ ನಡುಗಿದವು. ಇದನ್ನು ನೋಡಿದ ಕುಮಾರಸ್ವಾಮಿ ಉರಿಗೋಪದಿಂದ ಕುದಿಯುತ್ತಿದ್ದ ವೀರಭದ್ರನನ್ನೂ ಸಮಾಧಾನಿಸಿದ. ಅಲ್ಲಿಗೆ ಬಂದ ವೀರಬಾಹು ಮತ್ತಿತರ ಪ್ರಮಥಗಣಗಳ ಸೇನಾಪತಿಗಳು ಯುದ್ಧವನ್ನು ನಿಲ್ಲಿಸುವಂತೆ ವಿನಂತಿಸಿದರು. ವೀರಭದ್ರನು ಯುದ್ಧವನ್ನು ನಿಲ್ಲಿಸಿದ. ಇದರಿಂದ ಸೋಲಿನ ದವಡೆಯಿಂದ ಪಾರಾದ ಅಸುರರಾಜನಾದ ತಾರಕ ದೇವತೆಗಳ ಮೇಲೆ ಬಾಣಗಳ ಮಳೆಗರೆದ. ಅದರಿಂದ ಅನೇಕ ದೇವತೆಗಳು ಮೃತರಾದರು. ಇದನ್ನು ನೋಡಿ ವಿಷ್ಣು ಕೋಪಗೊಂಡು ಸುದರ್ಶನವೆಂಬ ಚಕ್ರವನ್ನೂ, ಶಾರ್ಙ್ಗ ಎಂಬ ಧನುಸ್ಸನ್ನೂ ಹಿಡಿದು ತಾರಕನೊಡನೆ ಯುದ್ಧಮಾಡಲು ಮುನ್ನುಗ್ಗಿದ. ಆಗ ವಿಷ್ಣು-ತಾರಕರ ನಡುವೆ ಭಯಂಕರ ಯುದ್ಧವಾಯಿತು. ತಾರಕಾಸುರ ಶಕ್ತ್ಯಾಯು-ಧದಿಂದ ವಿಷ್ಣುವಿಗೆ ಹೊಡೆದು ಮೂರ್ಛೆ ಬೀಳುವಂತೆ ಮಾಡಿದ. ಸ್ವಲ್ಪ ಹೊತ್ತಿನಲ್ಲಿಯೇ ವಿಷ್ಣುವು ಚೇತರಿಸಿಕೊಂಡು ಚಕ್ರಾಯುಧವನ್ನು ಪ್ರಯೋಗಿಸಿದಾಗ ತಾರಕ ಗಾಯಗೊಂಡು ಕೆಳಗುರುಳಿದ. ಕೆಲ ನಿಮಿಷಗಳಲ್ಲೆ ಎದ್ದ ತಾರಕ ತನ್ನ ಶಕ್ತ್ಯಾಯುಧದಿಂದ ವಿಷ್ಣುಚಕ್ರವನ್ನು ಕತ್ತರಿಸಿದ. ನಂದಕವೆಂಬ ಆಯುಧದಿಂದ ತಾರಕನಿಗೆ ಹೊಡೆದ. ಇಬ್ಬರೂ ಬಲಿಷ್ಠರಾದುದರಿಂದ ಒಬ್ಬರೂ ಸೋಲಲಿಲ್ಲ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕೆಲ ಜನರ ಗುಂಪೊಂದು ಅಕ್ಕಿಗೆ ಕೃತಕ ಬಣ್ಣ ಸೇರಿಸಿ ಕಲಬೆರಕೆ ಮಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಆಹಾರ ಸಂಸ್ಕರಣಾ ಕಾರ್ಖಾನೆಯೊಂದರಲ್ಲಿ ಚಿತ್ರೀಕರಿಸಿರುವ ವಿಡಿಯೊ ಇದಾಗಿದೆ. 'ಹಿಂದೂಗಳ ಜನಸಂಖ್ಯೆ ಕಡಿಮೆ ಮಾಡಲು ಮುಸ್ಲಿಮರು ಅಕ್ಕಿಗೆ ಹಾನಿಕಾರಕ ರಾಸಾಯನಿಕಗಳನ್ನು ಬೆರೆಸುತ್ತಿದ್ದಾರೆ. ಈಗ ದೇಶದಲ್ಲಿ ಅನ್ನ ಜಿಹಾದ್ ನಡೆಯುತ್ತಿದೆ. ಅಕ್ಕಿ ಸೇರಿ ಯಾವ ವಸ್ತುವನ್ನೂ ಮುಸ್ಲಿಮರ ಅಂಗಡಿಗಳಿಂದ ಕೊಳ್ಳಬೇಡಿ' ಎಂಬ ಅಡಿಬರಹವನ್ನು ಈ ಪೋಸ್ಟ್‌ಗೆ ನೀಡಲಾಗಿದೆ.



ಈ ವಿಡಿಯೊ ಕುರಿತು ಲಾಜಿಕಲ್ ಇಂಡಿಯನ್ ಪರಿಶೀಲನೆ ನಡೆಸಿದೆ. ವಿಡಿಯೊ ಜೊತೆ ಹಂಚಲಾಗಿರುವ ಮಾಹಿತಿ ಸುಳ್ಳು ಎಂದು ಅದು ವರದಿ ಮಾಡಿದೆ. 2018ರಲ್ಲಿ ಪೆರುವಿನಲ್ಲಿ ಈ ವಿಡಿಯೊ ಚಿತ್ರೀಕರಿಸಲಾಗಿದೆ. ರಾಸಾಯನಿಕ ಬೆರೆಸುತ್ತಿರುವವರು ಸ್ಪ್ಯಾನಿಶ್ ಭಾಷೆಯಲ್ಲಿ ಮಾತನಾಡುತ್ತಾರೆ. ಈ ವಿಡಿಯೊ 2018ರಲ್ಲೇ ಯುಟ್ಯೂಬ್‌ನಲ್ಲಿ ಅಪ್‌ಲೋಡ್ ಆಗಿದೆ. ಈ ವಿಡಿಯೊಗೆ ಪೆರುವಿನ ಹಲವು ನಾಗರಿಕರು ಕಮೆಂಟ್ ಕೂಡಾ ಮಾಡಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಬದುಕಿನ ಅಲಂಕಾರ

ದೇವಮಂದಿರ ಭಜನೆ ಪೂಜೆ ಪ್ರಸಾದಗಳು|
ಜೀವನದಲಂಕಾರ, ಮನಸಿನುದ್ಧಾರ||
ಭಾವವಂ ಕ್ಷುಲ್ಲಜಗದಿಂ ಬಿಡಿಸಿ ಮೇಲೊಯ್ವು-|
ದಾವುದಾದೊಡಮೊಳಿತು – ಮಂಕುತಿಮ್ಮ ||499||

ಪದ-ಅರ್ಥ: ಜೀವನದಲಂಕಾರ = ಜೀವನದ + ಅಲಂಕಾರ, ಭಾವವಂ = ಮನಸ್ಸನ್ನು, ಕ್ಷುಲ್ಲ = ಅಲ್ಪವಾದ, ಕ್ಷಣಿಕವಾದ, ಮೇಲೊಯ್ವುದಾವುದಾದೊಡಮೊಳಿತು = ಮೇಲೆ + ಒಯ್ವುದು + ಆವುದು + ಆದೊಡಂ (ಆದರೂ) + ಒಳಿತು.

ವಾಚ್ಯಾರ್ಥ: ದೇವಸ್ಥಾನ, ಭಜನೆ, ಪೂಜೆ, ಪ್ರಸಾದಗಳೆಲ್ಲ ಬದುಕಿಕೊಂದು ಅಲಂಕಾರಗಳು. ಅವು ಮನಸ್ಸಿನ ಉದ್ಧಾರದ ಮಾರ್ಗಗಳು. ಮನಸ್ಸನ್ನು ಅವುಗಳು ಈ ಕ್ಷಣಿಕವಾದ, ಬದುಕಿನಿಂದ ಬಿಡಿಸಿಕೊಂಡು ಎತ್ತರಕ್ಕೆ ಕರೆದೊಯ್ಯುವವು. ಯಾವುದಾದರೂ ಸರಿಯೆ, ಅದು ಒಳ್ಳೆಯದು.

ವಿವರಣೆ: ಮನುಷ್ಯನಿಗೆ ಇಹದ ಬದುಕಿನಲ್ಲಿ ಅವಶ್ಯವಾದ ಅನ್ನ, ವಸ್ತ್ರ ಮತ್ತು ವಸತಿಗಳು ದೊರಕಿ ಜೀವನ ಸ್ವಲ್ಪ ಭದ್ರವೆನ್ನಿಸಿದ ಮೇಲೆ ಅವನಿಗೊಂದು ಕೌತುಕ ಮೂಡತೊಡಗಿತು. ಅದು ಈ ಸೃಷ್ಟಿಯನ್ನು ಯಾರು ಮಾಡಿದರು, ಯಾಕೆ ಮಾಡಿದರು ಎನ್ನುವ ಚಿಂತನೆ. ಆ ಚಿಂತನೆ ದೀರ್ಘವೂ, ಆಳವೂ ಆದಂತೆ ಯಾವುದೋ ಒಂದು ಆಗೋಚರವಾದ ಮತ್ತು ಅಮಾನುಷವಾದ ಶಕ್ತಿಯ ಕೈವಾಡ ಇದ್ದಿರಬೇಕು ಎಂದು ನಂಬತೊಡಗಿದ. ಅಂತಹ ಶಕ್ತಿಯೊಂದಿದ್ದರೆ ಅದನ್ನು ಕಾಣುವ, ತನ್ನದಾಗಿಸಿಕೊಂಡು ಜೀವನವನ್ನು ಭದ್ರಪಡಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ. ಆ ಪ್ರಯತ್ನದ ಒಂದು ಭಾಗವೇ ಆರಾಧನಾ ಪ್ರಕ್ರಿಯೆ. ಎರಡು ತರಹದ ಆರಾಧನೆಗಳು ಹುಟ್ಟಿಕೊಂಡವು.

ಮೊದಲನೆಯದು ದೇವರನ್ನು ಹೊರಗಡೆ ಹುಡುಕದೆ ತನ್ನಲ್ಲಿಯೇ ಕಾಣುವುದು ಆಂತರ್ಯದ ಆರಾಧನೆ. ಅವರಿಗೆ ದೇವಸ್ಥಾನ, ವಿಗ್ರಹ, ಪೂಜೆ, ಅಲಂಕಾರಗಳ ಮತ್ತು ಮೂರ್ತರೂಪದ ಸಂಕೇತಗಳ ಅವಶ್ಯಕತೆ ಇಲ್ಲ. ಅವರು ಕಂಡುಕೊಂಡ ವಿಧಾನಗಳು, ಧ್ಯಾನ, ಜಪ, ತಪಸ್ಸು, ಯೋಗ ಮುಂತಾದವುಗಳು. ಅಂತಹವರು ಪ್ರಪಂಚದಲ್ಲಿ ಸಾಕಷ್ಟು ಜನರಿದ್ದಾರೆ. ಅವರು ದೇಹವನ್ನು ಮನಸ್ಸಿನೊಂದಿಗೆ ಹುರಿಗೊಳಿಸಿ ಮೊದಲು ದೇಹದ ಮೇಲೆ ನಂತರ ಮನಸ್ಸಿನ ಮೇಲೆ ಹಿಡಿತವನ್ನು ಸಾಧಿಸಿ ಮೂಲಾಧಾರದಲ್ಲಿದ್ದ ಶಕ್ತಿಯನ್ನು ಜಾಗ್ರತಗೊಳಿಸಿ, ಹಂತಹಂತವಾಗಿ ಸಹಸ್ರಾರದವರೆಗೆ ಕೊಂಡೊಯ್ದು ನಿರಾಕಾರವಾದ ಬ್ರಹ್ಮಜ್ಞಾನಕ್ಕೆ ಪ್ರಯತ್ನಿಸುತ್ತಾರೆ. ಆದರೆ ಬಹಳಷ್ಟು ಜನರಿಗೆ ಇದು ಕಷ್ಟಸಾಧ್ಯವಾದದ್ದು. ಅವರು ಭಗವಂತನನ್ನು ದೇಹದ ಹೊರಗೆ, ಮೂರ್ತಿಗಳಲ್ಲಿ, ದೇವಾಲಯಗಳಲ್ಲಿ, ಪೂಜೆಗಳಲ್ಲಿ, ಅರ್ಚನೆ, ಹೋಮಗಳಲ್ಲಿ ಕಾಣಲು ಹೆಣಗುತ್ತಾರೆ. ಮೂರ್ತಿಗಳು, ಚಿತ್ರಗಳು, ದೇವಸ್ಥಾನಗಳನ್ನು ಆಕರ್ಷಕವಾಗಿ, ಮನಸ್ಸು ಒಪ್ಪುವಂತೆ ಮಾಡಲು ಅನೇಕ ಅಲಂಕಾರಗಳು, ಪೂಜಾಸಾಧನಗಳು ಬಂದವು. ಹೀಗೆ ತನ್ನೊಳಗೆ ಅಥವಾ ಹೊರಗೆ ಇರಬಹುದಾದ ಉದಾತ್ತವಾದ, ಶಾಶ್ವತ ಸತ್ಯವನ್ನು ಕಂಡರಿಸಿಕೊಳ್ಳಲು ಮನುಷ್ಯ ಅನೇಕಾನೇಕ ವಿಧಿಗಳನ್ನು ಸೃಷ್ಟಿಸಿಕೊಂಡ. ಇವೆಲ್ಲ ಯಾಕೆ ಬೇಕು ಎನ್ನುವ ಪ್ರಶ್ನೆಗೆ ಈ ಕಗ್ಗ ಬಲು ಸುಂದರವಾದ ಕಾರಣವನ್ನು ಕೊಡುತ್ತದೆ. ದೇವಸ್ಥಾನ, ಭಜನೆ, ಪೂಜೆ, ಪ್ರಸಾದ, ಯೋಗಸಾಧನೆಗಳು ಇವೆಲ್ಲ ಬದುಕಿಗೊಂದು ಅಲಂಕಾರವನ್ನು, ಉತ್ಸಾಹವನ್ನು ನೀಡುತ್ತವೆ, ಮನಸ್ಸನ್ನು ಪರಿಷ್ಕಾರಗೊಳಿಸುತ್ತವೆ. ಇವು ಮಾಡುವ ಬಹುದೊಡ್ಡ ಉಪಕಾರವೆಂದರೆ ಜೀವನದ ಜಟಾಪಟಿಯಲ್ಲಿ ಒದ್ದಾಡಿ, ಬಳಲಿದ ಮನಸ್ಸನ್ನು ಕ್ಷಣಕಾಲವಾದರೂ ಉನ್ನತನೆಲೆಗೆ ಕರೆದೊಯ್ದು ಹಗುರಗೊಳಿಸುತ್ತವೆ. ಅವುಗಳಲ್ಲಿ ಯಾವ ವಿಧಾನ ಸರಿ? ನಮ್ಮ ಮನಸ್ಸಿಗೆ ಒಪ್ಪಿತವಾದ ವಿಧಾನ ಯಾವುದಾದರೂ ಸರಿಯೆ, ನೆಮ್ಮದಿಯನ್ನು ಕೊಟ್ಟರಾಯಿತು.

ದಿನ ಭವಿಷ್ಯ

ಬುಧವಾರ ನವೆಂಬರ್ 17, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ತ್ರಯೋದಶೀ ಗಂ. 7-46 (ಬೆ. 10-26) ಬುಧವಾರ ನಿತ್ಯ ನಕ್ಷತ್ರ ಅಶ್ವಿನಿ ಗಂ. 41-28 (ರಾ. 11-00) ವ್ಯತೀಪಾತ ನಾಮ ಯೋಗ ಗಂ. 52-9 ತೈತಲ ಕರಣ ಗಂ. 7-46 ವಿಷ ಗಂ. 31-18 ಅಮೃತ ಗಂ 22-40 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-22 ಸೂರ್ಯಾಸ್ತ: 5-46 ಅದೃಷ್ಟ ಸಂಖ್ಯೆ 5 8

ಮೇಷ: ಕಠಿಣ ಪರಿಶ್ರಮದಿಂದಾಗಿ ಕಾರ್ಯದಲ್ಲಿ ಯಶಸ್ಸು. ಎದುರಾಳಿಗಳ ಕುತಂತ್ರಗಳು ಬಯಲಾಗಿ ಮೇಲ್ಗೈ ಸಾಧಿಸಲಿದ್ದೀರಿ. ಚಿಂತೆಗೆ ಅವಕಾಶವಿಲ್ಲ. ತೈಲ ವ್ಯಾಪಾರದಲ್ಲಿ ಅಭಿವೃದ್ಧಿ.

ವೃಷಭ: ಬಂಧುಮಿತ್ರರ ಆಗಮನದಿಂದ ಮನಸ್ಸಿಗೆ ನೆಮ್ಮದಿ. ಆರೋಗ್ಯದಲ್ಲಿ ಸುಧಾರಣೆ. ಯೋಗಾಭ್ಯಾಸದ ಮೊರೆ ಹೋಗಬೇಕಾದೀತು. ಪಶು ಪಕ್ಷಿಗಳಿಗೆ ಆಹಾರ ನೀಡಿ. ದೀನರಿಗೆ ಸಹಾಯ ಮಾಡಿ.

ಮಿಥುನ: ಅತಿಯಾದ ಉಲ್ಲಾಸದಿಂದ ಮೈ ಮರೆಯುವ ಸಾಧ್ಯತೆ. ಉದ್ಯೋಗ ರಂಗದಲ್ಲಿ ಆತ್ಮವಿಶ್ವಾಸದ ಬೆಳವಣಿಗೆ. ನಿಮ್ಮನ್ನು ಅತಿಯಾಗಿ ಪ್ರೀತಿಸುವವರಿಂದ ಸಾಂತ್ವನದ ಮಾತುಗಳನ್ನು ಕೇಳಲಿದ್ದೀರಿ.

ಕರ್ಕಾಟಕ: ಸರ್ಕಾರಿ ನೌಕರರಿಗೆ ಮೇಲಾಧಿಕಾರಿಗಳಿಂದ ಕಿರಿಕಿರಿ. ಅನಿರೀಕ್ಷಿತವಾದ ತಲೆನೋವು ಅಥವಾ ಬೆನ್ನುನೋವುಗಳು ಕಂಡುಬರಲಿದೆ. ನಿಗದಿತ ಕಾರ್ಯಗಳಲ್ಲಿ ಯಶಸ್ಸು. ಧನಾಗಮನದ ಸಾಧ್ಯತೆ.

ಸಿಂಹ: ವ್ಯವಹಾರದಲ್ಲೂ ಉನ್ನತಿಯಾಗಿ ಸಾಮಾಜಿಕ ಗೌರವಾದರಗಳನ್ನು ಪಡೆಯುವಿರಿ. ಸತ್ಪುರುಷರ ದರ್ಶನ ಮಾಡಲಿದ್ದೀರಿ. ಚಿನ್ನಾಭರಣ ಖರೀದಿ ಸಾಧ್ಯತೆ. ದಾಂಪತ್ಯದಲ್ಲಿ ಸರಸ.

ಕನ್ಯಾ: ಗೃಹ, ವಸ್ತ್ರ ವಿನ್ಯಾಸಕಾರರಿಗೆ ಉತ್ತಮ ಆರ್ಥಿಕ ಲಾಭ ತರಲಿದೆ. ನಿಮ್ಮ ಮೇಲಿನ ಹೆಚ್ಚಿನ ಜವಾಬ್ದಾರಿ ನಿಭಾಯಿಸಿಕೊಳ್ಳುವಲ್ಲಿ ಯಶಸ್ಸು. ಆತ್ಮೀಯರಲ್ಲಿ ಸಂತೋಷ ಹಂಚಿಕೊಳ್ಳಲಿದ್ದೀರಿ.

ತುಲಾ: ಒಳ್ಳೆಯ ಕೆಲಸದ ನಿರೀಕ್ಷೆಯಲ್ಲಿರುವಿರಿ. ವ್ಯವಹಾರದಲ್ಲಿ ಪ್ರಗತಿ. ಗ್ರಹಬಲಗಳು ನಿಮಗೆ ಕೂಡಿಬರಲಿವೆ. ಹಿರಿಯರಿಗೆ ತೀರ್ಥಕ್ಷೇತ್ರ ದರ್ಶನ ಭಾಗ್ಯ ಒದಗಿಸಿಕೊಡುವ ಸಾಧ್ಯತೆ.

ವೃಶ್ಚಿಕ: ಆರ್ಥಿಕರಂಗದಲ್ಲಿ ಪ್ರಗತಿ. ದೂರಪ್ರಯಾಣದ ಆಯಾಸದಿಂದಾಗಿ ಚೇತರಿಸಿಕೊಂಡ ಆರೋಗ್ಯದಲ್ಲಿ ಪ್ರಗತಿ. ವಿವಾಹಾಪೇಕ್ಷಿಗಳಿಗೆ ಕಂಕಣ ಭಾಗ್ಯ-ಕೂಡಿಬರಲಿದೆ. ಉದ್ಯೋಗದಲ್ಲಿ ಆಸಕ್ತಿ.

ಧನು: ನೀವು ಮಾಡುವ ಯಾವುದೇ ಕಾರ್ಯದಲ್ಲೂ ಬದಲಾವಣೆಯಾದರೂ ಸಕಾರಾತ್ಮಕವಾಗಿರಲಿದೆ. ರಕ್ಷಣಾ ಕ್ಷೇತ್ರದಲ್ಲಿ ದುಡಿಯುವವರಿಗೆ ಕಠಿಣ ಸವಾಲು ಎದುರಾಗುವ ಸಾಧ್ಯತೆ.

ಮಕರ: ಸಮಾಧಾನ ಚಿತ್ತದಿಂದ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಕಂಡುಕೊಳ್ಳ-ಬಹುದು. ದುಡುಕುತನ ಒಳ್ಳೆಯದಲ್ಲ. ಯಾವುದೇ ವಿಚಾರಕ್ಕೂ ಮತ್ತೊಮ್ಮೆ ಯೋಚಿಸಿ ನಿರ್ಧಾರ ಕೈಗೊಳ್ಳುವುದು ಉತ್ತಮ.

ಕುಂಭ: ಅನಿರೀಕ್ಷಿತ ಬೆಳವಣಿಗೆಯಿಂದ ಅಧಿಕಾರ - ಗೌರವ ಹೊಂದುವಿರಿ. ವಿರೋಧಿಗಳಿಂದಲೂ ಸೈ ಎನ್ನಿಸಿಕೊಳ್ಳುವಂತಹ ಕಾರ್ಯಸಾಧನೆ ನಿಮ್ಮದಾಗಲಿದೆ.

ಮೀನ: ವೈದ್ಯವೃತ್ತಿಯವರಿಗೆ ಅಧಿಕ ಶ್ರಮವಾಗಿ ವಿಪರೀತ ಆಯಾಸ. ಸ್ತ್ರೀಯರಿಗೆ ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗಲಿದೆ. ಚಿನ್ನಾಭರಣ ಖರೀದಿ ಸಾಧ್ಯತೆ. ಮನೋ ವ್ಯಾಧಿಗಳು ದೂರವಾಗಲಿವೆ.

ನಿಮ್ಮ ಜನ್ಮದಿನ 17-ನವೆಂಬರ್ ಈ ದಿನ ಅತ್ಯಂತ ಶುಭ ದಿನವಾಗಿದೆ. ನಿಮ್ಮ ಜೀವನಕ್ಕೆ ಪೂರಕವಾದ ಬೆಳವಣಿಗೆಯೊಂದು ಕಂಡುಬರುವುದು, ಸರ್ಕಾರೇತರ ಸಂಸ್ಥೆಗಳಿಂದ ಅನುಕೂಲಗಳು ದೊರೆತರೂ ವ್ಯವಹಾರ ಹಿತಮಿತವಾಗಿರಲಿ. ಉದ್ಯೋಗ ವ್ಯವಹಾರಗಳಲ್ಲಿ ಅಭಿವೃದ್ಧಿ ಕಾಣಲಿದ್ದೀರಿ. ಕ್ರೀಡಾಪಟುಗಳಿಗೆ ಸೆಣಸಾಟ.

ಪದಬಂಧ 4780


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಕಣ್ಣೆಟ್ಟಾಗಲೇ ನಡೆದ ಮುಂಜಿ! (5)
3.ಆಳು ಕರೆದುಕೊಂಡು ಬಂದಿರುವ ಹಸು (3)
5.ಮಾನಸಿಕ ಪ್ರಭಾವ ಬೀರಿ ವಶಪಡಿಸಿಕೊಳ್ಳುವುದು (5)
7.ಬೆಳ್ಳಗಾದ ಕೂದಲು (2)
9.ನೆನಪು ಮಾಡಿಕೊಂಡು ತೋರಿದ ಒಯ್ಯಾರ (3)
11.ತಿರುಚಿದರೆ ಆಸ್ವಾದ ಕಾಣುವುದೇ! (2)
13.ನೆತ್ತರಿನಿಂದಿರಿಸಿದ ಬೊಟ್ಟು (5)
15.ಚಿನ್ನಬೆಳ್ಳಿಗಳನ್ನು ಪರೀಕ್ಷಿಸುವ ಕಲ್ಲು (3)
16.ಮೃಗದ ನಡುವಳಿಕೆ (5)

ಮೇಲಿಂದ ಕೆಳಕ್ಕೆ

1.ಪ್ರಕೃತವಾದ ವಿಷಯಕ್ಕೆ ಕೊಡುವ ಹೋಲಿಕೆ ವಸ್ತು (4)
2.ವರ್ತುಲಾಕಾರವಾಗಿರುವುದು ಉಲ್ಟಾ ಕಾಣುತ್ತಿದೆ (3)
4.ಕಣದಲ್ಲಿ ನೆರವೇರಿದ ಲಗ್ನ (3)
6.ಕದಕ್ಕೆ ಉಜ್ಜುತ್ತಿರುವ ಕೆನ್ನೆ (3)
8.ಕಣ್ಣಿನ ಎವೆ (2)
9.ಒಡನೆಯೇ ಕಾಣಿಸಿದ ಯಜಮಾನಿತಿ (3)
10.ನಾಗರೀಕರು ಹಿಡಿದಿರುವ ಗುಂಜು (2)
12.ಮನದ ಗೋಡೆ (4)
13.ವಿಷಯಾಸಕ್ತನಿವನು (3)
14.ಕೊಳೆಯಿಂದ ಕೂಡಿದುದು (3)



4779ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಾಗ್ದಾನ 3.ಆಸ್ತಿಕ 5.ವಿಧಾನಸೌಧ 7.ವಾಚಕ 8.ಲಾಭಬಡುಕ 11.ಅರಣ್ಯ 12.ಪಾಕಪ್ರವೀಣ 14.ಕೆಚ್ಚೆದೆ 15.ಕನಲು

ಮೇಲಿಂದ ಕೆಳಕ್ಕೆ: 1.ವಾಸ್ತವಿಕ 2.ನಯನ 4.ಕಟುಕ 6.ಸೌರಭ 7.ವಾಹಕ 8.ಲಾವಣ್ಯ 9.ದುರಕ 10.ಕಣಕಾಲು 11.ಅಡ್ಡಿಕೆ 13.ಪ್ರತೀಕ

ಸುಡೊಕು 5166

	2			6	7	4		
3								
	7	1		4	8		6	
	4						8	
8		9		7	1			6
	5		8		4		9	
2				9			3	
4		3		5	2			8
	1		4			5	2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5165 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಗುಟ್ಟು ಬಿಡದ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ

ಸೊಸೆಯೋ, ಮೊಮ್ಮಗನೋ?

• ಕೆ.ಎಸ್.ಸುನಿಲ್


ಭವಾನಿ ರೇವಣ್ಣ


ಸೂರಜ್ ರೇವಣ್ಣ

ಹಾಸನ: ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಎಚ್‌.ಡಿ.ದೇವೇಗೌಡರ ಸೊಸೆ ಭವಾನಿ ರೇವಣ್ಣ ಅಥವಾ ಮೊಮ್ಮಗ, ಎಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಡಾ.ಸೂರಜ್ ರೇವಣ್ಣ ಪೈಕಿ ಒಬ್ಬರು ಕಣಕ್ಕಿಳಿಯುವುದು ಖಚಿತವಾಗಿದೆ. ಆದರೆ, ಸೊಸೆಯೋ, ಮೊಮ್ಮಗನೋ ಎಂಬುದು ಕುತೂಹಲ ಮೂಡಿಸಿದೆ. ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾದರೂ ಈವರೆಗೂ ಅಭ್ಯರ್ಥಿ ಅಂತಿಮಗೊಳಿಸಿಲ್ಲ.

ನಾಲ್ಕು ದಿನಗಳ ಹಿಂದೆ ನಡೆದ ಸಭೆಯಲ್ಲಿ ಬಹುತೇಕ ಪ್ರಮುಖರು ಭವಾನಿ ರೇವಣ್ಣ ಅವರ ಹೆಸರನ್ನೇ ಶಿಫಾರಸು ಮಾಡಿರುವುದರಿಂದ ಅವರೇ ಹುರಿಯಾಳಾಗಲಿದ್ದಾರೆ ಎನ್ನಲಾಗಿತ್ತು. ಪಕ್ಷದಲ್ಲಿ ವರ್ಚಸ್ಸು ಹಾಗೂ ಚುನಾವಣೆ ನಡೆಸುವ ತಂತ್ರಗಾರಿಕೆ ದೃಷ್ಟಿಯಿಂದಲೂ ಅವರು ಪ್ರಬಲ ಅಭ್ಯರ್ಥಿಯಾಗಲಿದ್ದಾರೆ ಎಂದು ಮುಖಂಡರು ಪ್ರತಿಪಾದಿಸಿದ್ದರು.

ಕಳೆದ ಬಾರಿಯೂ ಭವಾನಿ ಅವರು ಸ್ಪರ್ಧೆಗಿಳಿಯಬೇಕು ಎಂಬ ಒತ್ತಡ ಇತ್ತು. ಆದರೆ, ಪಟೇಲ್ ಶಿವರಾಂ ಅವರ ಪರ ದೇವೇಗೌಡರು ಒಲವು ವ್ಯಕ್ತಪಡಿಸಿದ್ದರಿಂದ ಸ್ಪರ್ಧೆಗೆ ಅವಕಾಶ ಸಿಗಲಿಲ್ಲ.

ಕಾರ್ಯಕರ್ತರ ಭಾವನೆಗಳನ್ನು ಗಣನೆಗೆ ತೆಗೆದುಕೊಳ್ಳುವ ಉದ್ದೇಶದಿಂದ ಪಕ್ಷದ ನಾಯಕರು ವಿಧಾನಸಭಾ ಕ್ಷೇತ್ರವಾರು ಸಭೆ ಆಯೋಜಿಸಿ, ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ. ಈ ನಡುವೆ ಸೂರಜ್ ರೇವಣ್ಣ ಅವರ ಹೆಸರು ಮುನ್ನಲೆಗೆ ಬಂದಿದೆ. ಅವರನ್ನೇ ಕಣಕ್ಕಿಳಿಸಲು ಕುಟುಂಬದವರು ಒಲವು ತೋರುತ್ತಿದ್ದಾರೆ ಎನ್ನಲಾಗಿದೆ.

ಪರಿಷತ್‌ಗೆ ಮಹಿಳೆಯರು ಆಯ್ಕೆಯಾದರೆ ಕಚೇರಿಯಿಂದ ಕಚೇರಿಗೆ ಅಲೆದು ಕೆಲಸ ಮಾಡುವುದು ಕಷ್ಟ. ಎಲ್ಲರ ಅಭಿಪ್ರಾಯ ಸಂಗ್ರಹಿಸಿ, ತೀರ್ಮಾನಿಸಲಾಗುವುದು
ಎಚ್‌.ಡಿ.ದೇವೇಗೌಡ
ಜೆಡಿಎಸ್ ವರಿಷ್ಠ

ಕಾರ್ಯಕರ್ತರು, ಮುಖಂಡರ ಸಭೆಯಲ್ಲಿ ಭವಾನಿ ಹೆಸರು ಕೇಳಿ ಬರುತ್ತಿರುವ ಕುರಿತು ದೇವೇಗೌಡರ ಗಮನಕ್ಕೆ ತರಲಾಗುವುದು. ಅವರದ್ದೇ ಅಂತಿಮ ತೀರ್ಮಾನ
ಎಚ್‌.ಡಿ. ರೇವಣ್ಣ
ಹೊಳೆನರಸೀಪುರ ಕ್ಷೇತ್ರದ ಶಾಸಕ

‘ಈ ಚುನಾವಣೆಯಲ್ಲಿ ಪಕ್ಷಗಳ ಪ್ರಾಬಲ್ಯದ ಜತೆಗೆ ಆರ್ಥಿಕ ಸಂಪನ್ಮೂಲವೂ ಮುಖ್ಯ. ಹಾಗಾಗಿ ಆರ್ಥಿಕವಾಗಿ ಬಲಾಢ್ಯರಾದ ಅಭ್ಯರ್ಥಿಗಳನ್ನೇ ಎಲ್ಲ ಪಕ್ಷಗಳೂ ಸ್ಪರ್ಧೆಗಿಳಿಸಬೇಕಾಗಿದೆ. ಹಾಗಾಗಿ ಜೆಡಿಎಸ್‌ನಲ್ಲಿ ಗೌಡರ ಕುಟುಂಬದವರೇ ಸ್ಪರ್ಧೆಗಿಳಿಯಲಿದ್ದಾರೆ’ ಎಂಬ ಸುದ್ದಿ ಹರಿದಾಡುತ್ತಿದೆ.

ಕಾರ್ಯಕರ್ತರು ಎಷ್ಟೇ ಒತ್ತಡ ಹೇರಿದರೂ, ಜಿಲ್ಲೆಯ ಮಟ್ಟಿಗೆ ಪಕ್ಷಕ್ಕೆ ಸಂಬಂಧಿಸಿದ ಎಲ್ಲ ತೀರ್ಮಾನಗಳನ್ನು ಅಂತಿಮವಾಗಿ ರೇವಣ್ಣ ಅವರೇ ಕೈಗೊಳ್ಳುತ್ತಾರೆ. ಆದರೆ, ಕುಟುಂಬದವರೇ ಆಕಾಂಕ್ಷಿಗಳಾಗಿರುವುದರಿಂದ ದೇವೇಗೌಡರ ಅಂತಿಮ ತೀರ್ಮಾನದ ಕಡೆ ಎಲ್ಲರ ಚಿತ್ತ ನೆಟ್ಟಿದೆ. ಕುಟುಂಬದ ಸದಸ್ಯರಿಗೇ ಮಣೆ ಹಾಕುತ್ತಾರೋ, ಅಥವಾ ಹೊರಗಿನವರಿಗೆ ಅವಕಾಶ ಕೊಡುತ್ತಾರೋ ಎಂಬುದು ಕುತೂಹಲ ಕೆರಳಿಸಿದೆ.

ವರ್ಗಾವಣೆ ನೀತಿ ಬದಲಾವಣೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ ಅವಧಿ ಮುಕ್ತಾಯಗೊಂಡಿರುವುದರಿಂದ ವರ್ಗಾವಣೆ ನೀತಿಯಲ್ಲಿ ಕೆಲವು ಬದಲಾವಣೆಗಳನ್ನು ತರುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ಸೂಚಿಸಿದ್ದಾರೆ.

ನಿಯಮಿತ ಸ್ವರೂಪದ ವರ್ಗಾವಣೆ ಕೋರಿಕೆಯ ಕಡತಗಳನ್ನು ತಮ್ಮ ಕಚೇರಿಗೆ ಕಳುಹಿಸುತ್ತಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮಂಗಳವಾರ ಟಿಪ್ಪಣಿ ಹೊರಡಿಸಿರುವ ಮುಖ್ಯಮಂತ್ರಿ, ಇಂತಹ ಬೆಳವಣಿಗೆ ನಿಲ್ಲದಿದ್ದರೆ ಇಲಾಖೆಗಳಲ್ಲಿ ಕೆಲಸ ಕುಂಠಿತವಾಗಲಿದೆ ಎಂದಿದ್ದಾರೆ.

ಬಿ, ಸಿ ಮತ್ತು ಡಿ ವೃಂದ ಗಳಲ್ಲಿ ಖಾಲಿ ಇರುವ/ ರಿಕ್ತ ಹುದ್ದೆಗಳಿಗೆ ಇಲಾಖಾ ಸಚಿವರ ಹಂತದಲ್ಲೇ ವರ್ಗಾವಣೆ ಆದೇಶ ಹೊರಡಿಸಬೇಕು. ತೆರವಾಗುವ ಹುದ್ದೆಗಳಿಗೆ ಯಾವುದೇ ವರ್ಗಾವಣೆ ಆದೇಶ ಹೊರಡಿಸಬಾರದು. ಎ ವೃಂದದಲ್ಲಿನ ಖಾಲಿ ಹುದ್ದೆಗಳಲ್ಲಿ ಸ್ಥಳ ನಿಯುಕ್ತಿಗೆ ಸಂಬಂಧಿಸಿದ ಪ್ರಸ್ತಾವಗಳನ್ನು ಮಾತ್ರ ಮುಖ್ಯಮಂತ್ರಿಯವರ ಕಚೇರಿಗೆ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

ಕಾಫಿನಾಡು: ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿ ಘೋಷಣೆ ಬಾಕಿ

• ಬಿ.ಜೆ. ಧನ್ಯಪ್ರಸಾದ್

ಚಿಕ್ಕಮಗಳೂರು: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ಬಿಜೆಪಿ, ಕಾಂಗ್ರೆಸ್‌ನಲ್ಲಿ ಅಭ್ಯರ್ಥಿ ಆಯ್ಕೆ ಬಹುತೇಕ ಮುಗಿದಿದ್ದು, ಅಧಿಕೃತ ಘೋಷಣೆ ಬಾಕಿ ಇದೆ. ಸ್ಪರ್ಧೆಯಿಂದ ಜೆಡಿಎಸ್ ದೂರ ಉಳಿಯುವುದು ನಿಚ್ಚಳವಾಗಿದೆ.

ಬಿಜೆಪಿಯಿಂದ ಎಂ.ಕೆ. ಪ್ರಾಣೇಶ್, ರವೀಂದ್ರ ಬೆಳವಾಡಿ, ನಿರಂಜನ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಇದ್ದಾರೆ. ಪ್ರಾಣೇಶ್ ಅವರು ವಿಧಾನ ಪರಿಷತ್ ಉಪ ಸಭಾಪತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಅವರಿಗೆ ಮತ್ತೊಮ್ಮೆ ಟಿಕೆಟ್ ಒಲಿಯುವ ಸಾಧ್ಯತೆ ಹೆಚ್ಚು ಎಂದು ಪಕ್ಷದ ಮೂಲಗಳು ತಿಳಿಸಿವೆ.

‘ಹಿಂದುಳಿದ ವರ್ಗದವರೊಬ್ಬರಿಗೆ ಈ ಬಾರಿ ಅವಕಾಶ ನೀಡಿ ಎಂದು ಕೋರಿದ್ದೇವೆ. ಪಕ್ಷದ ನಿರ್ಧಾರಕ್ಕೆ ಬದ್ಧರಾಗಿರುತ್ತೇವೆ’ ಎಂದು ಬಿಜೆಪಿ ಟಿಕೆಟ್ ಆಕಾಂಕ್ಷಿ ರವೀಂದ್ರ ಬೆಳವಾಡಿ ತಿಳಿಸಿದರು.


ಕಾಂಗ್ರೆಸ್‌ನಲ್ಲಿ ಎ.ವಿ. ಗಾಯತ್ರಿ ಶಾಂತೇಗೌಡ, ಡಾ.ಡಿ.ಎಲ್. ವಿಜಯ ಕುಮಾರ್, ಕೆ.ಬಿ. ಮಲ್ಲಿಕಾರ್ಜುನ್ ಆಕಾಂಕ್ಷಿಗಳಾಗಿದ್ದಾರೆ. ಗಾಯತ್ರಿ ಶಾಂತೇಗೌಡ ಅವರನ್ನು ಕಣಕ್ಕಿಳಿಸಲು ಪಕ್ಷ ತೀರ್ಮಾನಿಸಿದೆ, ಅಧಿಕೃತ ಘೋಷಣೆ ಬಾಕಿ ಇದೆ.

ಜೆಡಿಎಸ್‌ನಿಂದ ಕಣಕ್ಕಿಳಿಯಲು ಮೊದಲು ಆಸಕ್ತಿ ತೋರಿಸಿದ್ದ ರಂಜನ್ ಅಜಿತ್ ಕುಮಾರ್, ಈಗ ಮೌನವಾಗಿದ್ದಾರೆ. ಹೊಸಮುಖ ಪರಿಚಯಿಸುವ ಪ್ರಯತ್ನ ಕೈಗೂಡಿಲ್ಲ. ಬೇರೆ ಆಕಾಂಕ್ಷಿಗಳು ಇಲ್ಲ.

ಟಿಕೆಟ್‌ಗಾಗಿ ಯಾವ ಪಕ್ಷದಲ್ಲೂ ತೀವ್ರ ಪೈಪೋಟಿ ಇಲ್ಲ. ಕಾಫಿನಾಡಿನಲ್ಲಿ ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಹಣಾಹಣಿ ಏರ್ಪಡಲಿದೆ.



ಆಕಾಂಕ್ಷಿಗಳ ಪಟ್ಟಿ ಕಳಿಸಿದ್ದೇವೆ. ಪಕ್ಷದ ಸಂಸದೀಯ ಮಂಡಳಿಯ ಸಭೆಯು ತೀರ್ಮಾನ ಕೈಗೊಳ್ಳಲಿದೆ. 2 ದಿನಗಳಲ್ಲಿ ಅಭ್ಯರ್ಥಿ ಘೋಷಣೆಯಾಗಲಿದೆ
ಸಿ.ಟಿ. ರವಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ



ಟಿಕೆಟ್ ಸಿಗುವ ವಿಶ್ವಾಸ ಇದೆ. ಪಕ್ಷದ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ. ಯಾರನ್ನೇ ಕಣಕ್ಕಿಳಿಸಿದರೂ ಗೆಲುವಿಗೆ ಶ್ರಮಿಸುತ್ತೇನೆ
ಎಂ.ಕೆ. ಪ್ರಾಣೇಶ್
ಸ್ಪರ್ಧಾ ಆಕಾಂಕ್ಷಿ, ಬಿಜೆಪಿ



ಪಕ್ಷ ಸೂಚಿಸಿದರೆ ಕಣಕ್ಕಿಳಿಯುತ್ತೇನೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಗೆಲುವು–ಸೋಲಿನ ಅನುಭವ ಇದೆ. ಚುನಾವಣೆಗೆ ತಯಾರಿ ಮಾಡುತ್ತೇನೆ
ಗಾಯತ್ರಿ ಶಾಂತೇಗೌಡ
ಸ್ಪರ್ಧಾ ಆಕಾಂಕ್ಷಿ, ಕಾಂಗ್ರೆಸ್



ಅಭ್ಯರ್ಥಿ ಕಣಕ್ಕಿಳಿಸದಿರಲು ತೀರ್ಮಾನಿಸಲಾಗಿದೆ. ವರಿಷ್ಠರು ಸೂಚಿಸಿದ ಪಕ್ಷದ ಅಭ್ಯರ್ಥಿಗೆ ಬೆಂಬಲ ನೀಡುತ್ತೇವೆ
ಎಸ್.ಎಲ್. ಭೋಜೇಗೌಡ, ಜೆಡಿಎಸ್ ಮುಖಂಡ – ವಿಧಾನ ಪರಿಷತ್ ಸದಸ್ಯ

ಕಾಂಗ್ರೆಸ್, ಬಿಜೆಪಿಗೆ ಆಯ್ಕೆ ಕಗ್ಗಂಟು

ವಿಜಯಪುರ – ಬಾಗಲಕೋಟೆ ಅವಳಿ ಜಿಲ್ಲೆಯ ದ್ವಿಸದಸ್ಯ ಕ್ಷೇತ್ರದಲ್ಲಿ ಗೊಂದಲ

• ಬಸವರಾಜ್ ಸಂಪಳ್ಳಿ

ವಿಜಯಪುರ: ವಿಜಯಪುರ–ಬಾಗಲಕೋಟೆ ಅವಳಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ದ್ವಿ ಸದಸ್ಯ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆಗೆ ಒಬ್ಬರನ್ನು ಕಣಕ್ಕಿಳಿಸಬೇಕೇ ಅಥವಾ ಇಬ್ಬರನ್ನು ಕಣಕ್ಕಿಳಿಸಬೇಕೇ ಎಂಬ ಗೊಂದಲ ಕಾಂಗ್ರೆಸ್‌ನದ್ದಾಗಿದೆ.

ಬಿಜೆಪಿಯಲ್ಲಿ ಅರ್ಧ ಡಜನ್‌ಗಿಂತ ಹೆಚ್ಚು ಆಕಾಂಕ್ಷಿಗಳಿರುವುದರಿಂದ ಆಯ್ಕೆಯೇ ಕಗ್ಗಂಟಾಗಿದೆ. ಜೆಡಿಎಸ್‌ನಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಚಟುವಟಿಕೆಗಳು ಇದುವರೆಗೆ ಕ್ಷೇತ್ರದಲ್ಲಿ ಕಂಡುಬಂದಿಲ್ಲ.

ಅವಳಿ ಜಿಲ್ಲೆಯ ದ್ವಿಸದಸ್ಯ ಸ್ಥಾನಕ್ಕೆ ಪ್ರತಿ ಬಾರಿಯೂ ಕಾಂಗ್ರೆಸ್ ಮತ್ತು ಬಿಜೆಪಿ ತಲಾ ಒಂದೊಂದು ಸ್ಥಾನಕ್ಕೆ ಆಯ್ಕೆಯಾಗುತ್ತಾ ಬಂದಿವೆ. ಆದರೆ, ಕಳೆದ ಬಾರಿ ಚುನಾವಣೆಯಲ್ಲಿ ಪಕ್ಷೇತರವಾಗಿ ವಿಜಯ ಸಾಧಿಸಿದ್ದ ಬಸನಗೌಡ ಪಾಟೀಲ ಯತ್ನಾಳ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ 2018ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಸುನೀಲ್ ಗೌಡ ಪಾಟೀಲ ಅವರು ಕಾಂಗ್ರೆಸ್ ಪತಾಕೆ ಹಾರಿಸಿದ್ದರು.

ಅವಳಿ ಜಿಲ್ಲೆಯಲ್ಲಿ ಕಾಂಗ್ರೆಸ್, ಬಿಜೆಪಿ ಸಮಬಲ ಇರುವುದರಿಂದ ಯಾವುದೇ ಪಕ್ಷದಿಂದ ಇಬ್ಬರನ್ನು ಕಣಕ್ಕಿಳಿಸಿದರೆ ಗೆಲುವು ಸುಲಭವಲ್ಲ ಎಂಬುದು ಲೆಕ್ಕಾಚಾರ.

ಬಾಗಲಕೋಟೆ ಜಿಲ್ಲೆಗಿಂತ (3447) ವಿಜಯಪುರ ಜಿಲ್ಲೆಯಲ್ಲಿ (3938) ಅಧಿಕ ಸಂಖ್ಯೆಯಲ್ಲಿ ಸ್ಥಳೀಯ ಸಂಸ್ಥೆಗಳ ಮತದಾರರು ಇದ್ದರೂ ಮೊದಲಿನಿಂದಲೂ ಬಾಗಲಕೋಟೆಗೆ ಆದ್ಯತೆ ನೀಡಲಾಗುತ್ತಿದೆ. ಒಬ್ಬರಿಗೇ ಟಿಕೆಟ್ ನೀಡುವುದಾದರೆ ಈ ಸಲ ವಿಜಯಪುರಕ್ಕೆ ಆದ್ಯತೆ ನೀಡಲಿ ಎಂಬ ಒತ್ತಡ ಎರಡೂ ಪಕ್ಷಗಳಲ್ಲಿ ಕೇಳಿಬರುತ್ತಿದೆ.

ಹಾಲಿ ಎರಡೂ ಸ್ಥಾನಗಳು ಕಾಂಗ್ರೆಸ್ ತೆಕ್ಕೆಯಲ್ಲಿದ್ದು, ಪಕ್ಷದಿಂದ ಇಬ್ಬರಿಗೆ ಟಿಕೆಟ್ ನೀಡಬೇಕು ಎಂಬ ಒತ್ತಡ ಹೆಚ್ಚಾಗಿದೆ. ಆದರೆ, ಹಾಲಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ ಅವರೊಬ್ಬರನ್ನೇ ಮರಳಿ ಕಣಕ್ಕಿಳಿಸುವ ಸಾಧ್ಯತೆ ದಟ್ಟವಾಗಿದೆ.

ಶಾಸಕ ಎಂ.ಬಿ.ಪಾಟೀಲ ಅವರ ಸಹೋದರ, ಹಾಲಿ ವಿಧಾನ ಪರಿಷತ್ ಸದಸ್ಯರಾದ ಸುನೀಲಗೌಡ ಪಾಟೀಲ ಅವರಿಗೆ ಕಾಂಗ್ರೆಸ್ ಟಿಕೆಟ್ ಅನುಮಾನ ಎನ್ನಲಾಗುತ್ತಿದೆ. ಕಾಂಗ್ರೆಸ್ ಟಿಕೆಟ್ ಸಿಗಲಿ ಅಥವಾ ಬಿಡಲಿ ಸುನೀಲ್ ಗೌಡ ಪಾಟೀಲ ಕಣಕ್ಕಿಳಿಯುವುದು ನಿಶ್ಚಿತ ಎಂಬ ಮಾತು ಕೇಳಿಬರುತ್ತಿದೆ. ಈಗಾಗಲೇ ಅವರ ಬೆಂಬಲಿಗರು, ಆಪ್ತರು ಸಾಮಾಜಿಕ ಜಾಲತಾಣದಲ್ಲಿ ‘ಸ್ಪರ್ಧೆ ಖಚಿತ; ಗೆಲ್ಲುವು ನಿಶ್ಚಿತ’ ಎಂಬ ಘೋಷಣೆ ಮೊಳಗಿಸುತ್ತಿದ್ದಾರೆ.

ಸುನೀಲ್‌ಗೌಡ ಪಾಟೀಲ ಚುನಾವಣೆಗೆ ಭರ್ಜರಿ ತಯಾರಿ ನಡೆಸಿದ್ದಾರೆ. ಅವಳಿ ಜಿಲ್ಲೆಯ ಅದರಲ್ಲೂ ವಿಶೇಷವಾಗಿ ವಿಜಯಪುರ ಜಿಲ್ಲೆಯ ಗ್ರಾಮ ಪಂಚಾಯ್ತಿ ಸದಸ್ಯರನ್ನು ಎರಡೆರಡು ಬಾರಿ ಭೇಟಿಯಾಗಿ ವೇದಿಕೆ ಸಿದ್ಧ ಮಾಡಿಕೊಂಡಿದ್ದಾರೆ.

ವಿಧಾನ ಪರಿಷತ್‌ನ ಹಿರಿಯ ಸದಸ್ಯರಾಗಿ, ಸಚಿವರಾಗಿ ಕಾರ್ಯನಿರ್ವಹಿಸಿರುವ ಎಸ್.ಆರ್.ಪಾಟೀಲ ಅವರು ಸತತ ನಾಲ್ಕು ಬಾರಿ ಈ ಕ್ಷೇತ್ರದಿಂದ ಆಯ್ಕೆಯಾಗಿದ್ದು, ಈ ಬಾರಿ ಮತ್ತೆ ಸ್ಪರ್ಧೆಗೆ ಅಣಿಯಾಗಿದ್ದು ಅವಳಿ ಜಿಲ್ಲೆಗಳಲ್ಲಿ ಚುನಾವಣೆಗೆ ಸಿದ್ಧತೆ ಮಾಡಿಕೊಂಡಿದ್ದಾರೆ.

ಬಿಜೆಪಿಯಲ್ಲಿ ಆಕಾಂಕ್ಷಿಗಳ ದಂಡು!

ಸಿಂದಗಿ ವಿಧಾನಸಭೆಗೆ ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಭಾರೀ ಅಂತರದಿಂದ ಜಯ ಗಳಿಸಿರುವುದರಿಂದ ಹಾಗೂ ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿ ಇರುವುದರಿಂದ ಪಕ್ಷಕ್ಕೆ ಗೆಲುವು ಸುಲಭ ಎಂಬ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಆಕಾಂಕ್ಷಿಗಳ ಸಂಖ್ಯೆಯೂ ಹೆಚ್ಚಿದೆ.

ಬಾಗಲಕೋಟೆ ಮಾಜಿ ಶಾಸಕ ಪಿ.ಎಚ್.ಪೂಜಾರ ಅವರ ಹೆಸರು ಮುಂಚೂಣಿಯಲ್ಲಿದ್ದು, ಅವರೇ ಬಹುತೇಕ ಅಭ್ಯರ್ಥಿಯಾಗುವ ಸಾಧ್ಯತೆ ಇದೆ.

ಕಳೆದ ಚುನಾವಣೆಯ ಪರಾಜಿತ ಅಭ್ಯರ್ಥಿ ಗೂಳಪ್ಪ ಶೆಟಗಾರ ಅವರ ಪರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಲಾಬಿ ನಡೆಸಿದ್ದಾರೆ.

ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ ಅಧ್ಯಕ್ಷ ವಿಜಯಗೌಡ ಪಾಟೀಲ, ಬಿಜೆಪಿ ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಎಸ್.ಪಾಟೀಲ ಕೂಚಬಾಳ, ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಟಿ.ಪಾಟೀಲ, ಮುಖಂಡರಾದ ಚಂದ್ರಶೇಖರ ಕವಟಗಿ, ಚಂದ್ರಶೇಖರ ಬೆಳ್ಳುಬ್ಬಿ, ಪ್ರಕಾಶ ತಪಶೆಟ್ಟಿ, ಅರವಿಂದ ಮಂಗಳೂರ ಅವರೂ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ.


ಗೂಳಪ್ಪ ಶೆಟಗಾರ


ಎಸ್‌ಆರ್ ಪಾಟೀಲ


ಪಿ.ಎಚ್ ಪೂಜಾರ


ಸುನೀಲ್ ಗೌಡ ಪಾಟೀಲ

ಕಣ ರಂಗೇರಿಸಿದ ರಾಜೇಂದ್ರಕುಮಾರ್ ಸ್ಪರ್ಧೆ

• ಚಿದಂಬರಪ್ರಸಾದ

ಮಂಗಳೂರು: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿನ ದ್ವಿಸದಸ್ಯ ಸ್ಥಾನಕ್ಕೆ ನಡೆಯಲಿರುವ ಚುನಾವಣೆಯ ಕಣ ರಂಗೇರಿದೆ. ಬಿಜೆಪಿ ಒಬ್ಬ ಅಭ್ಯರ್ಥಿಯನ್ನು ಮಾತ್ರ ಕಣಕ್ಕೆ ಇಳಿಸಲು ನಿರ್ಧರಿಸಿದೆ. ಇನ್ನೊಂದು ಸ್ಥಾನವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಕಾಂಗ್ರೆಸ್ ನಿರತವಾಗಿದೆ. ಈ ಮಧ್ಯೆ, ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಎನ್. ರಾಜೇಂದ್ರಕುಮಾರ್ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದು ಉಭಯ ಪಕ್ಷಗಳಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ.

ದ್ವಿಸದಸ್ಯ ಸ್ಥಾನವನ್ನು ಸದ್ಯ ಬಿಜೆಪಿ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಕಾಂಗ್ರೆಸ್‌ನ ಪ್ರತಾಪ್‌ಚಂದ್ರ ಶೆಟ್ಟಿ ಪ್ರತಿನಿಧಿಸುತ್ತಿದ್ದಾರೆ. ಬಿಜೆಪಿಯಿಂದ ಕೋಟ ಶ್ರೀನಿವಾಸ ಪೂಜಾರಿ ಅವರನ್ನೇ ಕಣಕ್ಕೆ ಇಳಿಸಲು ತೀರ್ಮಾನಿಸಿದ್ದು, ಪ್ರತಾಪ್‌ಚಂದ್ರ ಶೆಟ್ಟಿ ಈ ಬಾರಿ ಸ್ಪರ್ಧೆಯಿಂದ ದೂರ ಉಳಿಯಲು ನಿರ್ಧರಿಸಿದ್ದಾರೆ. ಇದರಿಂದಾಗಿ ಕಾಂಗ್ರೆಸ್‌ಗೆ ಅಭ್ಯರ್ಥಿಯ ಆಯ್ಕೆ ತಲೆನೋವಾಗಿ ಪರಿಣಮಿಸಿದೆ.

ಎಂ.ಎನ್. ರಾಜೇಂದ್ರಕುಮಾರ್ ಅವರ ಸ್ಪರ್ಧೆಯಿಂದಾಗಿ ಬಿಜೆಪಿ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸುವ ನಿರ್ಧಾರದಿಂದ ಹಿಂದೆ ಸರಿದಿದೆ. ಬಿಜೆಪಿಯ ಲೆಕ್ಕಾಚಾರದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2,136 ಹಾಗೂ ಉಡುಪಿ ಜಿಲ್ಲೆಯ 1,572 ಸೇರಿದಂತೆ 3,708 ಮತಗಳು ಪಕ್ಷಕ್ಕೆ ಬೀಳಲಿವೆ. ಪ್ರಥಮ ಪ್ರಾಶಸ್ತ್ಯದ ಮತಗಳ ಮೇಲೆ ಆಯ್ಕೆಯಾಗಲು 2,200 ಮತಗಳು ಸಾಕು. ಇನ್ನುಳಿದ 1,500 ಮತಗಳನ್ನು ಯಾರಿಗೆ ನೀಡಬೇಕು ಎನ್ನುವ ಗೊಂದಲ ಪಕ್ಷದಲ್ಲಿದ್ದರೆ, ಆ ಎಲ್ಲ ಮತಗಳು ರಾಜೇಂದ್ರಕುಮಾರ್ ಅವರ ಪಾಲಾಗಲಿವೆ ಎನ್ನುವ ಮಾತುಗಳು ಪಕ್ಷದ ವಲಯದಲ್ಲಿ ಕೇಳಿ ಬರುತ್ತಿವೆ.

ಕಾಂಗ್ರೆಸ್‌ನಲ್ಲಿ 11 ಆಕಾಂಕ್ಷಿಗಳು: ಕಾಂಗ್ರೆಸ್ ಟಿಕೆಟ್ ಕೋರಿ ಐವನ್ ಡಿಸೋಜ, ಪಿ.ವಿ. ಮೋಹನ್, ಮಂಜುನಾಥ ಭಂಡಾರಿ ಸೇರಿದಂತೆ 11 ಜನರು ಅರ್ಜಿ ಸಲ್ಲಿಸಿದ್ದಾರೆ. ಇವರೆಲ್ಲರನ್ನೂ ಬಿಟ್ಟು, ಡಿ.ಕೆ. ಶಿವಕುಮಾರ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಗುತ್ತಿಗೆದಾರ ಯು.ಬಿ. ಶೆಟ್ಟಿ ಅವರು ಕಣಕ್ಕೆ ಇಳಿಯಲಿದ್ದಾರೆ ಎನ್ನುವ ಮಾತುಗಳೂ ಕೇಳಿ ಬರುತ್ತಿವೆ.

ಸಹಕಾರಿಗಳ ಮತಗಳೇ ಆಧಾರ: ಎಸ್‌ಸಿಡಿಸಿಸಿ ಬ್ಯಾಂಕ್ ಹಾಗೂ ರಾಜ್ಯ ಸಹಕಾರ ಮಾರಾಟ ಮಂಡಳದ ಅಧ್ಯಕ್ಷರಾಗಿರುವ ಎಂ.ಎನ್. ರಾಜೇಂದ್ರಕುಮಾರ್ ಉಭಯ ಜಿಲ್ಲೆಗಳ ಸಹಕಾರಿಗಳ ಮತವನ್ನು ನೆಚ್ಚಿಕೊಂಡಿದ್ದಾರೆ.

ಸಹಕಾರ ಸಂಘಗಳ ಪ್ರತಿನಿಧಿಗಳು, ನವೋದಯ ಸ್ವಸಹಾಯ ಸಂಘದ ಸದಸ್ಯರು ಗ್ರಾಮ ಪಂಚಾಯಿತಿಗೆ ಆಯ್ಕೆಯಾಗಿದ್ದಾರೆ. ಅವರ ಮತಗಳ ಜೊತೆಗೆ ಬಿಜೆಪಿಯ ಹೆಚ್ಚುವರಿ ಮತಗಳು ಬಿದ್ದರೆ, ಗೆಲುವು ಸುಲಭ ಎನ್ನುವ ಲೆಕ್ಕಾಚಾರ ರಾಜೇಂದ್ರಕುಮಾರ್ ಬಳಗದ್ದಾಗಿದೆ.

ಬಿಜೆಪಿ ಒಂದು ಸ್ಥಾನಕ್ಕೆ ಮಾತ್ರ ಸ್ಪರ್ಧಿಸಲು ನಿರ್ಧರಿಸಿದ್ದು, ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಕಣಕ್ಕಿಳಿಸಲು ಈಗಾಗಲೇ ತೀರ್ಮಾನಿಸಲಾಗಿದೆ
ಕುಯಿಲಾಡಿ ಸುರೇಶ್ ನಾಯಕ್
ಬಿಜೆಪಿ ಉಡುಪಿ ಜಿಲ್ಲಾ ಘಟಕದ ಅಧ್ಯಕ್ಷ

ಈಗಾಗಲೇ ಒಂದು ಸುತ್ತಿನ ಸಭೆ ನಡೆಸಲಾಗಿದೆ. ಸಾಧಕ–ಬಾಧಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಶೀಘ್ರದಲ್ಲಿಯೇ ಸಮರ್ಥ ಅಭ್ಯರ್ಥಿ ಆಯ್ಕೆ ನಡೆಯಲಿದೆ
ಕೆ. ಹರೀಶ್‌ಕುಮಾರ್
ಕಾಂಗ್ರೆಸ್ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ


ಕೋಟ ಶ್ರೀನಿವಾಸ ಪೂಜಾರಿ



ವಿಧಾನ ಪರಿಷತ್‌ನಲ್ಲಿ ಸಹಕಾರ ಕ್ಷೇತ್ರಕ್ಕೆ ಪ್ರಾತಿನಿಧ್ಯ ಅಗತ್ಯವಾಗಿದೆ. ಸಹಕಾರಿಗಳ ಒತ್ತಾಯದಂತೆ ಈ ಬಾರಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದೇನೆ
ಎಂ.ಎನ್. ರಾಜೇಂದ್ರಕುಮಾರ್
ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ

341 ಕಿ.ಮೀ. ಉದ್ದದ ಮಾರ್ಗ; ಉತ್ತರ ಪ್ರದೇಶದ ಪೂರ್ವ–ಪಶ್ಚಿಮ ಭಾಗಗಳಿಗೆ ನೇರ ಸಂಪರ್ಕ

ಪೂರ್ವಾಂಚಲ ಎಕ್ಸ್‌ಪ್ರೆಸ್ ಹೆದ್ದಾರಿ ಲೋಕಾರ್ಪಣೆ


ಸುಲ್ತಾನ್‌ಪುರ (ಪಿಟಿಐ): 341 ಕಿ.ಮೀ. ಉದ್ದದ ಪೂರ್ವಾಂಚಲ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಲೋಕಾರ್ಪಣೆ ಮಾಡಿದರು. ಲಖನೌ–ಗಾಜಿಪುರ ಜಿಲ್ಲೆಗಳನ್ನು ಸಂಪರ್ಕಿಸುವ ಈ ಹೆದ್ದಾರಿಯು ಉತ್ತರ ಪ್ರದೇಶದ ಎಂಟು ಜಿಲ್ಲೆಗಳನ್ನು ಹಾದುಹೋಗುತ್ತದೆ. ಹೆದ್ದಾರಿ ಉದ್ಘಾಟನೆ ಬಳಿಕ ಸುಲ್ತಾನ್‌ಪುರದಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಪ್ರಧಾನಿ ಮಾತನಾಡಿದರು.



ಪ್ರಧಾನಿ ನರೇಂದ್ರ ಮೋದಿ ಅವರು ಪೂರ್ವಾಂಚಲ ಹೆದ್ದಾರಿ ಉದ್ಘಾಟಿಸುವುದಕ್ಕೆ ವಾಯುಪಡೆಯ ವಿಮಾನದಲ್ಲಿ ಆ ಹೆದ್ದಾರಿಯಲ್ಲಿ ಇರುವ ಏರ್‌ಸ್ಟ್ರಿಪ್‌ನಲ್ಲಿ ಮಂಗಳವಾರ ಬಂದಿಳಿದರು —ಪಿಟಿಐ ಚಿತ್ರ

ಹೆದ್ದಾರಿ ಮಹತ್ವ

- ತುರ್ತು ಸಮಯದಲ್ಲಿ ವಿಮಾನಗಳು ಇಳಿಯುವಂತೆ ಪೂರ್ವಾಂಚಲ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಏರ್‌ಸ್ಟ್ರಿಪ್ ನಿರ್ಮಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸಿ–130 ಜೆ ಸೂಪರ್ ಹರ್ಕ್ಯುಲಸ್ ಸೇನಾ ವಿಮಾನದಲ್ಲಿ ಬಂದು ರಸ್ತೆಯಲ್ಲಿ ಇಳಿದರು
- ರಾಜಧಾನಿ ಲಖನೌ ಜೊತೆಗೆ ರಾಜ್ಯದ ಪೂರ್ವ ಭಾಗವನ್ನು ಈ ಹೆದ್ದಾರಿ ಬೆಸೆದಿದೆ. ಅಷ್ಟೇ ಅಲ್ಲ, ಆಗ್ರಾ–ಲಖನೌ ಮತ್ತು ಯಮುನಾ ಎಕ್ಸ್‌ಪ್ರೆಸ್ ಹೆದ್ದಾರಿ ಮೂಲಕ ರಾಷ್ಟ್ರ ರಾಜಧಾನಿಯನ್ನೂ ಇದು ಸಂಪರ್ಕಿಸುತ್ತದೆ
- ಆರು ಪಥದ ಈ ಹೆದ್ದಾರಿಯನ್ನು ಭವಿಷ್ಯದಲ್ಲಿ ಎಂಟು ಪಥದ ಹೆದ್ದಾರಿಯಾಗಿ ಪರಿವರ್ತಿಸಲು ಸಾಧ್ಯವಾಗುವ ರೀತಿಯಲ್ಲಿ ನಿರ್ಮಾಣ ಮಾಡಲಾಗಿದೆ
- 2017ರಲ್ಲಿ ರಾಜ್ಯದಲ್ಲಿ ಆರು ಹೆದ್ದಾರಿಗಳನ್ನು ನಿರ್ಮಿಸಲು ಅನುಮೋದನೆ ನೀಡಲಾಗಿತ್ತು. ಈ ಪೈಕಿ ಪೂರ್ವಾಂಚಲ ಹೆದ್ದಾರಿಯು ಮೊದಲು ಉದ್ಘಾಟನೆಯಾಗಿದೆ
- ಲಖನೌ, ಬಾರಾಬಂಕಿ, ಅಮೇಠಿ, ಸುಲ್ತಾನ್‌ಪುರ, ಅಯೋಧ್ಯೆ, ಅಂಬೇಡ್ಕರ್ ನಗರ, ಅಜಂಗಡ, ಗಾಜಿಪುರ ಜಿಲ್ಲೆಗಳ ಮೂಲಕ ಹೆದ್ದಾರಿ ಹಾದು ಹೋಗುತ್ತದೆ
- ಪರಿಣಾಮಕಾರಿ ಅನುಷ್ಠಾನಕ್ಕಾಗಿ ಯೋಜನೆಯನ್ನು ಎಂಟು ವಿಭಾಗಗಳಾಗಿ ವಿಂಗಡಿಸಲಾಗಿತ್ತು. 2018ರಲ್ಲಿ ಆರಂಭವಾದ ಕಾಮಗಾರಿಗೆ 2021ರ ನವೆಂಬರ್‌ನಲ್ಲಿ ಪೂರ್ಣಗೊಳಿಸುವ ಗಡುವು ನೀಡಲಾಗಿತ್ತು. ಅದರಂತೆಯೇ ಕಾಮಗಾರಿ ಮುಕ್ತಾಯವಾಗಿದೆ
- ವಾಹನಗಳು ಹೆದ್ದಾರಿಯನ್ನು ನೇರವಾಗಿ ಪ್ರವೇಶಿಸದಂತೆ ನಿಯಂತ್ರಿಸುವ ವ್ಯವಸ್ಥೆ ರೂಪಿಸಲಾಗಿದ್ದು, ಇಂಧನ ಹಾಗೂ ಸಮಯ ಉಳಿಸುವ, ಮಾಲಿನ್ಯ ನಿಯಂತ್ರಣ ಮಟ್ಟ ಕಾಯ್ದುಕೊಳ್ಳುವ, ಅಪಘಾತಗಳನ್ನು ತಗ್ಗಿಸುವ ಉದ್ದೇಶ ಇಟ್ಟುಕೊಂಡು ವಿನ್ಯಾಸ ಮಾಡಲಾಗಿದೆ
- ಈಗಾಗಲೇ ಇರುವ ಆಗ್ರಾ–ಲಖನೌ ಹೆದ್ದಾರಿಯನ್ನು ಇದು ಸಂಪರ್ಕಿಸುವುದರಿಂದ ರಾಜ್ಯದ ಪೂರ್ವ ಭಾಗವು ಪಶ್ಚಿಮ ಭಾಗದ ಜೊತೆ ಬೆಸೆದು, ಈ ಭಾಗ ಬೃಹತ್ ಕೈಗಾರಿಕಾ ಕಾರಿಡಾರ್ ಆಗಿ ಬದಲಾಗಲಿದೆ, ಉದ್ಯೋಗಾವಕಾಶ ಹೆಚ್ಚಲಿವೆ ಎಂದು ನಿರೀಕ್ಷಿಸಲಾಗಿದೆ
- ಲಖನೌ–ಗಾಜಿಪುರ ನಡುವಣ ಪ್ರಯಾಣದ ಅವಧಿಯು ಆರು ತಾಸಿನಿಂದ ಮೂರುವರೆ ತಾಸಿಗೆ ಇಳಿಯಲಿದೆ



ಪೂರ್ವಾಂಚಲ ಎಕ್ಸ್‌ಪ್ರೆಸ್ ವೇ	
ಹೆದ್ದಾರಿ ಉದ್ದ	341 ಕಿ.ಮೀ.
ವೆಚ್ಚ	₹22,500 ಕೋಟಿ
ಏರ್‌ಸ್ಟ್ರಿಪ್ ಉದ್ದ	3.2 ಕಿ.ಮೀ.
ಮೇಲ್ಸೇತುವೆ	22
ರೈಲ್ವೆ ಮೇಲ್ಸೇತುವೆ	7
ಪ್ರಮುಖ ಸೇತುವೆಗಳು	7
ಟೋಲ್ ಪ್ಲಾಜಾ	6
ಹೆದ್ದಾರಿ ಸುರಂಗ	45

ಆರು ಪಥಗಳ ಪೂರ್ವಾಂಚಲ ಎಕ್ಸ್‌ಪ್ರೆಸ್ ಹೆದ್ದಾರಿಯು ಉತ್ತರ ಪ್ರದೇಶದ ಪೂರ್ವಭಾಗದ ಜೀವನಾಡಿಯಾಗಲಿದೆ. ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಕಾರಣವಾಗಲಿದೆ. ಹೆದ್ದಾರಿಯು ವಾಯುಪಡೆಗೂ ಶಕ್ತಿ ತುಂಬಲಿದೆ
ನರೇಂದ್ರ ಮೋದಿ, ಪ್ರಧಾನಿ

ಹಿಂದಿನ ಸರ್ಕಾರಗಳಿಗೆ ಮೋದಿ ಟೀಕೆ

ಉತ್ತರ ಪ್ರದೇಶದಲ್ಲಿ ಈ ಹಿಂದೆ ಆಡಳಿತ ನಡೆಸಿದ ಸರ್ಕಾರಗಳು ಹಾಗೂ ಪ್ರತಿಪಕ್ಷಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ತರಾಟೆಗೆ ತೆಗೆದುಕೊಂಡರು. ‘ಉತ್ತರ ಪ್ರದೇಶದ ಪೂರ್ವ ಭಾಗವನ್ನು ಹಿಂದಿನ ಸರ್ಕಾರಗಳು ‘ಮಾಫಿಯಾವಾಡ’ ಮಾಡಿದ್ದವು. ಆದರೆ ಬಿಜೆಪಿ ಸರ್ಕಾರವು ಈ ಭಾಗದಲ್ಲಿ ಅಭಿವೃದ್ಧಿ ವಿಚಾರದಲ್ಲಿ ಹೊಸ ಅಧ್ಯಾಯ ಬರೆದಿದೆ’ ಎಂದು ಹೇಳಿದರು.

ಹಿಂದಿನ ಸರ್ಕಾರಗಳ ಅವಧಿಯಲ್ಲಿ ಅಭಿವೃದ್ಧಿ ಎಂಬುದು ಮುಖ್ಯಸ್ಥರು ಹಾಗೂ ಅವರ ಕುಟುಂಬದವರು ಇರುವ ಜಾಗಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಬಿಜೆಪಿ ಸರ್ಕಾರವು ಪಶ್ಚಿಮ ಭಾಗದ ಜೊತೆ ಪೂರ್ವ ಭಾಗಕ್ಕೂ ಸಮಾನ ಆದ್ಯತೆ ನೀಡಿ ಅಭಿವೃದ್ಧಿಗೆ ಕಾರಣವಾಗಿದೆ ಎಂದು ಪ್ರತಿಪಾದಿಸಿದರು.

ನಾನು ಮುಖ್ಯಮಂತ್ರಿ ಆಗಿದ್ದಾಗ ಒಪ್ಪಿಗೆ ನೀಡಿದ್ದ ಹೆದ್ದಾರಿಯನ್ನು ಉದ್ಘಾಟಿಸುವ ಮೂಲಕ ಬಿಜೆಪಿಯು ಯೋಜನೆಯ ಶ್ರೇಯ ಪಡೆಯುತ್ತಿದೆ
ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಸಾಂಕೇತಿಕವಾಗಿ ಹೆದ್ದಾರಿ ಉದ್ಘಾಟಿಸಿದ ಎಸ್‌ಪಿ



ಸಮಾಜವಾದಿ ಪಕ್ಷದ ನೂರಾರು ಕಾರ್ಯಕರ್ತರು ಸೈಕಲ್ ಮೂಲಕ ಅಜಂಗಡ ಜಿಲ್ಲೆಯಲ್ಲಿ ಹೆದ್ದಾರಿಯಲ್ಲಿ ಸಂಚರಿಸಿ, ಸಾಂಕೇತಿಕವಾಗಿ ಹೆದ್ದಾರಿಯನ್ನು ಉದ್ಘಾಟಿಸಿದರು. ಹೆದ್ದಾರಿಯಲ್ಲಿ ಹೂವಿನ ಪಕಳೆಗಳನ್ನು ಚೆಲ್ಲಿ, ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ಪರ ಘೋಷಣೆಗಳನ್ನು ಕೂಗಿದರು.

ಹೆದ್ದಾರಿ ನಿರ್ಮಾಣದ ಶ್ರೇಯ ತನ್ನದು ಎಂದು ಸಮಾಜವಾದಿ ಪಕ್ಷ ವಾದಿಸಿದೆ. ‘ಉದ್ಘಾಟನೆಯ ರಿಬ್ಬನ್ ಲಖನೌದಿಂದ ಪೂರೈಕೆಯಾಗಿದೆ. ಆದರೆ, ಕತ್ತರಿಯು ದೆಹಲಿಯಿಂದ ಬಂದಿದೆ’ ಎಂದು ಅಖಿಲೇಶ್ ಟ್ವೀಟ್ ಮಾಡಿದ್ದಾರೆ.

ಅಖಿಲೇಶ್ ವಿರುದ್ಧ ಬಿಜೆಪಿ ಹರಿಹಾಯ್ದಿದೆ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ಶ್ರೇಯವೂ ತಮ್ಮದು ಎಂಬುದಾಗಿ ಅಖಿಲೇಶ್ ಪ್ರತಿಪಾದಿಸಿದ್ದರು ಎಂದು ಹೇಳಿದೆ.

ಮೇಯರ್, ಉಪ ಮೇಯರ್ ಚುನಾವಣೆ ಮುಂದೂಡಿಕೆ

ಒಂದನೇ ಪುಟದಿಂದ...

‘ಏಳು ಜನ ವಿಧಾನ ಪರಿಷತ್ ಸದಸ್ಯರು ಮೇಯರ್ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಿಸಲು ಮಾತ್ರ ಇಲ್ಲಿಯ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಪ್ರಯತ್ನ ನಡೆಸಿದ್ದಾರೆ. ಹೀಗಾಗಿ ಮತದಾರರ ಪಟ್ಟಿಯಲ್ಲಿ ಹೆಸರುಗಳ ಸೇರ್ಪಡೆಗೆ ಅಂಗೀಕಾರ ನೀಡಬಾರದು ಎಂದು ನ್ಯಾಯಾಲಯದ ಮೊರೆ ಹೋಗಿದ್ದೇವೆ’ ಎಂದು ಕೆಪಿಸಿಸಿ ವಕ್ತಾರ ಡಾ.ಶರಣಪ್ರಕಾಶ ಪಾಟೀಲ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

ಪರಿಷತ್ ಕಾರ್ಯದರ್ಶಿಯಿಂದ ಪತ್ರ: ವಿಧಾನ ಪರಿಷತ್‌ನ ಏಳು ಜನ ಬಿಜೆಪಿ ಸದಸ್ಯರು ತಮ್ಮ ನೋಡಲ್ ಜಿಲ್ಲೆಯನ್ನಾಗಿ ಕಲಬುರಗಿಯನ್ನು ಆಯ್ಕೆ ಮಾಡಿಕೊಂಡಿದ್ದು, ಅದರಂತೆ ಅವರ ಹೆಸರನ್ನು ಜಿಲ್ಲೆಯ ದಾಖಲೆಗಳಲ್ಲಿ ಸೇರ್ಪಡೆ ಮಾಡಬೇಕು ಎಂದು ವಿಧಾನ ಪರಿಷತ್ ಕಾರ್ಯದರ್ಶಿ ಅವರು ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ ಅವರಿಗೆ ಪತ್ರ ಬರೆದಿದ್ದಾರೆ.

ಆದರೆ, ಮತದಾರರ ಪಟ್ಟಿಯಲ್ಲಿ ಏಳು ಜನ ಸದಸ್ಯರ ಹೆಸರು ಸೇರ್ಪಡೆಯಾಗಿರುವ ಬಗ್ಗೆ ಉಪವಿಭಾಗಾಧಿಕಾರಿ ಇನ್ನೂ ಸ್ಪಷ್ಟಪಡಿಸಿಲ್ಲ.

ಕೆಲವು ತಿಂಗಳ ಹಿಂದೆ ಪರಿಷತ್ ಸದಸ್ಯರಾದ ಲಕ್ಷ್ಮಣ ಸವದಿ (ಅಥಣಿ), ತುಳಸಿ ಮುನಿರಾಜುಗೌಡ (ಬೆಂಗಳೂರು), ಪ್ರತಾಪ ಸಿಂಹ ನಾಯಕ್ (ಉಜಿರೆ), ಲೆಹರ್ ಸಿಂಗ್ (ಬೆಂಗಳೂರು), ಭಾರತಿ ಶೆಟ್ಟಿ (ಬೆಂಗಳೂರು), ಡಾ.ಸಾಬಣ್ಣ ತಳವಾರ (ಬೆಳಗಾವಿ), ರಘುನಾಥರಾವ್ ಮಲ್ಕಾಪುರೆ (ಬೀದರ್) ಅವರು ತಮ್ಮ ನೋಡಲ್ ಜಿಲ್ಲೆಯನ್ನಾಗಿ ಕಲಬುರಗಿ ಆಯ್ಕೆ ಮಾಡಿಕೊಂಡಿದ್ದೇವೆ ಎಂದು ಪರಿಷತ್ ಕಾರ್ಯದರ್ಶಿಗೆ ಪತ್ರ ನೀಡಿದ್ದರು.

ಈ ಕುರಿತು ಸೋಮವಾರ ಪ್ರತಿಕ್ರಿಯೆ ನೀಡಿದ್ದ ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ, ‘ಚುನಾಯಿತ ಜನಪ್ರತಿನಿಧಿಗಳು ಬೇರೆ ಬೇರೆ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮತದಾನ ಮಾಡಲು ಹೆಸರು ನೋಂದಾಯಿಸಿಕೊಳ್ಳಬಹುದು. ಆದರೆ, ಒಂದು ನಿರ್ದಿಷ್ಟ ಸ್ಥಳದಲ್ಲಿ ಮತದಾನ ಮಾಡುವುದಾಗಿ ತಿಳಿಸಬೇಕು’ ಎಂದಿದ್ದರು.

ಹೈಕೋರ್ಟ್‌ನ ಕಲಬುರಗಿ ಪೀಠದಲ್ಲಿ ಬುಧವಾರ ಅರ್ಜಿ ವಿಚಾರಣೆಗೆ ಬರಲಿದೆ. ಏಕಾಏಕಿ ಚುನಾವಣೆ ಮುಂದೂಡಿರುವ ಕ್ರಮವನ್ನೂ ನಾವು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇವೆ
ಡಾ.ಶರಣಪ್ರಕಾಶ ಪಾಟೀಲ
ಕೆಪಿಸಿಸಿ ವಕ್ತಾರ

ಮನೆ ಬಾಡಿಗೆ ಬರೀ ₹3 ಸಾವಿರ!

ಲೆಹರ್ ಸಿಂಗ್, ಲಕ್ಷ್ಮಣ ಸವದಿ, ರಘುನಾಥರಾವ್ ಮಲ್ಕಾಪುರೆ, ಪ್ರತಾಪಸಿಂಹ ನಾಯಕ, ತುಳಸಿ ಮುನಿರಾಜುಗೌಡ, ಭಾರತಿ ಶೆಟ್ಟಿ ಅವರು ಕಲಬುರಗಿ ನಗರದಲ್ಲಿ ಮನೆ ಬಾಡಿಗೆ ಪಡೆದಿದ್ದು, ಬಾಡಿಗೆ ಮೊತ್ತ ತಿಂಗಳಿಗೆ ₹3 ಸಾವಿರ ಮಾತ್ರ! ಇನ್ನು ಸಾಬಣ್ಣ ಅವರು ಪಡೆದಿರುವ ಮನೆ ಬಾಡಿಗೆ ತಿಂಗಳಿಗೆ ₹2500ವಷ್ಟೇ!

ಇವರ ಮನೆ ಬಾಡಿಗೆ ಒಪ್ಪಂದ ಪತ್ರದಲ್ಲಿ ಈ ಮೊತ್ತವನ್ನು ನಮೂದಿಸಲಾಗಿದೆ.

ಸೆಪ್ಟೆಂಬರ್‌ನಲ್ಲಿ ಮನೆ ಬಾಡಿಗೆ ಒಪ್ಪಂದ ಮಾಡಿಕೊಂಡಿದ್ದು, ಆರು ತಿಂಗಳಿನಿಂದ ಕಲಬುರಗಿಯಲ್ಲಿ ವಾಸವಾಗಿದ್ದಾಗಿ ಅವರು ಮತದಾರರ ಪಟ್ಟಿ ನೋಂದಣಾಧಿಕಾರಿಗೆ ಸಲ್ಲಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಆಡಳಿತ ಯಂತ್ರದ ದುರ್ಬಳಕೆ ವಿರೋಧ ಪಕ್ಷಗಳ ಆಕ್ಷೇಪ

ಲಖನೌ: ಸುಲ್ತಾನ್‌ಪುರ ಜಿಲ್ಲೆಯಲ್ಲಿ ‘ಪೂರ್ವಾಂಚಲ ಎಕ್ಸ್‌ಪ್ರೆಸ್‌ವೇ’ಗೆ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಚಾಲನೆ ನೀಡಿದ ಕಾರ್ಯಕ್ರಮದಲ್ಲಿ ಭಾಗವಹಿಸಲು, ಜಿಲ್ಲಾಡಳಿತವೇ ಜನರಿಗೆ ನೂರಾರು ಬಸ್ಸುಗಳ ವ್ಯವಸ್ಥೆ ಮಾಡಿದೆ ಎಂಬ ಆರೋಪ ಕೇಳಿ ಬಂದಿದೆ.

ಜಿಲ್ಲಾಡಳಿತದ ಈ ನಡೆಗೆ ಆಕ್ಷೇಪ ವ್ಯಕ್ತಪಡಿಸಿರುವ ವಿರೋಧ ಪಕ್ಷಗಳ ನಾಯಕರು, ರಾಜ್ಯದಲ್ಲಿನ ಬಿಜೆಪಿ ಸರ್ಕಾರವು ಸರ್ಕಾರಿ ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಹರಿಹಾಯ್ದಿದ್ದಾರೆ.

ಪ್ರಧಾನಿ ಭಾಗಿಯಾದ ಈ ಕಾರ್ಯಕ್ರಮಕ್ಕೆ ಹಾಗೂ ಇದಕ್ಕಿಂತ ಮುನ್ನ ನಡೆದ ರ‍್ಯಾಲಿಗೆ ಸುಮಾರು 20 ಸಾವಿರ ಜನರನ್ನು ಕರೆತರಲು, ಜಿಲ್ಲೆಯ ಪ್ರತಿ ತಾಲ್ಲೂಕಿಗೂ ಉತ್ತರ ಪ್ರದೇಶದ ಸರ್ಕಾರಿ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಜಿಲ್ಲಾಡಳಿತವು ಕಳುಹಿಸಿಕೊಟ್ಟಿತ್ತು. ಹೀಗೆ ಬಸ್ಸಿನಲ್ಲಿ ಬಂದವರಿಗೆ ಜಿಲ್ಲಾಡಳಿತದ ವತಿಯಿಂದಲೇ ಉಪಾಹಾರ ಹಾಗೂ ಊಟದ ವ್ಯವಸ್ಥೆ ಮಾಡಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಸರ್ಕಾರವು ಸಾರ್ವಜನಿಕರ ಹಣವನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಹೇಳಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ‘ಲಾಕ್‌ಡೌನ್ ಅವಧಿಯಲ್ಲಿ, ಕೆಲಸ ಮಾಡುತ್ತಿದ್ದ ಸ್ಥಳದಿಂದ ತಮ್ಮೂರಿಗೆ ಹೊರಟು ನಿಂತ ಜನರಿಗೆ ಬಸ್ಸಿನ ವ್ಯವಸ್ಥೆ ಮಾಡಲು ಬಿಜೆಪಿ ಸರ್ಕಾರಕ್ಕೆ ಆಗಲಿಲ್ಲ. ಆದರೆ, ಪ್ರಧಾನಿ ಹಾಗೂ ಗೃಹಸಚಿವರು ಭಾಗಿಯಾದ ಕಾರ್ಯಕ್ರಮಕ್ಕೆ ಜನರನ್ನು ಕರೆತರಲು ಬಸ್ ವ್ಯವಸ್ಥೆ ಮಾಡಿದೆ’ ಎಂದು ಟ್ವೀಟ್ ಮಾಡಿದ್ದಾರೆ.


ಪ್ರಿಯಾಂಕಾ ಗಾಂಧಿ

ಸುಲ್ತಾನ್‌ಪುರದಲ್ಲಿ ಸಂಚರಿಸುತ್ತಿದ್ದ ನೂರಾರು ಬಸ್‌ಗಳನ್ನು ಕಾರ್ಯಕ್ರಮಕ್ಕೆ ಜನರನ್ನು ಕರೆತರಲು ನಿಯೋಜಿಸಲಾಗಿತ್ತು. ಹಾಗಾಗಿ, ಸಾಮಾನ್ಯ ಜನರು ತಮಗೆ ಬೇಕಾದಲ್ಲಿಗೆ ಸಂಚರಿಸುವುದು ಕಷ್ಟವಾಯಿತು ಎಂಬ ಸ್ಥಳೀಯ ಮಾಧ್ಯಮಗಳ ವರದಿಯನ್ನೂ ಪ್ರಿಯಾಂಕಾ ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.


ಬಸ್ ವ್ಯವಸ್ಥೆ ಮಾಡಿದ ನಡೆಯನ್ನು ರಾಜ್ಯ ಸರ್ಕಾರದ ಈ ನಡೆಯನ್ನು ಟೀಕಿಸಿರುವ ಸಮಾಜವಾದಿ ಪಕ್ಷ, ‘ಬಿಜೆಪಿ ಸರ್ಕಾರದ ಕಾರ್ಯಕ್ರಮ ಮತ್ತು ರ‍್ಯಾಲಿಗಳಲ್ಲಿ ಜನರು ಭಾಗವಹಿಸುತ್ತಿಲ್ಲ; ಪ್ರಧಾನಿ ಮಾತನ್ನು ಕೇಳಲು ಯಾರೊಬ್ಬರೂ ಬಯಸುತ್ತಿಲ್ಲ ಎಂಬುದನ್ನು ಇದು ಸಾಬೀತುಪಡಿಸಿದೆ. ಹೀಗಾಗಿಯೇ ಸರ್ಕಾರ ಬಸ್ಸಿನ ಈ ವ್ಯವಸ್ಥೆ’ ಎಂದು ಹೇಳಿದೆ.

ನರೇಗಾ ಅಡಿ 150 ದಿನ ಉದ್ಯೋಗ

ಬೆಂಗಳೂರು: ರಾಜ್ಯದ ಪ್ರವಾಹ ಪೀಡಿತ ತಾಲ್ಲೂಕುಗಳಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 150 ದಿನಗಳ ಉದ್ಯೋಗ ನೀಡುವ ಸಂಬಂಧ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಆದೇಶ ಹೊರಡಿಸಿದೆ.

2021–22 ನೇ ಸಾಲಿನಲ್ಲಿ ಪ್ರವಾಹ ಪೀಡಿತ ಎಂದು ಘೋಷಿಸಲಾದ 17 ಜಿಲ್ಲೆಗಳ 99 ತಾಲ್ಲೂಕುಗಳಲ್ಲಿ ನರೇಗಾ ಯೋಜನೆಯಡಿ ಪ್ರತಿ ಕುಟುಂಬಕ್ಕೆ ನೀಡಲಾಗುವ 100 ದಿನಗಳ ಕೆಲಸದ ಜತೆಗೆ 50 ದಿನಗಳ ಕೆಲಸವನ್ನು ಹೆಚ್ಚುವರಿಯಾಗಿ ನೀಡಲು ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿದೆ. ಕೇಂದ್ರ ಸರ್ಕಾರದ ಉಲ್ಲೇಖದನ್ವಯ ಈ ಆದೇಶ ಹೊರಡಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ಈ ಯೋಜನೆಯಡಿ ಕೌಶಲ್ಯೇತರ ಕೆಲಸಗಳನ್ನು ಮಾಡಿಸಲಾಗುವುದು ಎಂದೂ ಹೇಳಿದ್ದಾರೆ.



ಕ್ರಿಪ್ಟೋಕರೆನ್ಸಿ ಎಂಬ 'ಮಾಯ'ಧನ



ಬ್ಯಾಂಕ್‌ನಲ್ಲಿಟ್ಟ ಹಣ ಕಳೆದುಕೊಂಡರೆ ಅದಕ್ಕೆ ಬ್ಯಾಂಕ್ ಜವಾಬ್ದಾರನಾಗುತ್ತದೆ. ಆದರೆ, ಕ್ರಿಪ್ಟೋಕರೆನ್ಸಿ ವಿಕೇಂದ್ರಿತ ವ್ಯವಸ್ಥೆ. ಇಲ್ಲಿ ಯಾರೂ ಯಾರನ್ನೂ ನಿಯಂತ್ರಿಸುವುದಿಲ್ಲ. ಬಲಿಷ್ಠನಾಗಿದ್ದವನು ಬದುಕಿಕೊಳ್ಳುತ್ತಾನೆ.

ಕೃಷ್ಣ ಭಟ್

ಕಳೆದ ಕೆಲವು ದಿನಗಳಿಂದ ಕರ್ನಾಟಕದಲ್ಲಿ ಬಿಟ್‌ಕಾಯಿನ್ ಸುದ್ದಿ ಹೆಚ್ಚು ಕೇಳಿಬರುತ್ತಿದೆ. ಅದೊಂದು ಹವಾಲಾ ಹಗರಣದಂತೆಯೋ, ಅಕ್ರಮ ವಹಿವಾಟಿನ ಹಾಗೆಯೋ ಕಾಣಿಸಬಹುದಾದರೂ, ಬಿಟ್‌ಕಾಯಿನ್ ಎಂಬ ಕ್ರಿಪ್ಟೋಕರೆನ್ಸಿ ಬಗ್ಗೆ ತಿಳಿದುಕೊಂಡರೆ ಈಗಿನ ಪ್ರಕರಣಕ್ಕೂ ಕ್ರಿಪ್ಟೋಕರೆನ್ಸಿಗೂ ಇರುವ ವ್ಯತ್ಯಾಸ ತಿಳಿದೀತು. ಏಕೆಂದರೆ, ಸದ್ಯ ಚಾಲ್ತಿಯಲ್ಲಿರುವ ನೂರಕ್ಕೂ ಹೆಚ್ಚು ಕ್ರಿಪ್ಟೋಕರೆನ್ಸಿಯ ಪೈಕಿ ಅತ್ಯಂತ ಜನಪ್ರಿಯ ಮತ್ತು ಮುಂಚೂಣಿಯಲ್ಲಿ ಇರುವುದು ಬಿಟ್‌ಕಾಯಿನ್.

ಇದೊಂದು ಕರೆನ್ಸಿ ನೋಟು ಇದ್ದ ಹಾಗೆ. ಆದರೆ, ಕಾಗದದಲ್ಲಿ ಇರೋದಿಲ್ಲ. ಬದಲಿಗೆ, ಕಂಪ್ಯೂಟರಿನಲ್ಲಿರುತ್ತದೆ. ಯಾರು, ಎಲ್ಲಿ, ಎಷ್ಟನ್ನು ಬೇಕಾದರೂ ಖರೀದಿ, ಮಾರಾಟ ಮಾಡಬಹುದು. ಇದನ್ನು ನಿಯಂತ್ರಿಸುವವರಿಲ್ಲದ್ದರಿಂದ, ಅಕ್ರಮಕ್ಕೂ ಬಳಕೆಯಾಗಬಹುದು, ಸಕ್ರಮಕ್ಕೂ ಬಳಕೆಯಾಗಬಹುದು. ಭಾರತದಲ್ಲಿ, ಇದು ಅಕ್ರಮವೂ ಅಲ್ಲ, ಸಕ್ರಮವೂ ಅಲ್ಲ. ಆರ್‌ಬಿಐ ಇದನ್ನು ಸಕ್ರಮ ಎಂದು ಘೋಷಿಸಿಲ್ಲ. ಆದರೆ, ಅಕ್ರಮ ಎಂದೂ ಹೇಳಿಲ್ಲ. ಹೀಗಾಗಿ, ಖರೀದಿ ಮಾಡುವವರು ಸೂಕ್ತ ತೆರಿಗೆ ಕಟ್ಟಿ ಇದನ್ನು ಖರೀದಿ ಮಾಡಬಹುದು. ಇದರಿಂದ ಆಗುವ ಎಲ್ಲ ನಷ್ಟ, ಲಾಭಕ್ಕೆ ಖರೀದಿಸಿದವರೇ ಹೊಣೆ.



ಸಾಮಾನ್ಯವಾಗಿ ಕರೆನ್ಸಿಯನ್ನು ಆಯಾ ದೇಶ ನಿಯಂತ್ರಿಸುತ್ತದೆ. ಆದರೆ, ಇದು ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಆಧರಿಸಿರುವುದರಿಂದ ಇದನ್ನು ನಿಯಂತ್ರಿಸುವ ಪ್ರಾಧಿಕಾರ ಎಂಬುದಿಲ್ಲ. ಹೀಗಾಗಿ, ಇದರ ಮೌಲ್ಯ ಏರಿಳಿತ ಹೆಚ್ಚು.

ತಂತ್ರಜ್ಞಾನ ಹೇಗೆ ಕೆಲಸ ಮಾಡುತ್ತದೆ?

ಬ್ಲಾಕ್‌ಚೈನ್ ತಂತ್ರಜ್ಞಾನದಲ್ಲಿ ಕ್ರಿಪ್ಟೋಕರೆನ್ಸಿಗೆ ನಾಲ್ಕು ಮುಖ್ಯ ಕೀ ಇರುತ್ತದೆ. ಒಂದು ಹ್ಯಾಶ್ ಕೀ. ಉದಾಹರಣೆಗೆ SHA256, ಪ್ರೈವೇಟ್ ಕೀ, ಪಬ್ಲಿಕ್ ಕೀ ಹಾಗೂ ಹಿಂದಿನ ವಹಿವಾಟಿನ ವಿವರ ಇರುವ ಹ್ಯಾಶ್ ಕೀ. ಇವೆಲ್ಲವೂ ಬ್ಲಾಕ್‌ಚೈನ್ ನೆಟ್‌ವರ್ಕ್‌ನ ಒಂದೊಂದು ಬ್ಲಾಕ್‌ನಲ್ಲಿ ಸಂಗ್ರಹವಾಗಿರುತ್ತದೆ. ಈ ಎಲ್ಲ ಕೀಗಳೂ ಪ್ರತಿ ವಹಿವಾಟಿಗೂ ಹೋಲಿಕೆಯಾಗಬೇಕಿರುತ್ತದೆ. ಆಗ ಮಾತ್ರ ಅದು ವರ್ಗಾವಣೆಯಾಗುತ್ತದೆ. ಒಂದು ವೇಳೆ ಯಾವುದೇ ಒಂದು ಕೀ ಹೋಲಿಕೆಯಾಗದಿದ್ದರೂ ಅದು ಅಮಾನ್ಯವಾಗುತ್ತದೆ. ಒಂದು ಬಿಟ್‌ಕಾಯಿನ್ ಅನ್ನೋ ಅಥವಾ ಯಾವುದೇ ಕ್ರಿಪ್ಟೋಕರೆನ್ಸಿಯನ್ನೂ ಹ್ಯಾಕ್ ಮಾಡಬೇಕು ಎಂದಾದರೆ ಜಗತ್ತಿನಲ್ಲಿರುವ ಕೋಟ್ಯಂತರ ಕಂಪ್ಯೂಟರ್‌ಗಳಲ್ಲಿರುವ ಕೀಗಳನ್ನು ಬದಲಿಸಬೇಕಾಗುತ್ತದೆ. ಹೀಗಾಗಿ, ಇದನ್ನು ಹ್ಯಾಕ್ ಮಾಡುವುದು ಸಾಧ್ಯವೇ ಇಲ್ಲ.

ಅಪಾಯವೂ ಇದೆ!

ಆದರೆ, ಈಗಿನ ಹ್ಯಾಕರ್‌ಗಳು ಸಾಮಾನ್ಯವಾಗಿ ಮಾಡುತ್ತಿರುವುದೇನೆಂದರೆ, ಕ್ರಿಪ್ಟೋಕರೆನ್ಸಿ ಸಂಸ್ಥೆಗಳು ತಮ್ಮ ಗ್ರಾಹಕರಿಗೆ ನೀಡಿದ ಪೋರ್ಟಲ್‌ನ ಪಾಸ್‌ವರ್ಡ್ ಕದಿಯುವುದು. ಕ್ರಿಪ್ಟೋಕರೆನ್ಸಿ ಸಂಸ್ಥೆಗಳು ತಮ್ಮ ಗ್ರಾಹಕರಿಗೆ ಡಿಜಿಟಲ್ ವಾಲೆಟ್ ನೀಡಿರುತ್ತವೆ. ಅಲ್ಲಿ, ಅವರು ಖರೀದಿಸಿದ ಕರೆನ್ಸಿ ಇರುತ್ತವೆ. ಹ್ಯಾಕರ್‌ಗಳು ಈ ಡಿಜಿಟಲ್ ವಾಲೆಟ್‌ನ ಪಾಸ್‌ವರ್ಡ್ ಕದ್ದು, ಅಲ್ಲಿಂದ ಕ್ರಿಪ್ಟೋಕರೆನ್ಸಿಯನ್ನು ತಮ್ಮ ವಾಲೆಟ್‌ಗಳಿಗೆ ವರ್ಗಾಯಿಸಿಕೊಳ್ಳುತ್ತಾರೆ.

ಎಷ್ಟು ಸುರಕ್ಷಿತ?

ಕ್ರಿಪ್ಟೋಕರೆನ್ಸಿಯಲ್ಲಿ ಹಲವು ರೀತಿಯ ಹೂಡಿಕೆ ಮಾಡುವವರು ಹಾಗೂ ವಹಿವಾಟು ನಡೆಸುವವರಿದ್ದಾರೆ. ಕಪ್ಪುಹಣವನ್ನು ಹೂಡಿಕೆ ಮಾಡುವವರದ್ದೇ ಒಂದು ಕಥೆಯಾದರೆ, ನಿಜವಾದ ಹೂಡಿಕೆ ಉದ್ದೇಶಕ್ಕೆ ತೆರಿಗೆ ಪಾವತಿ ಮಾಡಿ ಗಳಿಸಿದ ಹಣವನ್ನು ಹೂಡಿಕೆ ಮಾಡುವವರೂ ಇದ್ದಾರೆ. ಇವೆಲ್ಲದರ ಜೊತೆಗೆ, ಇದು ವಿಕೇಂದ್ರೀಕೃತ ಕರೆನ್ಸಿಯಾಗಿರುವುದರಿಂದ ಮಾದಕದ್ರವ್ಯ ವಹಿವಾಟಿಗಂತೂ ಡಾರ್ಕ್ ನೆಟ್‌ನಲ್ಲಿ ಇದರ ವಹಿವಾಟು ಜೋರಾಗಿ ನಡೆಯುತ್ತಿದೆ.

2009ರಲ್ಲಿ ಕ್ರಿಪ್ಟೋಕರೆನ್ಸಿ ಆರಂಭವಾಯಿತು. ಆಗ, ಒಂದು ಬಿಟ್‌ಕಾಯಿನ್ ಬೆಲೆ 8 ಸೆಂಟ್‌ಗಳಿದ್ದವು. ಅಂದರೆ, 17 ಪೈಸೆ. ಈ 13 ವರ್ಷಗಳಲ್ಲಿ ಬಿಟ್‌ಕಾಯಿನ್ ದರ ಸುಮಾರು ₹50 ಲಕ್ಷ ಆಗಿದೆ. ಬಿಟ್‌ಕಾಯಿನ್ ಜನಪ್ರಿಯವಾಗುತ್ತಿದ್ದಂತೆಯೇ ನೂರಕ್ಕೂ ಹೆಚ್ಚು ಕ್ರಿಪ್ಟೋಕರೆನ್ಸಿ ಇವೆ. ಹೊಸ ಹೊಸ ಕರೆನ್ಸಿಗಳು ಹುಟ್ಟಿಕೊಳ್ಳುತ್ತಲೇ ಇವೆ. ಕ್ರಿಪ್ಟೋಕರೆನ್ಸಿ ಹೆಸರಲ್ಲಿ ಹಲವು ರೀತಿಯ ಮೋಸಗಳೂ ನಡೆಯುತ್ತಿವೆ. ಇದು ಅನಿಯಂತ್ರಿತವಾದ್ದರಿಂದ, ಮೋಸ ಹೋಗುವ ಸಾಧ್ಯತೆ ಹೆಚ್ಚಿರುತ್ತದೆ. ಖರೀದಿ ಮಾಡುತ್ತಿರುವ ಕ್ರಿಪ್ಟೋಕರೆನ್ಸಿ ಎಷ್ಟು ಸುರಕ್ಷಿತ ಎಂದು ತಿಳಿದುಕೊಳ್ಳುವುದು ಸುಲಭವಲ್ಲ. ರಾತ್ರೋರಾತ್ರಿ ಕ್ರಿಪ್ಟೋಕರೆನ್ಸಿ ಸಿಸ್ಟಮ್ ಅನ್ನೇ ಅದನ್ನು ಶುರು ಮಾಡಿದವರು ಮುಚ್ಚಿಹಾಕಬಹುದು. ಒಂದು ವೇಳೆ, ಖರೀದಿ ಮಾಡಿದ ನಂತರವೂ ವಾಲೆಟ್ ಅನ್ನು ಹ್ಯಾಕ್ ಮಾಡಿ ಅದನ್ನು ಕದ್ದೊಯ್ಯುವ ಹ್ಯಾಕರ್‌ಗಳಿಂದ ರಕ್ಷಣೆ ಪಡೆದುಕೊಳ್ಳುವುದು ಅವರದ್ದೇ ಜವಾಬ್ದಾರಿ. ಒಂದು ಮೂಲಗಳ ಪ್ರಕಾರ ಜಗತ್ತಿನಲ್ಲಿ ಈಗ ಇರುವ ಶೇ. 30ರಷ್ಟು ಬಿಟ್‌ಕಾಯಿನ್‌ಗಳನ್ನು ಕಳ್ಳತನ ಮಾಡಲಾಗಿದೆ!

ಬ್ಯಾಂಕ್‌ನಲ್ಲಿಟ್ಟ ಹಣಕ್ಕೆ ಒಂದು ಮಿತಿಯವರೆಗೆ ವಿಮೆ ಇರುತ್ತದೆ. ಬ್ಯಾಂಕ್‌ನಲ್ಲಿಟ್ಟ ಹಣ ಕಳೆದುಕೊಂಡರೆ ಅದಕ್ಕೆ ಬ್ಯಾಂಕ್ ಜವಾಬ್ದಾರನಾಗುತ್ತದೆ. ಬ್ಯಾಂಕ್ ಮುಳುಗಿ ಹೋದರೆ, ಒಂದು ಹಂತದವರೆಗೆ ವಿಮೆ ನಮ್ಮನ್ನು ರಕ್ಷಿಸುತ್ತದೆ ಮತ್ತು ಆರ್‌ಬಿಐನಂತಹ ನಿಯಂತ್ರಕ ಸಂಸ್ಥೆಗಳನ್ನು ರಕ್ಷಣೆಗೆ ಇರುತ್ತವೆ. ಆದರೆ, ಕ್ರಿಪ್ಟೋಕರೆನ್ಸಿ ವಿಕೇಂದ್ರಿತ ವ್ಯವಸ್ಥೆ. ಇಲ್ಲಿ ಯಾರೂ ಯಾರನ್ನೂ ನಿಯಂತ್ರಿಸುವುದಿಲ್ಲ. ಬಲಿಷ್ಠನಾಗಿದ್ದವನು ಬದುಕಿಕೊಳ್ಳುತ್ತಾನೆ.

ಜಿಯೋಫೋನ್ ನೆಕ್ಸ್ಟ್: ಬೇರೆ ಸಿಮ್‌ಗೂ ಸಿದ್ಧ

ಅವಿನಾಶ್ ಬಿ.



ದೇಶದ ಜನರಿಗೆ ಅಗ್ಗದ ದರದಲ್ಲಿ ಇಂಟರ್‌ನೆಟ್ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಕ್ರಾಂತಿಕಾರಿ ಹೆಜ್ಜೆ ಇಟ್ಟಿದ್ದ ರಿಲಯನ್ಸ್ ಜಿಯೋ, ಇತ್ತೀಚೆಗೆ ಜಿಯೋಫೋನ್ ನೆಕ್ಸ್ಟ್ ಎಂಬ 'ಆಂಡ್ರಾಯ್ಡ್ ಗೋ' ಕಾರ್ಯಾಚರಣಾ ವ್ಯವಸ್ಥೆಯಿರುವ, ಅಗ್ಗದ ದರದ ಸ್ಮಾರ್ಟ್‌ಫೋನನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಒಂದು ವಾರ ಜಿಯೋಫೋನ್ ನೆಕ್ಸ್ಟ್ ಉಪಯೋಗಿಸಿ ನೋಡಿದಾಗ, ಹೇಗನಿಸಿತು? ಇಲ್ಲಿದೆ ಮಾಹಿತಿ.

ವಿನ್ಯಾಸ ಮತ್ತು ನೋಟ

ಆರಂಭದ ನೋಕಿಯಾ ಆಂಡ್ರಾಯ್ಡ್ ಫೋನ್‌ಗಳಂತೆಯೇ ಜಿಯೋಫೋನ್ ನೆಕ್ಸ್ಟ್ ಕೂಡ ಕಾಣಿಸುತ್ತದೆ. ಡಿಸ್‌ಪ್ಲೇಯ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಬೆಝೆಲ್ (ಖಾಲಿ ಜಾಗ) ಹೆಚ್ಚೇ ಇದೆ. ತೀರಾ ಹಗುರವಿದ್ದು, ಬಿಲ್ಡ್ ಗುಣಮಟ್ಟ ಚೆನ್ನಾಗಿದೆ. 5.45 ಇಂಚಿನ HD + ರೆಸೊಲ್ಯುಶನ್ ಇರುವ ಐಪಿಎಸ್ ಡಿಸ್‌ಪ್ಲೇ, ಕಾರ್ನಿಂಗ್ ಗೊರಿಲ್ಲಾ ಗ್ಲಾಸ್ ರಕ್ಷಣೆ ಇದೆ. ಬೆರಳಚ್ಚುನಿರೋಧಕ ಕೋಟಿಂಗ್ ಇದೆ ಎನ್ನಲಾಗುತ್ತಿದೆಯಾದರೂ, ಬೆರಳಚ್ಚು ಮೂಡುತ್ತದೆ. ಹಿಂಭಾಗದ ಕವಚ ತೆಗೆದು, ಬ್ಯಾಟರಿ, 2 ಸಿಮ್ ಕಾರ್ಡ್‌ಗಳು ಮತ್ತು ಮೆಮೊರಿ ಕಾರ್ಡ್ ಅಳವಡಿಸಬಹುದು.

ಗಮನಿಸಬೇಕಾದ ಅಂಶವೆಂದರೆ, ಪ್ರಧಾನ ಸಿಮ್ ಸ್ಲಾಟ್‌ನಲ್ಲಿ ರಿಲಯನ್ಸ್ ಜಿಯೋ ಸಿಮ್ ಕಾರ್ಡ್ ಇರುವುದು ಕಡ್ಡಾಯ. ಆದರೆ, ಎರಡನೇ ಸಿಮ್ ಸ್ಲಾಟ್‌ನಲ್ಲಿ ಬೇರೆ ಯಾವುದೇ ಕಂಪನಿಯ ಸಿಮ್ ಅಳವಡಿಸಬಹುದು ಮತ್ತು ಅದರಲ್ಲಿ ಇಂಟರ್‌ನೆಟ್ ಸೌಕರ್ಯವಿಲ್ಲ, ಕರೆ ಸೌಲಭ್ಯ ಮಾತ್ರ ಬಳಸಬಹುದು.

ಕಾರ್ಯಾಚರಣ ತಂತ್ರಾಂಶ

ಬೇರೆ ಫೋನ್ ತಯಾರಿಕಾ ಕಂಪನಿಗಳಂತೆ, ಗೂಗಲ್‌ನ ಆಂಡ್ರಾಯ್ಡ್ ಆಧಾರದಲ್ಲಿ ರಿಲಯನ್ಸ್ ಕೂಡ, ಗೂಗಲ್ ನೆರವಿನಿಂದ ಪ್ರಗತಿ ಹೆಸರಿನ ಕಾರ್ಯಾಚರಣಾ ವ್ಯವಸ್ಥೆಯನ್ನು ಇದರಲ್ಲಿ ಅಳವಡಿಸಿದೆ. ಬಹುತೇಕವಾಗಿ ಪ್ಯೂರ್ ಆಂಡ್ರಾಯ್ಡ್ ಅಥವಾ ಸ್ಟಾಕ್ ಆಂಡ್ರಾಯ್ಡ್ ಕಾರ್ಯಾಚರಣಾ ವ್ಯವಸ್ಥೆಯನ್ನೇ ಇದು ಹೋಲುತ್ತದೆ.

ಹೊಸದಾಗಿ ಸ್ಮಾರ್ಟ್‌ಫೋನ್ ಹೊಂದುವವರಿಗೆ ಜಿಯೋಫೋನ್ ನೆಕ್ಸ್ಟ್ ಇಷ್ಟವಾಗಬಹುದು. ಸಾಮಾನ್ಯ ಬಳಕೆಗೆ ಸೂಕ್ತ. 1.3GHz ಕ್ವಾಲ್‌ಕಂ ಸ್ನ್ಯಾಪ್‌ಡ್ರ್ಯಾಗನ್ 215 ಕ್ವಾಡ್ ಕೋರ್ ಪ್ರೊಸೆಸರ್ ಮತ್ತು 2ಜಿಬಿ RAM ಇದರಲ್ಲಿರುವುದರಿಂದ, ಹೆಚ್ಚಿನ ವೇಗ ನಿರೀಕ್ಷಿಸಲಾಗದು. ಬಹುತೇಕ ಎಲ್ಲ ಎಂಟ್ರಿ ಲೆವೆಲ್ ಸ್ಮಾರ್ಟ್‌ಫೋನ್‌ಗಳಂತೆಯೇ ಈ ಫೋನ್ ಕೂಡ ಕಾರ್ಯಾಚರಿಸುತ್ತದೆ. ಗೇಮಿಂಗ್‌ಗೆ ಪೂರಕವಲ್ಲದಿದ್ದರೂ ವಿಡಿಯೊಗಳನ್ನು ಟಿವಿಗೆ ಸ್ಟ್ರೀಮ್ ಮಾಡಲು ಸಮಸ್ಯೆಯಾಗಲಿಲ್ಲ.

ಅನುವಾದ, ಸ್ಕ್ರೀನ್ ಓದುವಿಕೆ

ಇಂಟರ್‌ನೆಟ್ ಸಂಪರ್ಕವಿರುವಾಗ, ಗೂಗಲ್ ಲೆನ್ಸ್ ಮತ್ತು ಗೂಗಲ್ ಟ್ರಾನ್ಸ್‌ಲೇಟ್ ತಂತ್ರಾಂಶಗಳ ನೆರವಿನಿಂದ ಅನುವಾದ ವ್ಯವಸ್ಥೆ ಸುಲಭವಾಗಿದೆ. ಗೂಗಲ್‌ನ ಕನ್ನಡ-ಇಂಗ್ಲಿಷ್ ಅನುವಾದ ತಂತ್ರಜ್ಞಾನವು ಇನ್ನೂ ಸುಧಾರಣೆಯಾಗಬೇಕಿದೆ. ಆದರೆ, ಇದರ ಸ್ಕ್ರೀನ್ ರೀಡರ್ ತಂತ್ರಾಂಶ ಕನ್ನಡವನ್ನು ಚೆನ್ನಾಗಿಯೇ ಓದುತ್ತದೆ. ಉದಾಹರಣೆಗೆ, prajavani.net ಜಾಲತಾಣದ ಒಂದು ಸುದ್ದಿ ತೆರೆದು, ಬಳಿಕ ಇತ್ತೀಚಿನ ಆ್ಯಪ್‌ಗಳನ್ನು ನೋಡುವ ಬಟನ್ (ಸ್ಕ್ರೀನ್ ಕೆಳಭಾಗದಲ್ಲಿ ಹೋಂ ಬಟನ್ ಬಲಭಾಗದಲ್ಲಿರುವ ಚೌಕಾಕಾರದ ಗುರುತಿರುವ ಬಟನ್) ಒತ್ತಿದಾಗ, ಆ ಸ್ಕ್ರೀನ್ ಚಿಕ್ಕದಾಗುತ್ತದೆ ಮತ್ತು ಕೆಳಗೆ ಅನುವಾದದ (Translate), ಆಲಿಸಬಹುದಾದ (Listen) ಮತ್ತು ಸ್ಕ್ರೀನ್ ಶಾಟ್ ತೆಗೆದುಕೊಳ್ಳುವ ಬಟನ್‌ಗಳು ಗೋಚರಿಸುತ್ತವೆ. ಬೇಕಾಗಿರುವುದನ್ನು ಒತ್ತಿದರಾಯಿತು.

ಕ್ಯಾಮೆರಾ

13 ಮೆಗಾಪಿಕ್ಸೆಲ್ ಪ್ರಧಾನ ಕ್ಯಾಮೆರಾ ಮತ್ತು 8 ಮೆಗಾಪಿಕ್ಸೆಲ್ ಸೆಲ್ಫೀ ಕ್ಯಾಮೆರಾಗಳಿವೆ. ಪ್ರಧಾನ ಕ್ಯಾಮೆರಾದಲ್ಲಿ, ಪೋರ್ಟ್ರೇಟ್ ಮೋಡ್, ರಾತ್ರಿ ಮೋಡ್ ಮತ್ತು HDR ಮೋಡ್‌ಗಳಿವೆ. ಜೊತೆಗೆ ಫಿಲ್ಟರ್‌ಗಳು ಫೋಟೋಗಳಿಗೆ ವಿಶೇಷ ಎಫೆಕ್ಟ್ ನೀಡುತ್ತದೆ. ಸ್ನ್ಯಾಪ್‌ಚಾಟ್‌ಗೆ ಇಂಟರ್‌ನೆಟ್ ಮೂಲಕ ನೇರವಾಗಿ ಸಂಪರ್ಕಿಸುವುದರಿಂದ, ಅದರಲ್ಲಿರುವ ಸೆಲ್ಫೀ ಫಿಲ್ಟರ್‌ಗಳು ಕೂಡ ದೊರೆಯುತ್ತವೆ.

3500 mAh ಸಾಮರ್ಥ್ಯದ ಬ್ಯಾಟರಿ ಇದ್ದು, ಸಾಮಾನ್ಯ ಬಳಕೆಯಲ್ಲಿ ಬ್ಯಾಟರಿ ಚಾರ್ಜ್ ಒಂದು ದಿನಕ್ಕೇನೂ ಸಮಸ್ಯೆಯಿಲ್ಲ. ಪೂರ್ತಿ ಚಾರ್ಜ್ ಆಗಲು ಸುಮಾರು ಎರಡು ಗಂಟೆ ಬೇಕಾಗುತ್ತದೆ.

ಬೆಲೆ

ಜಿಯೋಫೋನ್ ನೆಕ್ಸ್ಟ್ ಬೆಲೆ ₹6,499. ಆದರೆ, ₹1,999 ಆರಂಭಿಕ ಹಣ ಪಾವತಿ ಮಾಡಿ, ನಮ್ಮ ಡೇಟಾ ಬಳಕೆಗೆ ಅನುಗುಣವಾಗಿ, 18 ಅಥವಾ 24 ತಿಂಗಳು ಮಾಸಿಕ ₹300, ₹350, ₹450, ₹500, ₹550, ಅಥವಾ ₹600 ಪಾವತಿ ಮಾಡಿಯೂ ಖರೀದಿಸಬಹುದು. ಅಂದರೆ ಕಂತು ಆಗಿ ಡೇಟಾಕ್ಕೆ ನೀಡುವ ಶುಲ್ಕವನ್ನೇ ನೀಡಿದರೆ ಫೋನ್ ನಮ್ಮದಾಗುತ್ತದೆ.

ಒಟ್ಟಾರೆ ಹೇಗಿದೆ?

ಹೊಸದಾಗಿ ಸ್ಮಾರ್ಟ್‌ಫೋನ್ ಅನುಭವ ಪಡೆಯುವವರಿಗೆ, ಜಿಯೊ ಟಿವಿ, ಜಿಯೋ ಸಿನಿಮಾ ಆ್ಯಪ್‌ಗಳ ಮೂಲಕ ಸ್ಮಾರ್ಟ್ ಟಿವಿಯಲ್ಲಿ ಮನರಂಜನಾ ಕಾರ್ಯಕ್ರಮ ಸ್ಟ್ರೀಮ್ ಮಾಡಲು ಈ ಫೋನ್ ಅನುಕೂಲಕರ. ಜಿಯೋ ಸಿಮ್ ಅನ್ನು ಡೇಟಾಕ್ಕಾಗಿ ಮತ್ತು ಬೇರೆ ದೂರವಾಣಿ ಸೇವಾದಾತರ ಸಿಮ್ ಕಾರ್ಡನ್ನು ಕರೆಗಾಗಿ ಒಂದೇ ಫೋನ್‌ನಲ್ಲಿ ಬಳಸಬಹುದು. ಇಎಂಐ ಆಯ್ದುಕೊಂಡರೆ, ಸಕಾಲಕ್ಕೆ ಕಂತು ಪಾವತಿಸದಿದ್ದರೆ ಫೋನ್ ಲಾಕ್ ಆಗುವ ಮೂಲಕ ಅದು ನಿಮಗೆ ಕಂತು ಪಾವತಿಗೆ ನೆನಪಿಸುತ್ತದೆ.

ವೈಶಿಷ್ಟ್ಯಗಳು

ಡಿಸ್‌ಪ್ಲೇ: 5.45-ಇಂಚು IPS HD + (1440 x 720 ಪಿಕ್ಸೆಲ್ ರೆಸೊಲ್ಯುಶನ್),ಕಾರ್ನಿಂಗ್ ಗೊರಿಲ್ಲಾ ಗ್ಲಾಸ್ 3 ರಕ್ಷಣೆ
ತಂತ್ರಾಂಶ: ಆಂಡ್ರಾಯ್ಡ್ 11 'ಗೋ' ಆವೃತ್ತಿ ಆಧಾರಿತ ಪ್ರಗತಿ ಒಎಸ್
ಸಿಪಿಯು: 28nm 1.3 GHz ಕ್ವಾಲ್‌ಕಂ ಸ್ನ್ಯಾಪ್‌ಡ್ರ್ಯಾಗನ್ 215 ಕ್ವಾಡ್-ಕೋರ್ ಪ್ರೊಸೆಸರ್
ಜಿಪಿಯು: ಅಡ್ರಿನೋ 308 ಗ್ರಾಫಿಕ್ಸ್
ಮೆಮೊರಿ: 2 GB RAM
ಸ್ಟೋರೇಜ್: 32 GB ಆಂತರಿಕ ಸ್ಟೋರೇಜ್, ಮೈಕ್ರೋ ಎಸ್‌ಡಿ ಕಾರ್ಡ್ ಮೂಲಕ 512 GB ವರೆಗೆ ವಿಸ್ತರಿಸಬಹುದು
ಪ್ರಧಾನ ಕ್ಯಾಮೆರಾ: 13 MP
ಸೆಲ್ಫೀ ಕ್ಯಾಮೆರಾ: 8 MP
ಸಂಪರ್ಕ: ಮೈಕ್ರೋ USB, 3.5 ಮಿಮೀ ಪೋರ್ಟ್, Wi-Fi 802.11 b/g/n, ಬ್ಲೂಟೂತ್ 4.1, ಜಿಪಿಎಸ್
ಸೆಲ್ಯುಲಾರ್: ಡ್ಯುಯಲ್ 4G ನೆಟ್‌ವರ್ಕ್
ಬ್ಯಾಟರಿ: 3,500 mAh
ಬೆಲೆ: ₹1,999 + EMI ಅಥವಾ ₹6,499

ಇಂದಿನಿಂದ ಕರ್ತಾರ್‌ಪುರ ಕಾರಿಡಾರ್ ಆರಂಭ

ನವದೆಹಲಿ/ಚಂಡೀಗಢ (ಪಿಟಿಐ): ಕರ್ತಾರ್‌ಪುರ ಸಾಹಿಬ್ ಕಾರಿಡಾರ್ ಅನ್ನು ಬುಧವಾರದಿಂದ ತೆರೆಯಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಕಟಿಸಿದ್ದಾರೆ.

ಸಿಖ್ ಧರ್ಮದ ಸ್ಥಾಪಕ ಗುರುನಾನಕ್ ದೇವ್ ಅವರು ಅಂತಿಮ ಕ್ಷಣಗಳನ್ನು ಕಳೆದ ಸ್ಥಳ ಪಾಕಿಸ್ತಾನದ ಗುರುದ್ವಾರ ದರ್ಬಾರ್ ಸಾಹಿಬ್‌ನಿಂದ ಗುರುದಾಸ್‌ಪುರ ಜಿಲ್ಲೆಯ ದೇರಾ ಬಾಬಾ ನಾನಕ್ ದೇಗುಲಕ್ಕೆ ಈ ಕರ್ತಾರ್‌ಪುರ್ ಕಾರಿಡಾರ್ ಸಂಪರ್ಕ ಕಲ್ಪಿಸುತ್ತದೆ. ಗುರುನಾನಕ್ ದೇವ್ ಅವರ ಜನ್ಮ ದಿನೋತ್ಸವವನ್ನು ನವೆಂಬರ್ 19ರಂದು ಗುರುಪುರಬ್ ಹೆಸರಿನಿಂದ ಆಚರಿಸಲಾಗುತ್ತದೆ.

ಈ ನಿರ್ಧಾರವು ಶ್ರೀ ಗುರು ನಾನಕ್ ಮತ್ತು ಸಿಖ್ ಧರ್ಮದ ಬಗ್ಗೆ ಪ್ರಧಾನಿ ಮೋದಿಗಿರುವ ಅಪಾರ ಗೌರವವನ್ನು ಸೂಚಿಸುತ್ತದೆ ಎಂದು ಶಾ ಹೇಳಿದರು.

ಇದಕ್ಕೂ ಮುನ್ನ ಕರ್ತಾರ್‌ಪುರ ಕಾರಿಡಾರ್ ಪುನಃ ತೆರೆಯುವಂತೆ ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ನವಜೋತ್ ಸಿಂಗ್ ಸಿಧು ಮತ್ತು ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಮಂಗಳವಾರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದರು.

ಕೋವಿಡ್: 5 ಜಿಲ್ಲೆಗಳಲ್ಲಿ ಪ್ರಕರಣ ಒಂದಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಗಾಗಲೇ ರಾಜ್ಯದ ಮೂರು ಜಿಲ್ಲೆಗಳು ಕೋವಿಡ್ ಮುಕ್ತವಾಗಿದ್ದು, ಐದು ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳು ಒಂದಂಕಿಯಲ್ಲಿವೆ.

ಬೀದರ್, ಗದಗ ಹಾಗೂ ಹಾವೇರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ. ಹೀಗಾಗಿ, ಈ ಜಿಲ್ಲೆಗಳಲ್ಲಿ ಸದ್ಯ ಕೋವಿಡ್ ಸಕ್ರಿಯ ಪ್ರಕರಣವಿಲ್ಲ. ಬಾಗಲಕೋಟೆ, ಚಿಕ್ಕಬಳ್ಳಾಪುರ, ರಾಯಚೂರು, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆಯಿದೆ. ಬೆಂಗಳೂರಿನಲ್ಲಿ ಗರಿಷ್ಠ (6,161) ಸಕ್ರಿಯ ಪ್ರಕರಣಗಳಿವೆ.

ರಾಜ್ಯದಲ್ಲಿ ಮಂಗಳವಾರ 66 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 255 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.38 ರಷ್ಟು ವರದಿಯಾಗಿದೆ. ಎರಡು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 17 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಮಂಡ್ಯ ಸೇರಿದಂತೆ 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ರಾಜ್ಯದ ಕೋವಿಡ್ ಅಂಕಿ–ಅಂಶ

29,92,276	ಒಟ್ಟು ಪ್ರಕರಣಗಳು (29,91,850 ನಿನ್ನೆಯ ವಿವರ)
7,493	ಸಕ್ರಿಯ ಪ್ರಕರಣಗಳು
29,46,601	ಗುಣಮುಖರಾದವರು
38,153	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	255
ಗುಣಮುಖ	667
ಸಾವು	07

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರಿನಲ್ಲಿ 163 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.92 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 7 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ಇಬ್ಬರು, ಬೆಳಗಾವಿ, ಚಿತ್ರದುರ್ಗ, ದಕ್ಷಿಣ ಕನ್ನಡ, ಧಾರವಾಡ ಹಾಗೂ ತುಮಕೂರಿನಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 2.74 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,153ಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ 667 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.46 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 7,493 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಉಪಶಮನ ಮಾತ್ರೆ ಪೂರೈಕೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಫೈಝರ್ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೋವಿಡ್ ಗುಣಪಡಿಸುವ ಮಾತ್ರೆ 'ಪ್ಯಾಕ್ಸ್‌ಲೋವಿಡ್' ಅನ್ನು ಕಡಿಮೆ ದರದಲ್ಲಿ ಭಾರತವೂ ಸೇರಿದಂತೆ 95 ದೇಶಗಳಲ್ಲಿ ಮಾರಾಟ ಮಾಡಲು ಆ ಸಂಸ್ಥೆಯು ಅನುಮತಿ ಕೊಟ್ಟಿದೆ.

ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳಿಗೆ ಈ ಔಷಧವನ್ನು ದೊರಕಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ವಿಶ್ವಸಂಸ್ಥೆ ಬೆಂಬಲಿತ ಸಾರ್ವಜನಿಕ ಆರೋಗ್ಯ ಸಂಘಟನೆ (ಎಂಪಿಪಿ) ಜೊತೆ ಫೈಝರ್ ಸಂಸ್ಥೆಯು ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕಿದೆ.



ಫೈಝರ್‌ನ ಪ್ರಾಯೋಗಿಕ ಹಂತದಲ್ಲಿರುವ ಈ ಮಾತ್ರೆಗಳನ್ನು ರಿಟೊನಾವಿರ್ ಎಂಬ ಇನ್ನೊಂದು ಔಷಧದ ಸಂಯೋಜನೆಯೊಂದಿಗೆ ಪೂರೈಸಲು, ಜಗತ್ತಿನಾದ್ಯಂತ ಅರ್ಹ ಔಷಧ ತಯಾರಕರಿಗೆ ಪರವಾನಗಿಗಳನ್ನು ನೀಡಲಾಗುತ್ತದೆ ಎಂದು ಒಪ್ಪಂದದಲ್ಲಿ ಉಲ್ಲೇಖಿಸಲಾಗಿದೆ. 95ಕ್ಕೂ ಹೆಚ್ಚು ದೇಶಗಳಿಗೆ ಇವುಗಳನ್ನು ಪೂರೈಸುವುದರಿಂದ ಜಗತ್ತಿನ ಜನಸಂಖ್ಯೆಯ ಶೇ 53ರಷ್ಟು ಜನರನ್ನು ಈ ಔಷಧ ತಲುಪುವ ನಿರೀಕ್ಷೆಯಿದೆ.

ಔಷಧ ತಯಾರಿಕಾ ಸಂಸ್ಥೆ ಮೆರ್ಕ್ ಪ್ರಾಯೋಗಿಕವಾಗಿ ಸಿದ್ಧಪಡಿಸಿರುವ 'ಮೊಲ್ನುಪಿರವಿರ್' ಎಂಬ ಔಷಧವನ್ನು ಭಾರತವೂ ಒಳಗೊಂಡಂತೆ 105 ದೇಶಗಳಿಗೆ ಒದಗಿಸುವ ಸಂಬಂಧ ಎರಡು ವಾರಗಳ ಹಿಂದಷ್ಟೇ ಎಂಪಿಪಿ ಒಪ್ಪಂದ ಮಾಡಿಕೊಂಡಿತ್ತು.

ಈ ಎರಡೂ ಔಷಧಗಳು ಭಾರತೀಯ ಔಷಧ ನಿಯಂತ್ರಣ ನಿರ್ದೇಶನಾಲಯದಿಂದ ಅನುಮತಿ ಪಡೆದಿಲ್ಲ. ಮೊಲ್ನುಪಿರವಿರ್‌ಗೆ ಬ್ರಿಟನ್ ಇತ್ತೀಚೆಗೆ ಅನುಮತಿ ನೀಡಿದೆ. ಭಾರತದಲ್ಲಿ ಇದು ಪರಿಶೀಲನೆಯ ಹಂತದಲ್ಲಿದೆ.

ಸೀರೆಯನ್ನು ಉಡಲು ಅಂಗನವಾಡಿ ಕಾರ್ಯಕರ್ತೆಯರ ಆಕ್ಷೇಪ

ಸಮವಸ್ತ್ರದ ಮೇಲೆ 'ಪೋಷಣ್ ಅಭಿಯಾನ್' ಜಾಹೀರಾತು

• ಎಚ್.ಅನಿತಾ

ದಾವಣಗೆರೆ: ಅಂಗನವಾಡಿ ಕಾರ್ಯಕರ್ತೆಯರಿಗೆ ಸಮವಸ್ತ್ರವಾಗಿ ನೀಡುವ ಸೀರೆಯ ಅಂಚಿನ ಮೇಲೆ ಕೇಂದ್ರ ಸರ್ಕಾರದ ಪೋಷಣ್ ಅಭಿಯಾನದ ಜಾಹೀರಾತು ಮುದ್ರಿಸಿರುವುದಕ್ಕೆ ಕಾರ್ಯಕರ್ತೆಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಎರಡು ವರ್ಷಗಳಿಂದ ಸಮವಸ್ತ್ರವನ್ನೇ ನೀಡಿಲ್ಲ. ಇದೀಗ ಕೇಂದ್ರ ಸರ್ಕಾರವು ಪೋಷಣ್ ಅಭಿಯಾನಕ್ಕಾಗಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಸಮವಸ್ತ್ರ ವಿತರಣೆ ಮಾಡಲು ಮುಂದಾಗಿದೆ. ಆದರೆ, ಈ ಸೀರೆ ಉಡಲು ಅಂಗನವಾಡಿ ಕಾರ್ಯಕರ್ತೆಯರು ವಿರೋಧ ವ್ಯಕ್ತಪಡಿಸಿದ್ದು, ವಾಪಸ್ ಪಡೆಯುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

'ಪ್ರತಿ ತಿಂಗಳ ಮೊದಲ ಹಾಗೂ ಎರಡನೇ ಶುಕ್ರವಾರದಂದು ನಡೆಯುವ ಅನ್ನಪ್ರಾಶನ ಮತ್ತು ಸೀಮಂತ ಕಾರ್ಯಕ್ರಮ, ಗರ್ಭಿಣಿಯರ ಆರೈಕೆ, ಪೌಷ್ಟಿಕ ಶಿಬಿರ, ಸಮುದಾಯ ಕಾರ್ಯಕ್ರಮಗಳಲ್ಲಿ ಸಮವಸ್ತ್ರ ಧರಿಸುವಂತೆ ಸೂಚಿಸಲಾಗಿದೆ. ಆದರೆ, ಸಮವಸ್ತ್ರದ ರೂಪದಲ್ಲಿ ನೀಡಿರುವ ಸೀರೆಯ ಅಂಚಿನ ಉದ್ದಕ್ಕೂ ಪೋಷಣ್ ಅಭಿಯಾನ್ ಎಂದು ಮುದ್ರಿಸಲಾಗಿದೆ. ಅಭಿಯಾನದ ಜಾಹೀರಾತಿಗಾಗಿ ನೀಡಿರುವ ಸೀರೆಯನ್ನು ಹೇಗೆ ತೊಡಬೇಕು, ನಾವೇನು ಪ್ರದರ್ಶನಕ್ಕೆ ಇಟ್ಟಿರುವ ಬೊಂಬೆಗಳಾ' ಎಂದು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ದಾವಣಗೆರೆ ಜಿಲ್ಲಾ ಕಾರ್ಯದರ್ಶಿ ಮಲ್ಲಮ್ಮ ಪ್ರಶ್ನಿಸಿದ್ದಾರೆ.



ಅಂಗನವಾಡಿ ಕಾರ್ಯಕರ್ತೆಯರಿಗೆ ವಿತರಿಸಲು ಕೇಂದ್ರ ಸರ್ಕಾರ ನೀಡಿರುವ ಸೀರೆಯಲ್ಲಿ ಇರುವ 'ಪೋಷಣ್ ಅಭಿಯಾನ್' ಜಾಹೀರಾತು

'ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳು, ಗರ್ಭಿಣಿಯರು, ಬಾಣಂತಿಯರ ಆರೈಕೆ ಜತೆಗೆ ವಿವಿಧ ಇಲಾಖೆಗಳು ನೀಡುವ ಕೆಲಸಗಳನ್ನು ತಲೆಮೇಲೆ ಹೊತ್ತು ಮಾಡುತ್ತೇವೆ. ನಮ್ಮ ಶ್ರಮಕ್ಕೆ ತಕ್ಕಂತೆ ವೇತನವಿಲ್ಲ. ಅನಿವಾರ್ಯ ಕಾರಣಗಳಿಂದಾಗಿ ಸರ್ಕಾರ ನೀಡುವ ಗೌರವಧನಕ್ಕೆ ದುಡಿಯುತ್ತೇವೆ. ನಮಗೂ ಆತ್ಮಗೌರವ ಇದೆ ಎಂಬುದನ್ನು ಸರ್ಕಾರ ಅರಿಯಬೇಕು. ಇಂತಹ ಸೀರೆಯುಟ್ಟು ತಿರುಗಾಡಿದರೆ ಜನ ನಮ್ಮನ್ನೇ ದಿಟ್ಟಿಸಿ ನೋಡುತ್ತಾರೆ. ಆಡಿಕೊಂಡು ನಗುತ್ತಾರೆ. ಮಹಿಳೆಯರನ್ನು ಅಪಮಾನಕ್ಕೆ ಗುರಿಯಾಗಿಸುವ ಸರ್ಕಾರದ ತೀರ್ಮಾನ ಅಕ್ಷಮ್ಯ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ರಾಜ್ಯದಲ್ಲಿ 1.50 ಲಕ್ಷ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಇದ್ದಾರೆ. ಧಾರವಾಡ ಮತ್ತು ತುಮಕೂರಿನ ಕೆಲ ತಾಲ್ಲೂಕುಗಳಲ್ಲಿ ಸಮವಸ್ತ್ರ ವಿತರಿಸಲಾಗಿದ್ದು, ವಾಪಸ್ ಕಳುಹಿಸಿದ್ದೇವೆ. ನರ್ಸ್, ವೈದ್ಯರು, ಪೊಲೀಸ್, ವಿದ್ಯುತ್ ಹೀಗೆ ವಿವಿಧ ಇಲಾಖೆಗಳ ಸಿಬ್ಬಂದಿಗೆ ಗೌರವಯುತವಾದ ಸಮವಸ್ತ್ರವಿದೆ. ಅಂತೆಯೇ ನಮಗೂ ಸಮವಸ್ತ್ರವನ್ನು ನೀಡಲು ಕ್ರಮ ಕೈಗೊಳ್ಳಬೇಕು. ಸಮವಸ್ತ್ರದ ಬಣ್ಣವನ್ನು ಪ್ರತಿವರ್ಷ ಬದಲಾಯಿಸಬಾರದು. ಒಂದೇ ಬಣ್ಣದ ಸಮವಸ್ತ್ರವನ್ನು ಕಾಯಂ ಆಗಿ ನೀಡಬೇಕು' ಎಂದು ಅವರು ಆಗ್ರಹಿಸಿದ್ದಾರೆ.



ಜಾಹೀರಾತು ಸಮವಸ್ತ್ರವನ್ನು ಯಾವುದೇ ಕಾರಣಕ್ಕೂ ಧರಿಸುವುದಿಲ್ಲ ಎಂದು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ನಮ್ಮ ಗೌರವಕ್ಕೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಬೇಕು.

ಮಲ್ಲಮ್ಮ, ಜಿಲ್ಲಾ ಕಾರ್ಯದರ್ಶಿ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ)



ದಾವಣಗೆರೆಗೆ ಇನ್ನೂ ಸರಬರಾಜು ಆಗಿಲ್ಲ. ಜಾಹೀರಾತು ಇರುವ ಸೀರೆ ಬೇರೆ ಕಡೆಗಳಲ್ಲಿ ವಿತರಿಸಿದ್ದು, ಇಲ್ಲಿ ವಿತರಿಸಬಾರದು ಎಂದು ಮನವಿ ಸಲ್ಲಿಸಿದ್ದಾರೆ

ಕೆ.ಎಚ್. ವಿಜಯ್‌ಕುಮಾರ್, ಉಪನಿರ್ದೇಶಕ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪೂಜಾ ವಿಧಾನ ನಿರ್ಣಯ ಕೋರ್ಟ್ ಕೆಲಸವಲ್ಲ: ಸುಪ್ರೀಂ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇವಸ್ಥಾನದಲ್ಲಿನ ಪೂಜಾ ವಿಧಿ ವಿಧಾನ ಹೇಗಿರಬೇಕು ಎಂಬುದನ್ನು ನ್ಯಾಯಾಲಯಗಳು ನಿರ್ಧರಿಸಲಾಗದು ಎಂದಿರುವ ಸುಪ್ರೀಂ ಕೋರ್ಟ್, ಈ ವಿಚಾರವಾಗಿ ಸಲ್ಲಿಕೆಯಾದ ಅರ್ಜಿಯೊಂದರ ಸಂಬಂಧ ಯಾವುದೇ ಆದೇಶವನ್ನು ನೀಡಲು ನಿರಾಕರಿಸಿದೆ.

ತಿರುಪತಿ ಬಾಲಾಜಿ ದೇವಸ್ಥಾನದಲ್ಲಿನ ಪೂಜಾ ವಿಧಿವಿಧಾನಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಆರೋಪಿಸಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯನ್ನು ನಡೆಸಿದ ನ್ಯಾಯಾಲಯ, 'ದೇವಾಲಯದಲ್ಲಿ ಯಾವ ರೀತಿ ಪೂಜೆ ಮಾಡಬೇಕು? ತೆಂಗಿನಕಾಯಿಯನ್ನು ಹೇಗೆ ಒಡೆಯಬೇಕು? ದೇವರ ಮೂರ್ತಿಗೆ ಹೇಗೆ ಹೂಮಾಲೆ ಹಾಕಬೇಕು ಎಂದೆಲ್ಲ ನ್ಯಾಯಾಲಯ ಹೇಳಲಾಗದು' ಎಂದು ಮಂಗಳವಾರ ತಿಳಿಸಿದೆ.

'ದೇವಸ್ಥಾನದ ನಿತ್ಯದ ಕಾರ್ಯಭಾರದಲ್ಲಿ ಸಂವಿಧಾನಬದ್ಧ ನ್ಯಾಯಾಲಯ ಮಧ್ಯಪ್ರವೇಶಿಸುವುದಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ಹಿಮಾ ಕೊಹ್ಲಿ ಅವರಿದ್ದ ನ್ಯಾಯಪೀಠ ಸ್ಪಷ್ಟಪಡಿಸಿತು.

ತಿರುಪತಿ ಬಾಲಾಜಿ ದೇವಸ್ಥಾನವು ಸಾರ್ವಜನಿಕ ದೇವಾಲಯವಾಗಿದ್ದು, ಅಲ್ಲಿ ನಡೆಯಬೇಕಾದ ಸೇವೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಶ್ರೀವಾರಿ ದಾದಾ ಎಂಬುವವರು ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಧಾರ್ಮಿಕ ವಿಧಿ ವಿಧಾನಗಳ ಪಾಲನೆ ವಿಚಾರದಲ್ಲಿ ಸಾಂವಿಧಾನಿಕ ನ್ಯಾಯಾಲಯಗಳು ಹೇಗೆ ಮಧ್ಯ ಪ್ರವೇಶಿಸಲಾದೀತು ಎಂದು ಪ್ರಶ್ನಿಸಿತು. ಸಂಪ್ರದಾಯ ಉಲ್ಲಂಘನೆಯಾಗುತ್ತಿದೆ ಎನ್ನುವುದಾದರೆ, ಸಾಕ್ಷ್ಯಾಧಾರಗಳೊಂದಿಗೆ ವಿಚಾರಣಾ ನ್ಯಾಯಾಲಯ ಇದನ್ನು ಪರಿಶೀಲಿಸಬಹುದು ಎಂದು ಹೇಳಿದೆ.

ಅರ್ಜಿದಾರರ ದೂರಿನ ಬಗ್ಗೆ ಪರಿಶೀಲಿಸುವಂತೆ ದೇವಸ್ಥಾನದ ಆಡಳಿತ ಮಂಡಳಿಗೂ ತಿಳಿಸಿದ ಸುಪ್ರೀಂ ಕೋರ್ಟ್, ಅದಾದ ಮೇಲೂ ಅರ್ಜಿದಾರರಿಗೆ ಸಮಾಧಾನವಾಗದಿದ್ದರೆ, ಸೂಕ್ತ ವೇದಿಕೆಯ ಮೊರೆ ಹೋಗುವಂತೆ ಸೂಚಿಸಿತು.

ಈ ವಿಷಯವಾಗಿ ದಾದಾ ಅವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಆಂಧ್ರ ಪ್ರದೇಶ ಹೈಕೋರ್ಟ್ ವಜಾ ಮಾಡಿತ್ತು.

ಭಾರತಕ್ಕೆ 'ಎಸ್–400' ಕ್ಷಿಪಣಿ ವ್ಯವಸ್ಥೆ ಪೂರೈಕೆ: ಅಮೆರಿಕ ಕಳವಳ

ವಾಷಿಂಗ್ಟನ್ (ಪಿಟಿಐ): ಭಾರತಕ್ಕೆ ರಷ್ಯಾ 'ಎಸ್–400' ಕ್ಷಿಪಣಿ ವ್ಯವಸ್ಥೆಯನ್ನು ಪೂರೈಕೆ ಮಾಡುತ್ತಿರುವುದಕ್ಕೆ ಅಮೆರಿಕ ಕಳವಳ ವ್ಯಕ್ತಪಡಿಸಿದೆ. ಆದರೆ, ಉಭಯ ದೇಶಗಳ ನಡುವಿನ ಈ ವ್ಯವಹಾರಕ್ಕೆ ಸಂಬಂಧಿಸಿ ಯಾವ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಅಮೆರಿಕದ ರಕ್ಷಣಾ ಇಲಾಖೆ (ಪೆಂಟಗನ್) ಮೂಲಗಳು ಹೇಳಿವೆ.

'ರಷ್ಯಾದಿಂದ ಈ ಕ್ಷಿಪಣಿ ವ್ಯವಸ್ಥೆಯನ್ನು ಖರೀದಿಸುತ್ತಿರುವ ಕುರಿತು ನಮ್ಮ ಕಳವಳ ಏನು ಎಂಬುದನ್ನು ಭಾರತಕ್ಕೆ ಸ್ಪಷ್ಟವಾಗಿ ತಿಳಿಸಲಾಗಿದೆ' ಎಂದು ಪೆಂಟಗನ್ ವಕ್ತಾರ ಜಾನ್ ಕಿರ್ಬಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಷ್ಯಾ ನಿರ್ಮಿತ 'ಎಸ್–400' ದೂರಗಾಮಿ ವಾಯುಪ್ರದೇಶ ರಕ್ಷಣಾ ವ್ಯವಸ್ಥೆಯಾಗಿದೆ. ಈ ಕ್ಷಿಪಣಿ ವ್ಯವಸ್ಥೆಯ 5 ಘಟಕಗಳ ಖರೀದಿಗೆ ಭಾರತ 2018ರ ಅಕ್ಟೋಬರ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕಿದೆ. ಖರೀದಿಯ ಅಂದಾಜು ವೆಚ್ಚ ₹ 37 ಸಾವಿರ ಕೋಟಿ ಆಗಲಿದೆ.

ಈ ಕ್ಷಿಪಣಿ ವ್ಯವಸ್ಥೆಯನ್ನು ಭಾರತಕ್ಕೆ ಪೂರೈಕೆ ಮಾಡಲಾಗುತ್ತಿರುವ ಕುರಿತು ಭಾರತೀಯ ವಾಯುಪಡೆಯಿಂದ ಈ ವರೆಗೆ ಅಧಿಕೃತ ಪ್ರತಿಕ್ರಿಯೆ ಹೊರಬಿದ್ದಿಲ್ಲ. ಆದರೆ, ರಷ್ಯಾದ ಫೆಡರಲ್ ಸರ್ವೀಸ್ ಫಾರ್ ಮಿಲಿಟರಿ ಟೆಕ್ನಿಕಲ್ ಕೋ–ಆಪರೇಷನ್‌ನ (ಎಫ್‌ಎಸ್‌ಎಂಟಿಸಿ) ನಿರ್ದೇಶಕ ಡಿಮಿಟ್ರಿ ಶುಗಯೇವ್ ಅವರು, 'ಯೋಜನೆಯಂತೆಯೇ ಈ ಕ್ಷಿಪಣಿ ವ್ಯವಸ್ಥೆಯ ಪೂರೈಕೆ ನಡೆಯಲಿದೆ' ಎಂದು ಕಳೆದ ವಾರ ಹೇಳಿದ್ದಾರೆ.

2017ರಲ್ಲಿ ಅಮೆರಿಕ 'ಸಿಎಎಟಿಎಸ್‌ಎ' ಎಂಬ ಕಾನೂನು ಜಾರಿಗೆ ತಂದಿದೆ. ಇತರ ರಾಷ್ಟ್ರಗಳು ರಷ್ಯಾದಿಂದ ಮಿಲಿಟರಿ ಹಾರ್ಡ್‌ವೇರ್ ಖರೀದಿ ಮಾಡುವುದರ ಮೇಲೆ ಈ ಕಾನೂನು ನಿಷೇಧ ಹೇರುತ್ತದೆ. ರಷ್ಯಾದಿಂದ ಟರ್ಕಿ ಸಹ ಎಸ್–400 ಕ್ಷಿಪಣಿ ವ್ಯವಸ್ಥೆಗಳನ್ನು ಖರೀದಿಸಿದೆ. ಈ ಕಾರಣಕ್ಕೆ ಟರ್ಕಿ ಮೇಲೆ ಅಮೆರಿಕ ನಿರ್ಬಂಧ ಹೇರಿದೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಗುಂಡಿನ ದಾಳಿ: ವಿದೇಶಿ ಉಗ್ರ ಸೇರಿ ನಾಲ್ವರು ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಇಲ್ಲಿನ ಹೊರವಲಯದ ಹೈದರ್‌ಪೋರಾ ಪ್ರದೇಶದಲ್ಲಿ ಸೋಮವಾರ ಸೇನೆ, ಭದ್ರತಾ ಪಡೆ ಹಾಗೂ ಸ್ಥಳೀಯ ಪೊಲೀಸರು ನಡೆಸಿದ ಗುಂಡಿನ ದಾಳಿಯಲ್ಲಿ ವಿದೇಶಿ ಉಗ್ರ ಸೇರಿ ಆತನ ಇಬ್ಬರು ಸ್ಥಳೀಯ ಸಹಚರರು ಹತ್ಯೆಯಾಗಿದ್ದು, ಗುಂಡಿನ ಚಕಮಕಿಯಲ್ಲಿ ಉಗ್ರನಿದ್ದ ಮನೆಯ ಮಾಲೀಕರು ಬಲಿಯಾಗಿದ್ದಾರೆ.

ಹೈದರ್ ಹತ್ಯೆಗೀಡಾದ ಪಾಕ್ ಉಗ್ರ. ಈತನ ಸಹಚರನ ಗುರುತು ಪತ್ತೆಯಾಗಿಲ್ಲ. ತಳಮಟ್ಟದ ಕಾರ್ಯಕರ್ತ ಮುದಾಸೀರ್ ಗುಲ್ ಭದ್ರತಾ ಪಡೆಗಳ ಗುಂಡಿಗೆ ಬಲಿಯಾಗಿದ್ದಾನೆ. ಹೈದರ್‌ನ ಸಹಚರನನ್ನು ಜಮ್ಮುವಿನ ಬನಿಹಾಳ್ ಮೂಲದವನೆಂದು ತಿಳಿದುಬಂದಿದ್ದು, ಆತನ ಪೋಷಕರನ್ನು ಕರೆಸಲಾಗಿದೆ ಎಂದು ಕಾಶ್ಮೀರ ವಲಯದ ಐಜಿಪಿ ವಿಜಯಕುಮಾರ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗಾಂಧೀಜಿ ಅಹಿಂಸಾ ಮಂತ್ರ: ಕಂಗನಾ ಗೇಲಿ

ಮುಂಬೈ (ಪಿಟಿಐ): 1947ರಲ್ಲಿ ಭಾರತಕ್ಕೆ ಬ್ರಿಟಿಷರಿಂದ ಸಿಕ್ಕಿದ್ದು ಸ್ವಾತಂತ್ರ್ಯವಲ್ಲ 'ಭಿಕ್ಷೆ' ಎಂದು ಹೇಳಿ ವಿವಾದಕ್ಕೆ ಗುರಿಯಾಗಿದ್ದ ಬಾಲಿವುಡ್ ನಟಿ ಕಂಗನಾ ರನೌತ್ ಅವರು, ಇದೀಗ ಮಹಾತ್ಮ ಗಾಂಧೀಜಿ ಅವರ ಅಹಿಂಸಾ ಮಂತ್ರವನ್ನೇ ಗೇಲಿ ಮಾಡಿದ್ದಾರೆ.

'ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್ ಅವರಿಗೆ ಗಾಂಧೀಜಿ ಅವರಿಂದ ಬೆಂಬಲವೇ ಸಿಗಲಿಲ್ಲ. ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ತೋರಿಸು ಎಂಬ ಗಾಂಧೀಜಿ ಅವರ ಮಂತ್ರ ಅನುಸರಿಸಿದರೆ ನಿಮಗೆ ಸ್ವಾತಂತ್ರ್ಯ ಸಿಗುವುದಿಲ್ಲ. ಭಿಕ್ಷೆ ಮಾತ್ರ ಸಿಗುತ್ತದೆ' ಎಂದು ಅವರು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಹಾಕಿದ್ದಾರೆ.

'ನಿಮ್ಮ ನಾಯಕರನ್ನು ಬುದ್ಧಿವಂತಿಕೆಯಿಂದ ಆರಿಸಿಕೊಳ್ಳಿ' ಎಂಬ ಒಕ್ಕಣೆಯನ್ನೂ ತಮ್ಮ ಪೋಸ್ಟ್‌ಗೆ ಸೇರಿಸಿದ್ದಾರೆ.

ಭಾರತ–ನ್ಯೂಜಿಲೆಂಡ್ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯ ಇಂದು

ರೋಹಿತ್ ನಾಯಕತ್ವಕ್ಕೆ ಮುನ್ನುಡಿ

ಜೈಪುರ(ಪಿಟಿಐ): ದಿಗ್ಗಜ ಕ್ರಿಕೆಟಿಗ ರಾಹುಲ್ ದ್ರಾವಿಡ್ ಮುಖ್ಯ ಕೋಚ್ ಮತ್ತು ಹಿಟ್‌ಮ್ಯಾನ್ ರೋಹಿತ್ ಶರ್ಮಾ ನಾಯಕರಾಗಿ ಹೊಸ ಇನಿಂಗ್ಸ್ ಆರಂಭಿಸಲು ಜೈಪುರದ ಸವಾಯ್ ಮಾನಸಿಂಗ್ ಕ್ರೀಡಾಂಗಣದಲ್ಲಿ ವೇದಿಕೆ ಸಿದ್ಧವಾಗಿದೆ.



ಟಿಮ್ ಸೌಥಿ

ಬುಧವಾರ ನಡೆಯಲಿರುವ ನ್ಯೂಜಿಲೆಂಡ್ ಎದುರಿನ ಸರಣಿಯ ಮೊದಲ ಟಿ20 ಪಂದ್ಯದಲ್ಲಿ ಭಾರತ ತಂಡವು ರೋಹಿತ್ ನಾಯಕತ್ವದಲ್ಲಿ ಕಣಕ್ಕಿಳಿಯಲಿದೆ. ಹೋದ ಜೂನ್ 3ರಿಂದ ನವೆಂಬರ್ 12ರವರೆಗೂ ತವರಿನಿಂದ ಹೊರಗಿದ್ದ ಭಾರತ ತಂಡವು ಈ ಸರಣಿಯಲ್ಲಿ ಆಡಲಿದೆ. ಈ ಅವಧಿಯಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್, ಇಂಗ್ಲೆಂಡ್ ಪ್ರವಾಸ, ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಎರಡನೇ ಹಂತ ಮತ್ತು ಟಿ20 ವಿಶ್ವಕಪ್ ಟೂರ್ನಿಗಳಲ್ಲಿ ಆಡಿ ಸಿಹಿ–ಕಹಿ ಫಲಿತಾಂಶಗಳೊಂದಿಗೆ ಮರಳಿದೆ.

ವಿರಾಟ್ ಕೊಹ್ಲಿ ಟಿ20 ತಂಡದ ನಾಯಕತ್ವ ತ್ಯಜಿಸುವುದಾಗಿ ಘೋಷಿಸಿದ್ದು ಕೂಡ ಇದೇ ಅವಧಿಯಲ್ಲಿ. ರವಿಶಾಸ್ತ್ರಿ ಮುಖ್ಯ ಕೋಚ್ ಕಾರ್ಯಾವಧಿ ಕೂಡ ಈಚೆಗೆ ಮುಕ್ತಾಯವಾಯಿತು. ಆದರೆ, ಯುಎಇಯಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಹೀನಾಯ ಸೋಲು ಅನುಭವಿಸಿದೆ. ಅದರಿಂದಾಗಿ ಕಿವೀಸ್ ವಿರುದ್ಧದ ಸರಣಿಯಲ್ಲಿ ತಂಡದ ಪ್ರದರ್ಶನದ ಬಗ್ಗೆ ಕುತೂಹಲ ಕೆರಳಿದೆ. ಐಪಿಎಲ್‌ನಲ್ಲಿ ಮಿಂಚಿದ್ದ ಯುವಪ್ರತಿಭೆಗಳಾದ ಋತುರಾಜ್ ಗಾಯಕವಾಡ್, ವೆಂಕಟೇಶ್ ಅಯ್ಯರ್ ಮತ್ತು ಹರ್ಷಲ್ ಪಟೇಲ್ ಅವರಿಗೆ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತಮ್ಮ ಸಾಮರ್ಥ್ಯ ಮೆರೆಯುವ ಅವಕಾಶ ದೊರೆಯಲಿದೆ. ವಿಶ್ವಕಪ್‌ನಲ್ಲಿ ಆಡುವ ಅವಕಾಶ ಪಡೆಯದ ಬೇಸರದಲ್ಲಿದ್ದ ಸ್ಪಿನ್ನರ್ ಯಜುವೇಂದ್ರ ಚಾಹಲ್ ಕೂಡ ತಂಡದಲ್ಲಿದ್ದಾರೆ. ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಕೂಡ ಬಳಗದಲಿದ್ದಾರೆ. ವಿರಾಟ್, ರವೀಂದ್ರ ಜಡೇಜ, ಮೊಹಮ್ಮದ್ ಶಮಿ ಮತ್ತು ಜಸ್‌ಪ್ರೀತ್ ಬೂಮ್ರಾ ಅವರು ವಿಶ್ರಾಂತಿ ಪಡೆದಿರುವುದರಿಂದ ಯುವ ಆಟಗಾರರಿಗೆ ಕಣಕ್ಕಿಳಿಯುವ ಅವಕಾಶ ಸಿಗುವ ಸಾಧ್ಯತೆ ಹೆಚ್ಚಿದೆ.

ನ್ಯೂಜಿಲೆಂಡ್ ತಂಡವು ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಸೋತು ಭಾರತಕ್ಕೆ ಬಂದಿದೆ. ವಿಲಿಯಮ್ಸನ್ ವಿಶ್ರಾಂತಿ ಪಡೆದಿರುವುದರಿಂದ ವೇಗಿ ಟಿಮ್ ಸೌಥಿ ತಂಡವನ್ನು ಮುನ್ನಡೆಸುವರು. ಮಾರ್ಟಿನ್ ಗಪ್ಟಿಲ್, ನಿಶಾಮ್, ಡೆರಿಲ್ ಮಿಷೆಲ್ ಉತ್ತಮ ಲಯದಲ್ಲಿರುವುದರಿಂದ ಬ್ಯಾಟಿಂಗ್ ವಿಭಾಗ ಬಲಿಷ್ಠವಾಗಿದೆ.

ಪಂದ್ಯ ಆರಂಭ: ರಾತ್ರಿ 7

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮುಖಾಮುಖಿಯಲ್ಲಿ ಹೆಚ್ಚು ರನ್ ಗಳಿಸಿದ ಆಟಗಾರರು

ಆಟಗಾರ	ತಂಡ	ಪಂದ್ಯ	ರನ್
ಕಾಲಿನ್ ಮನ್ರೊ	ನ್ಯೂಜಿಲೆಂಡ್	12	426
ಕೇನ್ ವಿಲಿಯಮ್ಸನ್	ನ್ಯೂಜಿಲೆಂಡ್	12	358
ರೋಹಿತ್ ಶರ್ಮಾ	ಭಾರತ	14	352
ರಾಸ್ ಟೇಲರ್	ನ್ಯೂಜಿಲೆಂಡ್	13	249
ವಿರಾಟ್ ಕೊಹ್ಲಿ	ಭಾರತ	10	311

ಮುಖಾಮುಖಿಯಲ್ಲಿ ಹೆಚ್ಚು ವಿಕೆಟ್ ಗಳಿಸಿದವರು

ಆಟಗಾರ	ತಂಡ	ಪಂದ್ಯ	ವಿಕೆಟ್
ಈಶ್ ಸೋಧಿ	ನ್ಯೂಜಿಲೆಂಡ್	13	19
ಜಸ್‌ಪ್ರೀತ್ ಬೂಮ್ರಾ	ಭಾರತ	10	12
ಮಿಚೆಲ್ ಸ್ಯಾಂಟನರ್	ನ್ಯೂಜಿಲೆಂಡ್	13	12
ಟಿಮ್ ಸೌಥಿ	ನ್ಯೂಜಿಲೆಂಡ್	13	11
ಶಾರ್ದೂಲ್ ಠಾಕೂರ್	ಭಾರತ	6	8

ಟಿ20ಯಲ್ಲಿ ಮುಖಾಮುಖಿ

ಪಂದ್ಯಗಳು	18
ನ್ಯೂಜಿಲೆಂಡ್ ಜಯ	9
ಭಾರತ ಜಯ	8
ಫಲಿತಾಂಶವಿಲ್ಲ	1



ರೋಹಿತ್ ಶರ್ಮಾ

ಪಿಚ್ ಮತ್ತು ಟಾಸ್..

ಇಲ್ಲಿಯ ಕ್ರೀಡಾಂಗಣದ ಪಿಚ್ ಬಹಳಷ್ಟು ಪಂದ್ಯಗಳಲ್ಲಿ ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡಿದೆ. ಈ ಬಾರಿಯೂ ರನ್‌ಗಳ ಹೊಳೆ ಹರಿಯುವ ನಿರೀಕ್ಷೆ ಇದೆ.

ಪಂದ್ಯವು ರಾತ್ರಿ ಏಳುಗಂಟೆಗೆ ಆರಂಭವಾಗಲಿದ್ದು, ಎರಡನೇ ಇನಿಂಗ್ಸ್ ಆಡುವ ತಂಡಕ್ಕೆ ಇಬ್ಬನಿಯ ಪರಿಣಾಮ ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಬಹುದು. ಆದರೂ ಟಾಸ್ ಗೆಲುವು ಮತ್ತು ಆ ತಂಡದ ನಾಯಕ ತೆಗೆದುಕೊಳ್ಳುವ ನಿರ್ಧಾರ ಪ್ರಮುಖವಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಯುಎಇಯಲ್ಲಿ ನಡೆದ ವಿಶ್ವಕಪ್ ಟೂರ್ನಿ ಮತ್ತು ಐಪಿಎಲ್ ಪಂದ್ಯಗಳಲ್ಲಿ ಟಾಸ್ ಗೆದ್ದು ಮೊದಲು ಫೀಲ್ಡಿಂಗ್ ಮಾಡಿದ ತಂಡಗಳೇ ಹೆಚ್ಚು ಗೆಲುವು ಸಾಧಿಸಿದ್ದವು.

ಬ್ಯಾಡ್ಮಿಂಟನ್: ಸಿಂಧು, ಲಕ್ಷ್ಯ ಜಯದ ಆರಂಭ

ಬಾಲಿ, ಇಂಡೊನೇಷ್ಯಾ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ, ಭಾರತದ ಪಿ.ವಿ.ಸಿಂಧು ಹಾಗೂ ಉತ್ತಮ ಲಯದಲ್ಲಿರುವ ಲಕ್ಷ್ಯ ಸೇನ್ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ.

ಮಂಗಳವಾರ ಟೂರ್ನಿಯಲ್ಲಿ ಇವರಿಬ್ಬರು ಎರಡನೇ ಸುತ್ತು ಪ್ರವೇಶಿಸಿದರು. ವಿಶ್ವ ಚಾಂಪಿಯನ್ ಸಿಂಧು ಅವರು ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ 21–15, 21–19ರಿಂದ ಥಾಯ್ಲೆಂಡ್‌ನ ಸುಪನಿದಾ



ಪಿ.ವಿ.ಸಿಂಧು

ಕೇಟ್‌ಥೊಂಗ್ ಸವಾಲು ಮೀರಿದರು. ಕೇವಲ 43 ನಿಮಿಷಗಳಲ್ಲಿ ಅವರು ಜಯ ಒಲಿಸಿಕೊಂಡರು.

ಮೊದಲ ಸುತ್ತಿನ ಸಿಂಗಲ್ಸ್ ಹಣಾಹಣಿಯಲ್ಲಿ ಲಕ್ಷ್ಯ ವಿಶ್ವದ 10ನೇ ರ‍್ಯಾಂಕಿನ ಆಟಗಾರ, ಜಪಾನ್‌ನ ಕಂಟಾ ಸುನೆಯಮಾ ಅವರನ್ನು ಮಣಿಸಿದರು. ಭಾರತದ ಆಟಗಾರನಿಗೆ 21-17, 18-21, 21-17ರಿಂದ ಜಯ ಒಲಿಯಿತು.

ಆರ್ಚರಿ: ಫೈನಲ್‌ಗೆ ಭಾರತ

ಢಾಕಾ (ಪಿಟಿಐ): ಉತ್ತಮ ಸಾಮರ್ಥ್ಯ ತೋರಿದ ಭಾರತದ ಪುರುಷ, ಮಹಿಳಾ ಮತ್ತು ಮಿಶ್ರ ವಿಭಾಗದ ತಂಡಗಳು ಏಷ್ಯನ್ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿವೆ.

ಕಾಂಪೌಂಡ್ ವಿಭಾಗದ ಸೆಮಿಫೈನಲ್‌ಗಳಲ್ಲಿ ಸೋತ ಪುರುಷ, ಮಹಿಳಾ ಮತ್ತು ಮಿಶ್ರ ತಂಡಗಳೂ ಕನಿಷ್ಠ ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಳ್ಳಲಿವೆ.

ಅಂಕಿತಾ ಭಕತ್, ಮಧು ವೇದ್ವಾನ್ ಹಾಗೂ ರಿಧಿ ಅವರಿದ್ದ ಮಹಿಳೆಯರ ತಂಡವು ಸೆಮಿಫೈನಲ್ ಹಣಾಹಣಿಯಲ್ಲಿ 6–0ಯಿಂದ ವಿಯೆಟ್ನಾಂ ತಂಡವನ್ನು ಸೋಲಿಸಿತು. ಪುರುಷರ ರಿಕರ್ವ್ ನಾಲ್ಕರ ಘಟ್ಟದ ಪಂದ್ಯದಲ್ಲಿ ಪ್ರವೀಣ್ ಜಾಧವ್, ಕಪಿಲ್ ಹಾಗೂ ಪಾರ್ಥ್ ಸಾಳುಂಕೆ ಅವರಿದ್ದ ತಂಡವು ಬಾಂಗ್ಲಾದೇಶವನ್ನು ಮಣಿಸಿತು.



ಸ್ವಿಟ್ಜರ್ಲೆಂಡ್ ತಂಡದ ನೊಹಾ ಒಕಾಫೋರ್ ಸಂಭ್ರಮ –ಎಎಫ್‌ಪಿ ಚಿತ್ರ

ಫಿಫಾ ವಿಶ್ವಕಪ್‌ಗೆ ಸ್ವಿಟ್ಜರ್ಲೆಂಡ್ ಪ್ರವೇಶ

ಪ್ಯಾರಿಸ್ (ಎಎಫ್‌ಪಿ): ಸ್ವಿಟ್ಜರ್ಲೆಂಡ್ ಫುಟ್‌ಬಾಲ್ ತಂಡವು ಮುಂದಿನ ವರ್ಷ ಕತಾರ್‌ನಲ್ಲಿ ನಡೆಯಲಿರುವ ಫಿಫಾ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಿಟ್ಟಿಸಿದೆ.

ಸೋಮವಾರ ಇಲ್ಲಿ ನಡೆದ ಅರ್ಹತಾ ಟೂರ್ನಿಯ ಹಣಾಹಣಿಯಲ್ಲಿ ಸ್ವಿಸ್ ತಂಡವು 4–0 ಗೋಲುಗಳಿಂದ ಬಲ್ಗೇರಿಯಾ ವಿರುದ್ಧ ಜಯಿಸಿತು.

ತಂಡದ ಒಕಾಫೋರ್ (48ನೇ ನಿಮಿಷ), ವಾರ್ಗಸ್ (57ನೇ ನಿ), ಇಟೆನ್ (72ನೇ ನಿ) ಮತ್ತು ಫ್ರೆಯುಲೆರ್ (90 + 1) ತಂಡದ ಗೆಲುವಿನ ರೂವಾರಿಗಳಾದರು.

ಕ್ರಿಕೆಟ್: ಮೂರು ಐಸಿಸಿ ಟೂರ್ನಿಗಳಿಗೆ ಭಾರತ ಆತಿಥ್ಯ

ದುಬೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು 2023ರಿಂದ 2031ರ ಅವಧಿಯಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ ಮೂರು ವಿಶ್ವಮಟ್ಟದ ಟೂರ್ನಿಗಳಿಗೆ ಆತಿಥ್ಯ ವಹಿಸಲಿದೆ. ಪಾಕಿಸ್ತಾನವು ಸುದೀರ್ಘ ಕಾಲದ ನಂತರ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಗೆ ಆತಿಥ್ಯ ವಹಿಸಲಿದೆ.

2026ರ ಟಿ20 ವಿಶ್ವಕಪ್, 2029ರಲ್ಲಿ ಚಾಂಪಿಯನ್ಸ್ ಟ್ರೋಫಿ ಮತ್ತು 2031ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗಳಿಗೆ ಭಾರತ ಆತಿಥ್ಯ ವಹಿಸುವುದು 2025ರಲ್ಲಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯನ್ನು ಪಾಕ್ ಆಯೋಜಿಸಲಿದೆ.

2009ರಲ್ಲಿ ಲಾಹೋರ್‌ನಲ್ಲಿ ಶ್ರೀಲಂಕಾ ಕ್ರಿಕೆಟ್ ತಂಡದ ಬಸ್ ಮೇಲೆ ಭಯೋತ್ಪಾದನಾ ದಾಳಿ ನಡೆದ ನಂತರ ಪಾಕಿಸ್ತಾನದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಟೂರ್ನಿಗಳು ಹೆಚ್ಚು ನಡೆಯಲಿಲ್ಲ. ವಿಶ್ವಮಟ್ಟದ ಆಯೋಜನೆಯ ಅವಕಾಶವೂ ಆ ದೇಶಕ್ಕೆ ಲಭಿಸಿರಲಿಲ್ಲ. ಇತ್ತೀಚೆಗೆ ನ್ಯೂಜಿಲೆಂಡ್ ಮತ್ತು ಇಂಗ್ಲೆಂಡ್ ತಂಡಗಳೂ ಪಾಕ್‌ನಲ್ಲಿ ಸರಣಿ ಆಡಲು ನಿರಾಕರಿಸಿದ್ದವು.

‘ಪಾಕ್ ಕ್ರಿಕೆಟ್ ಮಂಡಳಿಯು ಬಹುತೇಕ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಟೂರ್ನಿ ಆಯೋಜಿಸುವ ಸಾಧ್ಯತೆ ಹೆಚ್ಚಿದೆ’ ಎಂದು ಮೂಲಗಳು ತಿಳಿಸಿವೆ.

ಐಸಿಸಿಯು ಮಂಗಳವಾರ ಬಿಡುಗಡೆ ಮಾಡಿರುವ ವೇಳಾಪಟ್ಟಿ ಅನ್ವಯ 2024ರಲ್ಲಿ ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಜಂಟಿಯಾಗಿ ಟಿ20 ವಿಶ್ವಕಪ್ ಆಯೋಜಿಸಲಿವೆ. ಉತ್ತರ ಅಮೆರಿಕವು ಆತಿಥ್ಯ ವಹಿಸಲಿರುವ ಪ್ರಥಮ ವಿಶ್ವಮಟ್ಟದ ಟೂರ್ನಿ ಇದಾಗಲಿದೆ.

‘11 ಪೂರ್ಣಾವಧಿ ಸದಸ್ಯ ರಾಷ್ಟ್ರಗಳು ಮತ್ತು ಮೂರು ಸಹ ಸದಸ್ಯ ರಾಷ್ಟ್ರಗಳನ್ನು ಎರಡು ಏಕದಿನ ವಿಶ್ವಕಪ್, ನಾಲ್ಕು ಟಿ20 ವಿಶ್ವಕಪ್ ಮತ್ತು ಎರಡು ಚಾಂಪಿಯನ್ಸ್ ಟ್ರೋಫಿ ಟೂರ್ನಿಗಳನ್ನು ಆಯೋಜಿಸಲು ಆಯ್ಕೆ ಮಾಡಲಾಗಿದೆ’ ಎಂದು ಐಸಿಸಿ ಅಪೆಕ್ಸ್ ಮಂಡಳಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಾಸ್ಟರ್ ಅಥ್ಲೀಟ್ ಯೋಗೇಂದ್ರಗೆ ಸನ್ಮಾನ

ಬೆಂಗಳೂರು: ಅಂತರರಾಷ್ಟ್ರೀಯ ಮಾಸ್ಟರ್ ಅಥ್ಲೀಟ್ ಎಂ. ಯೋಗೇಂದ್ರ ಅವರನ್ನು ಕರ್ನಾಟಕ ಕಸ್ಟಮ್ಸ್ ಮತ್ತು ಜಿಎಸ್‌ಟಿ ಇಲಾಖೆಯ ಸಾಂಸ್ಕೃತಿಕ ಸೊಸೈಟಿ ಮತ್ತು ಕನ್ನಡ ಸಂಘವು ಗೌರವಿಸಿತು.

ಯೋಗೇಂದ್ರ ಅವರ ಕ್ರೀಡಾ ಸಾಧನೆಗಳನ್ನು ಪರಿಗಣಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕಸ್ಟಮ್ಸ್ ವಿಭಾಗದ ಮುಖ್ಯ ಆಯುಕ್ತರು ಮತ್ತು ಜಿಎಸ್‌ಟಿ ಪ್ರಧಾನ ಮುಖ್ಯ ಆಯುಕ್ತರಾದ ರಂಜನಾ ಝಾ ಮತ್ತು ಆಯುಕ್ತ ಜಿ ನಾರಾಯಣಸ್ವಾಮಿ ಅವರು ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಮಾಸ್ಟರ್ ಅಥ್ಲೀಟ್ ಎಂ. ಯೋಗೇಂದ್ರ ಅವರನ್ನು ಕರ್ನಾಟಕ ಕಸ್ಟಮ್ಸ್ ಮತ್ತು ಜಿಎಸ್‌ಟಿ ಇಲಾಖೆಯ ಸಾಂಸ್ಕೃತಿಕ ಸೊಸೈಟಿ ಮತ್ತು ಕನ್ನಡ ಸಂಘದ ಪರವಾಗಿ ಆಯುಕ್ತ ಜಿ. ನಾರಾಯಣಸ್ವಾಮಿ ಸನ್ಮಾನಿಸಿದರು.

ಕೈಗಡಿಯಾರದ ಬೆಲೆ ₹1.5 ಕೋಟಿ: ಪಾಂಡ್ಯ

ಮುಂಬೈ (ಪಿಟಿಐ): ‘ನಾನು ದುಬೈನಿಂದ ತಂದಿರುವ ಕೈಗಡಿಯಾರದ ಬೆಲೆಯು ₹ 5 ಕೋಟಿಯಲ್ಲ. ₹ 1.5 ಕೋಟಿ ಮಾತ್ರ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುದ್ದಿಗಳು ಸತ್ಯಕ್ಕೆ ದೂರವಾಗಿವೆ’ ಎಂದು ಭಾರತ ಕ್ರಿಕೆಟ್ ತಂಡದ ಆಟಗಾರ ಹಾರ್ದಿಕ್ ಪಾಂಡ್ಯ ಸ್ಪಷ್ಟಪಡಿಸಿದ್ದಾರೆ.

‘ಸೋಮವಾರ ಬೆಳಿಗ್ಗೆ ಮುಂಬೈ ವಿಮಾನ ನಿಲ್ದಾಣಕ್ಕೆ ಬಂದ ತಕ್ಷಣ ಕಸ್ಟಮ್ಸ್ ಕೌಂಟರ್‌ಗೆ ಹೋಗಿ ಎಲ್ಲ ಸಾಮಗ್ರಿಗಳ ಪಟ್ಟಿಯನ್ನು ನೀಡಿದ್ದೇನೆ. ಕೈಗಡಿಯಾರದ ನೈಜ ಮೌಲ್ಯವನ್ನೂ ಬಹಿರಂಗಪಡಿಸಿದ್ದೇನೆ’ ಎಂದಿದ್ದಾರೆ.

‘ಕ್ರಿಪ್ಟೊ ಕರೆನ್ಸಿಗಳಲ್ಲಿ ಹೂಡಿಕೆಗೆ ಸಾಲ’


ಮುಂಬೈ (ಪಿಟಿಐ): ‘ಕ್ರಿಪ್ಟೊ ಕರೆನ್ಸಿಗಳಲ್ಲಿ ಹೂಡಿಕೆ ಮಾಡುವ ಖಾತೆ ತೆರೆಯಲು ಸಾಲ ನೀಡಲಾಗುತ್ತಿದೆ ಎಂಬ ಮಾಹಿತಿ ಬಂದಿದೆ’ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಅವರು ಮಂಗಳವಾರ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಕ್ರಿಪ್ಟೊ ಕರೆನ್ಸಿಗಳಲ್ಲಿ ನಡೆಯುವ ವಹಿವಾಟಿನ ಮೊತ್ತವು ಹೆಚ್ಚಾಗಿದ್ದರೂ ಅವುಗಳ ವಹಿವಾಟು ನಡೆಸುತ್ತಿರುವ ಖಾತೆಗಳ ಸಂಖ್ಯೆಯನ್ನು ಉತ್ಪ್ರೇಕ್ಷೆ ಮಾಡಿ ಹೇಳಲಾಗುತ್ತಿದೆ ಎಂದಿದ್ದಾರೆ.

ದೇಶದ ಆರ್ಥಿಕ ಸ್ಥಿರತೆಗೆ ಧಕ್ಕೆ ತರಬಲ್ಲ ಸಂಗತಿಗಳು ಕ್ರಿಪ್ಟೊ ಕರೆನ್ಸಿಗಳ ಜೊತೆ ಬೆಸೆದುಕೊಂಡಿವೆ ಎಂದು ಅವರು ಹೇಳಿದ್ದಾರೆ. ‘ಆಂತರಿಕವಾಗಿ ವಿಸ್ತೃತ ಚರ್ಚೆ ನಡೆಸಿದ ನಂತರ ಆರ್‌ಬಿಐ, ಹಣಕಾಸಿನ ಸ್ಥಿರತೆಗೆ ಸಂಬಂಧಿಸಿದಂತೆ ಕಳವಳ ಇದೆ ಎಂದು ಹೇಳಿತ್ತು. ಈ ಬಗ್ಗೆ ಇನ್ನಷ್ಟು ಆಳವಾದ ಚರ್ಚೆಗಳು ಬೇಕು’ ಎಂದು ದಾಸ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕ್ರಿಪ್ಟೊ ಕರೆನ್ಸಿಗಳಲ್ಲಿ ಹಣ ಹೂಡಿಕೆ ಮಾಡಿದರೆ ಭಾರಿ ಮೊತ್ತದ ಲಾಭ ಸಿಗುತ್ತದೆ ಎಂದು ಜನರನ್ನು ತಪ್ಪು ದಾರಿಗೆ ಎಳೆಯಲಾಗುತ್ತಿದೆ ಎಂಬ ಕಳವಳ ಇದೆ.

ಷೇರುಪೇಟೆ ವಹಿವಾಟು ▼396



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,109
ಇಂದಿನ ಅಂತ್ಯ	17,999
▼	110
ದಿನದ ಕನಿಷ್ಠ	17,958

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ


ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465

ಕಚ್ಚಾ ಸಾಮಗ್ರಿಗಳ ಬೆಲೆ ಏರಿಕೆ ಪರಿಣಾಮ

ಮನೆಗಳ ಬೆಲೆ ಶೇ 15ರವರೆಗೆ ಹೆಚ್ಚಳ ಸಂಭವ: ಕ್ರೆಡಾಯ್

ನವದೆಹಲಿ (ಪಿಟಿಐ): ಕಳೆದ ಒಂದು ವರ್ಷದಲ್ಲಿ ಸಿಮೆಂಟ್ ಮತ್ತು ಕಬ್ಬಿಣದ ಬೆಲೆ ದೊಡ್ಡ ಪ್ರಮಾಣದಲ್ಲಿ ಏರಿಕೆ ಆಗಿರುವುದಕ್ಕೆ ಭಾರತೀಯ ರಿಯಲ್ ಎಸ್ಟೇಟ್ ನಿರ್ಮಾಣಗಾರರ ಸಂಘಗಳ ಒಕ್ಕೂಟವು (ಕ್ರೆಡಾಯ್) ಆತಂಕ ವ್ಯಕ್ತಪಡಿಸಿದ್ದು, ನಿರ್ಮಾಣಕ್ಕೆ ಸಂಬಂಧಿಸಿದ ಕಚ್ಚಾ ಸಾಮಗ್ರಿಗಳ ಬೆಲೆಯು ನಿಯಂತ್ರಣಕ್ಕೆ ಬರದೇ ಇದ್ದರೆ ಮನೆಗಳ ಬೆಲೆಯು ಶೇಕಡ 10–15ರವರೆಗೆ ಏರಿಕೆ ಆಗಬಹುದು ಎಂದು ಹೇಳಿದೆ.

ಬೆಲೆ ಏರಿಕೆ ನಿಯಂತ್ರಿಸುವ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮತ್ತು ನಿರ್ಮಾಣ ಕಚ್ಚಾ ಸಾಮಗ್ರಿಗಳ ಮೇಲಿನ ಜಿಎಸ್‌ಟಿ ಕಡಿಮೆ ಮಾಡುವಂತೆ ಒಕ್ಕೂಟವು ಸರ್ಕಾರವನ್ನು ಒತ್ತಾಯಿಸಿದೆ. 2020ರ ಜನವರಿಯಿಂದ ನಿರ್ಮಾಣ



ಕ್ಷೇತ್ರದ ಕಚ್ಚಾ ಸಾಮಗ್ರಿಗಳ ಬೆಲೆಯು ನಿರಂತರವಾಗಿ ಹೆಚ್ಚಾಗುತ್ತ ಇದೆ ಎಂದು ಅದು ಹೇಳಿದೆ. 13 ಸಾವಿರಕ್ಕೂ ಹೆಚ್ಚಿನ ನಿರ್ಮಾಣಗಾರರು ಒಕ್ಕೂಟದ ಸದಸ್ಯರಾಗಿದ್ದಾರೆ.

ಲಾಕ್‌ಡೌನ್ ಮತ್ತು ಕಾರ್ಮಿಕರ ಕೊರತೆಯ ಕಾರಣಗಳಿಂದಾಗಿ ನಿರ್ಮಾಣ ಚಟುವಟಿಕೆಗಳು ಪೂರ್ಣಗೊಳ್ಳುವುದು ವಿಳಂಬ ಆಗಿದೆ. ಇದರ ಪರಿಣಾಮವಾಗಿ ನಿರ್ಮಾಣ ವೆಚ್ಚವು ಕಳೆದ 18 ತಿಂಗಳಲ್ಲಿ ಶೇ 10ರಿಂದ ಶೇ 15ರಷ್ಟು ಏರಿಕೆ ಕಂಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕಳೆದ ಒಂದು ವರ್ಷದಲ್ಲಿ ಕಚ್ಚಾ ಸಾಮಗ್ರಿಗಳ ಬೆಲೆಯು ಹೆಚ್ಚಾಗುತ್ತಲೇ ಇದೆ. ಸದ್ಯದ ಮಟ್ಟಿಗೆ ಬೆಲೆಯಲ್ಲಿ ಇಳಿಕೆ ಆಗುವ ಅಥವಾ ಬೆಲೆಯು ಒಂದು ಹಂತಕ್ಕೆ ಸ್ಥಿರವಾಗುವ ಯಾವುದೇ ಸೂಚನೆ ಕಂಡುಬರುತ್ತಿಲ್ಲ ಎಂದು ಕ್ರೆಡಾಯ್‌ನ ಅಧ್ಯಕ್ಷ ಹರ್ಷವರ್ಧನ್ ಪಟೋಡಿಯಾ ಹೇಳಿದ್ದಾರೆ. ನಿರ್ಮಾಣಗಾರರು ಹೆಚ್ಚುವರಿ ವೆಚ್ಚವನ್ನು ಹೊರುವುದು ಕಷ್ಟವಾಗಲಿದ್ದು, ಅದನ್ನು ಮನೆ ಖರೀದಿಸುವವರ ಮೇಲೆ ವರ್ಗಾಯಿಸಲಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಅಡುಗೆ ಎಣ್ಣೆ ಆಮದು ಮೌಲ್ಯ ಶೇ 63ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ಆಮದು ಮೌಲ್ಯವು 2020–21ರ ಮಾರುಕಟ್ಟೆ ವರ್ಷದಲ್ಲಿ ಶೇ 63ರಷ್ಟು ಹೆಚ್ಚಾಗಿದ್ದು ₹ 1.17 ಲಕ್ಷ ಕೋಟಿಗೆ ತಲುಪಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಹೇಳಿದೆ.

2019–20ರ ಮಾರುಕಟ್ಟೆ ವರ್ಷದಲ್ಲಿ ಆಮದು ಮೌಲ್ಯವು ₹ 71,625 ಕೋಟಿ ಇತ್ತು. ಆದರೆ, ಆಮದು ಪ್ರಮಾಣವು 131.75 ಲಕ್ಷ ಟನ್‌ಗಳಿಂದ 131.31 ಲಕ್ಷ ಟನ್‌ಗೆ ಅಲ್ಪ ಇಳಿಕೆ ಕಂಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಂಸ್ಕರಿಸಿದ ಎಣ್ಣೆ ಆಮದು 4.21 ಲಕ್ಷ ಟನ್‌ನಿಂದ 6.86 ಲಕ್ಷ ಟನ್‌ಗೆ ಏರಿಕೆ ಆಗಿದೆ. ಕಚ್ಚಾ ಎಣ್ಣೆ ಆಮದು ಪ್ರಮಾಣವು 127.54 ಲಕ್ಷ ಟನ್‌ನಿಂದ 124.45 ಲಕ್ಷ ಟನ್‌ಗೆ ಇಳಿಕೆ ಕಂಡಿದೆ.

ಅಡುಗೆ ಎಣ್ಣೆಗಳ ದಾಸ್ತಾನು ಅಕ್ಟೋಬರ್ 1ರ ಅಂತ್ಯಕ್ಕೆ 20.05 ಲಕ್ಷ ಟನ್‌ನಷ್ಟು ಇತ್ತು. ಇದು ನ. 1ರ ಅಂತ್ಯಕ್ಕೆ 17.05 ಲಕ್ಷ ಟನ್‌ಗೆ ಇಳಿಕೆ ಆಗಿದೆ.


ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	515
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	46000-51500
ಕಾರ್ಕಳ	
ಹೊಸತು	35000-42500
ಹಳತು	46000-51500
ಪುತ್ತೂರು	
ಕೋಕ	10500-26000
ಹೊಸತು	27500-42500
ಸಿದ್ದಾಪುರ	
ಬಿಳಿಗೋಟು	33899-41019
ಚಾಲಿ	43069-47909
ಕೋಕ	23699-35012
ಹೊಸಚಾಲಿ	32299-36599
ಕೆಂಪುಗೋಟು	24499-36799
ರಾಶಿ	45169-47299
ತಟ್ಟಿಬೆಟ್ಟೆ	30190-39199
ಶಿರಸಿ	
ಬೆಟ್ಟೆ	33669-44799
ಬಿಳಿಗೋಟು	24616-43199
ಚಾಲಿ	43699-48208
ರಾಶಿ	39599-48899
ಯಲ್ಲಾಪುರ	
ಬಿಳಿಗೋಟು	30321-42169
ಚಾಲಿ	42699-48140
ಕೋಕ	22899-33299
ಕೆಂಪುಗೋಟು	28561-38819
ರಾಶಿ	45519-53429
ರಾಮನಗರ ರೇಷ್ಮೆ	
ಮಿಶ್ರತಳಿ	258-530
ದ್ವಿತಳಿ	313-706

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13850	13600	---	302.75 ಸೆಂಟ್ಸ್
ಎಸಿ	6075	---	---	
ಆರ್‌ಪಿ	6150	---	6300	ಲಂಡನ್
ಆರ್‌ಸಿ	3640	3250	3700	2264 ಡಾಲರ್ಸ್

ರಾತ್ರಿ 10ರ ಮುಂಬೈ ಧಾರಣೆ ಲಭ್ಯವಾಗಿಲ್ಲ



ಯು.ಪಿ.ಪುರಾಣಿಕ್

ಬ್ಯಾಂಕಿಂಗ್-ಹಣಕಾಸು ತಜ್ಞ

uppuranik@gmail.com

ಮೊ: 9448015300

ಚಿಕ್ಕಣ್ಣ, ಚಿಕ್ಕಮಗಳೂರು

- **ಪ್ರಶ್ನೆ: ಸಹಕಾರಿ ಬ್ಯಾಂಕ್‌ಗಳು ಹಾಗೂ ಸಹಕಾರಿ ಸಂಘಗಳಲ್ಲಿ ಅವಧಿ ಠೇವಣಿ ಇರಿಸಿದರೆ ಬಡ್ಡಿ ವರಮಾನದಲ್ಲಿ ತೆರಿಗೆ ಮುರಿಯುವುದಿಲ್ಲ ಎಂದು ನನ್ನ ಸ್ನೇಹಿತರು ಹೇಳುತ್ತಿದ್ದಾರೆ. ಅಲ್ಲಿ ಇರಿಸಿದ ಹಣಕ್ಕೆ ರಾಷ್ಟ್ರೀಕೃತ ಬ್ಯಾಂಕ್‌ಗಳಂತೆ ಭದ್ರತೆ ಇದೆಯೇ? ಇದ್ದರೆ ಎಷ್ಟು ಮೊತ್ತದ ತನಕ?**

ಉತ್ತರ: ಸಹಕಾರಿ ಬ್ಯಾಂಕ್‌ಗಳಲ್ಲಿ ಬಹಳ ಹಿಂದೆ ಠೇವಣಿ ಮೇಲೆ ಎಷ್ಟೇ ಬಡ್ಡಿ ಬಂದರೂ ಮೂಲದಲ್ಲಿ ತೆರಿಗೆ ಮುರಿಯುತ್ತಿರಲಿಲ್ಲ. ಆದರೆ ಈಗ ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕ್‌ಗಳಂತೆ ಇಲ್ಲಿಯೂ ತೆರಿಗೆ ಕಡಿತ ಮಾಡುತ್ತಾರೆ. ಈ ಕಾನೂನು ಸಹಕಾರಿ ಸಂಘಗಳಿಗೆ ಅನ್ವಯಿಸುವುದಿಲ್ಲ. ಇಲ್ಲಿ ಠೇವಣಿಯ ಮೇಲೆ ಎಷ್ಟೇ ಬಡ್ಡಿ ಬಂದರೂ ಮೂಲದಲ್ಲಿ ತೆರಿಗೆ (ಟಿಡಿಎಸ್) ಮುರಿಯುವುದಿಲ್ಲ. ಸಹಕಾರಿ ಬ್ಯಾಂಕ್‌ಗಳು ತಾವು ಸ್ವೀಕರಿಸಿದ ಠೇವಣಿಯ ಮೇಲೆ ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮದಲ್ಲಿ (DICGC) ವಿಮೆ ಮಾಡಿಸಿದ್ದಲ್ಲಿ, ಅಂತಹ ಸಹಕಾರಿ ಬ್ಯಾಂಕ್ ದಿವಾಳಿ ಆದರೆ ₹ 5 ಲಕ್ಷದವರೆಗೆ ‘ಡಿಐಸಿಜಿಸಿ’ನಲ್ಲಿ ಹಣ ವಾಪಸ್ ಪಡೆಯಬಹುದು. ಸಹಕಾರಿ ಸಂಘಗಳಿಗೆ ‘ಡಿಐಸಿಜಿಸಿ’ನಲ್ಲಿ ವಿಮೆ ಮಾಡಲು ಬರುವುದಿಲ್ಲ. ನೀವು ಸಹಕಾರಿ ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸುವ ಮುನ್ನ, ಆ ಬ್ಯಾಂಕ್ ತನ್ನ ಠೇವಣಿದಾರರ ಹೂಡಿಕೆಗೆ ವಿಮೆ ಮಾಡಿಸಿದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಿ.

ಗೋಪಾಲಕೃಷ್ಣ, ಮೂಡುಬಿದಿರೆ

- **ಪ್ರಶ್ನೆ: ನನಗೆ ಮೂವರು ಮಕ್ಕಳು. ಎಲ್ಲರೂ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಓದುತ್ತಾರೆ. ಶಾಲಾ ಶುಲ್ಕ, ಪುಸ್ತಕ, ವಾಹನ ಶುಲ್ಕ ಹಾಗೂ ವಾರ್ಷಿಕ ಇತರ ಖರ್ಚುಗಳನ್ನು ಸೆಕ್ಷನ್ 80ಸಿ ಆಧಾರದ ಮೇಲೆ ಕಳೆದು ತೆರಿಗೆ ಸಲ್ಲಿಸಬಹುದೇ? ಕೆಲವರು, ಇಂಗ್ಲಿಷ್ ಮಾಧ್ಯಮ ಶಾಲೆಯ ಶುಲ್ಕಕ್ಕೆ ವಿನಾಯಿತಿ ಪಡೆಯುವಂತಿಲ್ಲ ಎನ್ನುತ್ತಾರೆ. ದಯಾಮಾಡಿ ತಿಳಿಸಿರಿ.**

ಉತ್ತರ: ಸೆಕ್ಷನ್ 80ಸಿ ಆಧಾರದ ಮೇಲೆ ಇಬ್ಬರು ಮಕ್ಕಳ ಶಾಲಾ ಶುಲ್ಕ ಮಾತ್ರ ವಿನಾಯಿತಿಗೆ ಒಳಗಾಗುತ್ತದೆ. ಇಂಗ್ಲಿಷ್ ಅಥವಾ ಯಾವುದೇ ಮಾಧ್ಯಮದಲ್ಲಿ ಓದುತ್ತಿದ್ದರೂ ವಿನಾಯಿತಿ ಪಡೆಯಬಹುದು. 80ಸಿ ಅಡಿ ವಿನಾಯಿತಿ ಪಡೆಯಲು ಇರುವ ಗರಿಷ್ಠ ಮಿತಿ ₹ 1.50 ಲಕ್ಷ ಮಾತ್ರ. ಇಬ್ಬರು ಮಕ್ಕಳ ವಾರ್ಷಿಕ ಶಾಲಾ ಶುಲ್ಕ ₹ 1.50 ಲಕ್ಷದೊಳಗೆ ಇದ್ದಲ್ಲಿ ಉಳಿದ ಹಣ ಪಿಎಫ್, ಪಿಪಿಎಫ್ ಅಥವಾ 5 ವರ್ಷಗಳ ಬ್ಯಾಂಕ್–ಅಂಚೆ ಕಚೇರಿ ಠೇವಣಿಯಲ್ಲಿ ಇರಿಸಿ ವಿನಾಯಿತಿ ಪಡೆಯಬಹುದು. ಒಟ್ಟಿನಲ್ಲಿ ಇಬ್ಬರು ಮಕ್ಕಳ ಶಾಲಾ ಶುಲ್ಕ ಹೊರತುಪಡಿಸಿ, ಪುಸ್ತಕ–ವ್ಯಾನ್–ಸಮವಸ್ತ್ರ ಅಥವಾ ಇನ್ನಿತರ ಮಕ್ಕಳ ಖರ್ಚುಗಳು ವಿನಾಯಿತಿಗೆ ಒಳಗಾಗುವುದಿಲ್ಲ.

ರಾಮಚಂದ್ರಯ್ಯ, ಹೊಸಕೋಟೆ

- **ಪ್ರಶ್ನೆ: ನನ್ನ ವಯಸ್ಸು 72 ವರ್ಷ. ನನ್ನ ಹೆಂಡತಿಯ ವಯಸ್ಸು 65 ವರ್ಷ. ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ನಮಗೆ 30X40 ಅಳತೆಯ 4 ನಿವೇಶನ ಹಾಗೂ ಬಾಡಿಗೆ ಬರುವ ಮೂರು ಮನೆಗಳಿವೆ. ನಮ್ಮ ವಾಸಕ್ಕೆಂದು ಒಂದು ಮನೆ ಇದೆ. ನಮಗೆ ಪಿಂಚಣಿ ಅಥವಾ ಬೇರೆ ಆದಾಯ ಇಲ್ಲ. ಬಾಡಿಗೆಯಿಂದಲೇ ಜೀವನ. ಮಕ್ಕಳು ಮದುವೆಯಾಗಿ ಬೇರೆ ಬೇರೆ ಕಡೆ ಜೀವನ ನಡೆಸುತ್ತಿದ್ದಾರೆ. ಮನೆ ಮಾತ್ರ ಇಟ್ಟುಕೊಂಡು 4 ನಿವೇಶನ ಮಾರಾಟ ಮಾಡಬೇಕೆಂದಿದ್ದೇನೆ. ಕ್ಯಾಪಿಟಲ್ ಗೇನ್ ಟ್ಯಾಕ್ಸ್ ಬಗ್ಗೆ ತಿಳಿಸಿ.**

ಉತ್ತರ: ನಾಲ್ವರು ಮಕ್ಕಳಿಗೆ ಸರಿಯಾಗಿ ನಾಲ್ಕು ನಿವೇಶನ, 4 ಮನೆ ಇರುವುದನ್ನು ನೋಡಿದರೆ ನೀವು ನಿಜವಾಗಿಯೂ ಭಾಗ್ಯವಂತರು. ನೀವು ಮತ್ತು ನಿಮ್ಮ ಹೆಂಡತಿ ಜೀವನಕ್ಕೆ ಮೂರು ಮನೆಯಿಂದ ಬರುವ ಬಾಡಿಗೆ ಸಾಕಾಗುವುದಾದರೆ ನಿವೇಶನಗಳನ್ನು ಎಂದಿಗೂ ಮಾರಾಟ ಮಾಡಬೇಡಿ. ನಿಮ್ಮ ಮಕ್ಕಳಿಗೆ ಯಾವುದೇ ಉದ್ಯೋಗ, ನೌಕರಿ ಇದ್ದರೂ ಅವು ಸ್ಥಿರವಲ್ಲ. ನೀವು ಬಿಟ್ಟು ಹೋಗುವ ನಿವೇಶನ ಮತ್ತು ಮನೆ ಮಾತ್ರ ಸ್ಥಿರ. ನಿವೇಶನಗಳಿಗೆ ಈಗ ಸಿಗುವ ಬೆಲೆ ಚೆನ್ನಾಗಿದೆ ಎಂದುಕೊಂಡರೂ ಈಗ ಮಾರಾಟ ಮಾಡಿ ಬರುವ ಹಣ, ಹಣದ ಬಡ್ಡಿಯಿಂದ ಮುಂದೆ ನೀವಾಗಲಿ ನಿಮ್ಮ ಮಕ್ಕಳಾಗಲಿ ನಿವೇಶನ ಕೊಳ್ಳಲು ಸಾಧ್ಯವಿಲ್ಲ. ಒಂದು ವೇಳೆ ಮಾರಾಟ ಮಾಡಿದರೆ ನಿವೇಶನ ಕೊಂಡ ಮೊತ್ತಕ್ಕೆ ನಿವೇಶವನ್ನು ಖರೀದಿಸಿದ ಅವಧಿಯಿಂದ ಮಾರಾಟ ಮಾಡುವ ಅವಧಿಯವರೆಗೆ ಬರುವ ಹಣದುಬ್ಬರದ ಅಂಶಕ್ಕೆ ತೆರಿಗೆ ಇರುವುದಿಲ್ಲ. ಉಳಿದ ಮೊತ್ತಕ್ಕೆ ಶೇಕಡ 20ರಷ್ಟು ತೆರಿಗೆ ಕೊಡಬೇಕಾಗುತ್ತದೆ. ಎನ್‌ಎಚ್‌ಎಐ/ಆರ್‌ಇಸಿ ಬಾಂಡ್‌ಗಳಲ್ಲಿ ಕೂಡ ಮಾರಾಟ ಮಾಡಿ ಬಂದ ಹಣವನ್ನು ಇರಿಸಬಹುದು. ಆದರೆ ಗರಿಷ್ಠ ಮಿತಿ ₹ 50 ಲಕ್ಷ. ಆಸ್ತಿ ಮಾರಾಟ ಮಾಡುವುದನ್ನು ಮರೆತು ನಾಲ್ಕು ಜನ ಮಕ್ಕಳಿಗೆ ನಿಮ್ಮ ಕಾಲಾನಂತರ ಅನುಕೂಲ ಆಗುವಂತೆ ಉಯಿಲು ಬರೆಯಿರಿ. ಏನಾದರೂ ಗೊಂದಲ ಇದ್ದರೆ ಕರೆ ಮಾಡಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಉದ್ಯೋಗ ವಾಣಿ

